ಕರ್ಮವೀರ

ಹುಬ್ಬಳ್ಳಿ ತಾ. ೧೧-೧೧-೪

ಸಂಪುಟ ೨೦] [ಸಂಚಿಕೆ

ಜನಪ್ರಿಯ ಸಚಿತ್ರ ವಾರಪತ್ರಿಕೆ

ಸಂಪಾದಕರು:
ಹ. ರಾ. ಪುರೋಹಿತ]

[ಸಂಸ್ಥಾಪಕರು— ನಿರ್ದೇಶಕರು:
ರಂ. ರಾ. ದಿವಾಕರ

ನಮಗಿಂತ ಕೆಳಗಿನವರೊಡನೆ ಜೀವಿಸುವುದರಲ್ಲೇ ಜೀವನದ ನಿಜವಾದ ಸೌಖ್ಯವಿದೆ.

—ಥ್ಯಾಕರೇ

★

ನಮ್ಮ ಭವಿಷ್ಯತ್ತಿನ ಬಣ್ಣ ತಿಳಿಯಬೇಕಾದರೆ ನಮ್ಮ ವರ್ತಮಾನದಲ್ಲಿ ಅರಸಬೇಕು; ನಮ್ಮ ಅದೃಷ್ಟತಾರೆಯನ್ನು ಗುರುತಿಸಬೇಕಾದರೆ ನಮ್ಮ ಹೃದಯಗಳನ್ನು ಪರೀಕ್ಷಿಸಬೇಕು.

—ಕ್ಯಾನನ್ ಫರಾರ್

★


ಕ್ರುದ್ಧರನ್ನು ಪ್ರೇಮದಿಂದಲೂ ದುಷ್ಟರನ್ನು ಸದ್ಭಾವದಿಂದಲೂ ಲೋಭಿಗಳನ್ನು ಔದಾರ್ಯದಿಂದಲೂ ವಿದ್ಯಾವಾದಿಗಳನ್ನು ಸತ್ಯದಿಂದಲೂ ಗೆಲ್ಲಬೇಕು.

—ಧಮ್ಮಪದ

★

ಬಹುಕಾಲ ಸುಪ್ತಾವಸ್ಥೆಯಲ್ಲಿ ಅಡಗಿದ್ದು, ಅಥವಾ ಮೊದಮೊದಲು ವಿರಳವಾಗಿ ಉಪಯೋಗಿಸಲ್ಪಟ್ಟೇ ಕೊನೆಗೊಮ್ಮೆ ನಿರಂಕುಶಾಧಿಕಾರ ಜನರ ಮೇಲೆ ವ್ಯಾಪಿಸುವದು.

—ಬರ್ಕ



ಸಂಧ್ಯಾ - ವರುಣ

ಅರಬೀ ಸಮುದ್ರದ ತೀರ ಉದ್ದಕ್ಕೂ ಸೊಬಗಿನ ಕಣಜ. ಸಂಜೆಯ ಹೊತ್ತಂತೂ ಅಲ್ಲಿ ಸಂಧ್ಯಾ—ವರುಣ ಕೇಳಿ ಹೃದಯವನ್ನು ಸೆರೆಹಿಡಿದುಬಿಡುತ್ತದೆ. ಗೋಕರ್ಣದ ಜಟಾಯು ತೀರ್ಥದಿಂದ ತೆಗೆದ ಸಂಧ್ಯಾ ಸಮುದ್ರದ ಈ ನೋಟದ ಮೋಹಕತೆಗೆ ಯಾರು ಮನಸೋಲಲಿಕ್ಕಿಲ್ಲ?

ಹೊಲಸಾಗುವಳಿ ಕಾಯದೆಯ ಲೋಪ ದೋಷ

—ಪುಟ ೪



KARMAVEER KANNADA ILLUSTRATED WEEKLY HUBLI

ಚಿಕ್ಕಕತೆ

ಶ್ರೀನು

ಎಸ್. ಗಣೇಶ ಬಿಸಲೂಣಕರ, ಹೆಬ್ರಿ

"ಶೀನೂ—ಓ ಶೀನೂ! ಕೊಠಡಿಯೊಳಗಿನ ಟ್ರಂಕ—ಬೆಡ್ಡಿಂಗುಗಳನ್ನು ಸರಿಯಾಗಿರಿಸಿ ಎಲ್ಲಾ ವ್ಯವಸ್ಥೆ ಮಾಡಿರುವಿಯಷ್ಟೆ? ಈಗ ಜಟಕಾ ಬರಬಹುದು!" ಹೀಗೆನ್ನುತ್ತ ರಮಾಬಾಯಿಯವರು ಕನ್ನಡಿಯ ಮುಂದೆ ನಿಂತು ತಮ್ಮ ಕೂದಲನ್ನು ಬಾಚಿಕೊಳ್ಳುತ್ತಿದ್ದರು. ಅಂದು ಮುಂಜಾನೆಯಿಂದ ಅವರು ಬಹಳ ಗಡಿಬಿಡಿಯಲ್ಲಿದ್ದರು. ಕಾರಣ, ಅವರ ದೊಡ್ಡ ಮಗಳಾಗಿದ್ದ ಚಂದ್ರಕಲಾ ಮತ್ತು ಹೊಸ ಅಳಿಯ ಶಂಕರರಾಯರು ಅಂದು ಹೊಸ ಹಬ್ಬಕ್ಕಾಗಿ ಬರುವವರಿದ್ದರು. ಅದರಿಂದ ಕೆಲಸದ ಹುಡುಗ ಶೀನುವಿಗೆ ಒಂದು ಕ್ಷಣವೂ ಸಹ ಬಿಡುವಿರಲಿಲ್ಲ. "ಶೀನೂ, ಕಸಗುಡಿಸು, ಆ ಬಟ್ಟಲುಗಳನ್ನು ತೊಳೆದು ತಾ. ಆ ಜಮಖಾನೆಯನ್ನು ಹಾಸಿಡು, ಫ್ಲವರ್ ಪ್ಲೇಟಿನಲ್ಲಿಡಲು ಗುಲಾಬಿ ಹೂಗಳನ್ನು ಕೊಯ್ದು ತಾ." ಹೀಗೆ ಅನೇಕ ಕೆಲಸಗಳನ್ನು ಮಾಡುವುದಕ್ಕೆ ಅವನಿಗೆ ಒಂದೇ ವೇಳೆಯಲ್ಲಿ ಹೇಳುತ್ತಲಿದ್ದರು. ಶೀನುವೂ ನಾಯಿಯ ಮರಿಯಂತೆ ಅತ್ತಿತ್ತ ಓಡಾಡುತ್ತಲೇ ಇದ್ದನು.

ಕುದುರೆಗಾಡಿಯ ಶಬ್ದ ಕೇಳಿಸಿದೊಡನೆ ಮಾಧವ ಮತ್ತು ಸಣ್ಣ ಹುಡುಗಿ ಲಲಿತೆಯು, "ಅಮ್ಮಾ, ಅಕ್ಕ ಬಂದಳು! ಅಕ್ಕ ಬಂದಳು!" ಎನ್ನುತ್ತ ಮುಂದೆ ಓಡಿದರು. ರಮಾಬಾಯಿಯವರು ಬಾಗಿಲಿನ ಹತ್ತಿರ ಬಂದು ನಿಂತರು. ಶೀನು ನೀರಿನ ನಳ್ಳಿಯ ಹತ್ತಿರ ಪಾತ್ರೆಗಳನ್ನು ತೊಳೆಯುತ್ತ ಕುಳಿತಿದ್ದ. ನಳ್ಳಿಯ ನೀರಿನ ಶಬ್ದದಿಂದ ಮತ್ತು ಕೆಲಸದ ಭರಾಟೆಯಿಂದ ಅವನಿಗೆ ಜಟಕಾ ಬಂದ ಸದ್ದು ಕೇಳಿಸಲಿಲ್ಲ.

—ಚಂದ್ರಕಲಾಳ ಅಪ್ಪ ನರಸಿಂಗರಾಯರು ಮೊದಲಿಗೆ ಗಾಡಿಯಿಂದ ಇಳಿದು, ಮಗಳು ಮತ್ತು ಅಳಿಯಂದಿರಿಗೆ ಕೈಯ ಆಧಾರ ಕೊಟ್ಟು ಕೆಳಗಿಳಿಸಿದರು. "ಶೀನೂ, ಏ ಶೀನೂ..., ಶೀರಾ ಕೆಲಸದ ತುರ್ತಿನ ವೇಳೆಯಲ್ಲಿ ಹೇಗೆ ತಪ್ಪಿಸಿಕೊಳ್ಳುತ್ತಾನೆ." ರಾಯರ ಪಹಾಡಿನ ಗರ್ಜನೆಯನ್ನು ಕೇಳಿ ಶೀನು ಅಗುಳುಗಳಿಂದ ಬೂದಿ ಹಿಡಿದಿದ್ದ ಕೈಗಳನ್ನು ಹರಕು ಅಂಗಿಗೆ ಒರೆಸಿಕೊಳ್ಳುತ್ತ ವಾಯುಗತಿಯಿಂದ ರಾಯರ ಮುಂದೆ ದಾಖಲಾದ. ಸುತ್ತಲೂ ಒಮ್ಮೆ ದೃಷ್ಟಿ ತಿರುಗಿಸಿ ರಾಯರ ಅಳಿಯ ಟ್ರಂಕನ್ನು ಎತ್ತಹೋದರು. ಅದಕ್ಕೆ ಆತಂಕಿಸಿ ರಾಯರು ಹೇಳಿದರು, "ಛೆ, ಛೆ, ಇದೇನು ಶಂಕರರಾಯರೆ? ನೀವು ಈ ಭಾರವಾದ ಟ್ರಂಕನ್ನು ಎತ್ತುವುದೆ? ಈ ನಮ್ಮ ಶೀನು ಎಲ್ಲ ಸಾಮಾನುಗಳನ್ನು ವ್ಯವಸ್ಥಿತವಾಗಿ ಒಳಗೆ ಕೊಂಡು ಹೋಗುತ್ತಾನೆ. ನಾವು ಒಳಗೆ ಹೋಗೋಣ." ನಂತರ ಎಲ್ಲರೂ ಒಳಗೆ ಹೋದರು. ಗಾಡಿಯವನ ಕೈಗೆ ಎರಡು ರೂಪಾಯಿಗಳನ್ನು ಕೊಟ್ಟು ನರಸಿಂಗರಾಯರು ಅವರ ಹಿಂದಿನಿಂದ ನಡೆದರು.

ಶೀನು ಹನ್ನೆರಡು ವಯಸ್ಸಿನ ಚಿಕ್ಕಹುಡುಗ. ಆ ಅಜಸ್ರವಾದ ಟ್ರಂಕನ್ನು ನೋಡಿ ಅವನ ತಲೆ ಗಿರಗಿರನೆ ತಿರುಗಿತು. ಅವನು ಟ್ರಂಕನ್ನು ಎತ್ತುವ ಪ್ರಯತ್ನ ಮಾಡಲಾರಂಭಿಸಿದನು, ಆದರೆ ಅದು ಅಲುಗಾಡಲಿಲ್ಲ. ಒಳಗಿಂದ, "ಶೀನೂ, ಕೈಕಾಲು ತೊಳೆಯಲು ನೀರು ತಾರೋ". ಎಂಬ ಗರ್ಜನೆ ಕೇಳಿಸುತ್ತಿತ್ತು. ಆ ಮುದುಕ ಜಟಕಾವಾಲನು ದರ್ಪದಿಂದ, "ಏ ಹುಡುಗಾ ಬೇಗನೆ ಸಾಮಾನು ತೆಗೆಯುವಿಯೊ ಇಲ್ಲವೊ? ನಾನು ಹೀಗೆ ಎಷ್ಟೊತ್ತು ಕಾಡು ನಿಲ್ಲಲಿ?" ಎಂದು ನುಡಿದನು.

"ಅಯ್ಯಾ, ಈ ಪೆಟ್ಟಿಗೆ ಬಹಳ ಭಾರವಿದೆ ನೋಡಿ. ತುಸು ಕೈ ಕೊಡುತ್ತೀರಾ?" ನುರುಕಿದ ಧ್ವನಿಯಿಂದ ಶೀನು ಬಿನ್ನವಿಸಿಕೊಂಡ.

"ಹ್ಞಾ, ನಾನೇನು ಕೂಲಿಯವನೇ?" ಮುದುಕ ನಂಜು ನುಡಿದ.

"ಅಲ್ಲ ಅಜ್ಜಾ, ನಾನೇ ಕೆಲಸದವನು. ಆದರೆ ನನ್ನಿಂದ ಇದನ್ನು ಎತ್ತಲಾಗುವದಿಲ್ಲ. ನೀವು ಉಪಕಾರ ಮಾಡಿದಂತಾಗುತ್ತದೆ."

ಶೀನು ಕಣ್ಣಲ್ಲಿ ನೀರು ತುಂಬಿ ಹೇಳಿದ. ಮುದುಕನಿಗೂ ತನ್ನ ಬಾಲ್ಯದ ನೆನಪು ಹುಟ್ಟಿತು. ಅವನಿಗು ಸಹ ಹಿಂದೆ ಹೀಗೆಯೇ ದುಃಖವಾಗುತ್ತಿತ್ತು— ಚಿಕ್ಕಂದಿನಲ್ಲಿ ಮೂಟೆಗಳನ್ನು ಹೊರುವಾಗ. ಅವನಿಗೆ ಶೀನುವಿನ ಮೇಲೆ ಕರುಣೆ ಹುಟ್ಟಿತು. ನಂತರ ಅವನೇ ಟ್ರಂಕನ್ನು ಎತ್ತಿ ಮನೆಯೊಳಗೆ ಇಟ್ಟು ಬಂದನು. ಶೀನುವಿನ ಕಣ್ಣುಗಳು ಮುದುಕನಿಗೆ ಕೃತಜ್ಞತೆಯನ್ನು ಸೂಚಿಸಿದವು. ಒಳಗಿನಿಂದ ಮನೆಯೊಡತಿ, "ಶೀನೂ ಗಾಡೀವಾಲನೊಡನೆ ಇನ್ನೂ ಪಟ್ಟಾಂಗ ಮುಗಿಯಲಿಲ್ಲವೆ?" ಎಂದು ಕೂಗಿದರು. ಶೀನು ಒಳಗೆ ಓಡಿದ. ದೂರ ದೂರಕ್ಕೆ ಓಡಿಹೋಗುತ್ತಿದ್ದ ಜಟಕದ ಧ್ವನಿಯು ಅವನ ಕಿವಿಯಲ್ಲಿ ದುಮುದುಮಿಸುತ್ತಿತ್ತು. ಗಾಡಿಯವನ ಬಗ್ಗೆ ಅವನಲ್ಲಿ ಸಹಾನುಭೂತಿಯುಂಟಾಗಿತ್ತು.

ಮನೆಯೊಳಗಿನ ಎಲ್ಲ ಜನರು ಡೌಲಿನಿಂದ ಮತ್ತು ಶೀನುವಿನ ಕೆಲಸದ ಬಿಗುವಿನಿಂದ ಹೊತ್ತು ಹೇಗೆ ಕಳೆಯಿತೋ ಯಾರಿಗೂ ತಿಳಿಯಲಿಲ್ಲ. ಸಂಧ್ಯಾಕಾಲದಲ್ಲಿ ಸರ್ವರೂ ವಾಯು ಸೇವನೆಗೆಂದು ಗೋಮುಟಿ ಬೆಟ್ಟಕ್ಕೆ ಹೊರಟರು. ಹದಿನಾಲ್ಕು ವರ್ಷದ ಪ್ರೀತಿಯ ಮಾಧವ ಹಟಹಿಡಿದು ಕುಳಿತದ್ದರಿಂದ ಎಲ್ಲರ ಲಕ್ಷ್ಯ ಅವನೆಡೆಗೆ ಹೊರಳಿತು. ದೀಪಾವಳಿ ಹಬ್ಬಕ್ಕಾಗಿ ತಂದಿದ್ದ ಹೊಸ ಬೂಟ್ಸುಗಳನ್ನು ಹಾಕಿಕೊಂಡೇ ಅವನಿಗೆ ಹೋಗಬೇಕಿತ್ತು. ಆದರೆ ನಿನ್ನೆಯೇ ಅವುಗಳನ್ನು ಅವನು ನೆರೆ ಮನೆಯ ಗೆಳೆಯನಿಗೆ ತೋರಿಸಲು ಕೊಂಡು ಹೋಗಿದ್ದ. ಆದರೆ ಅದನ್ನು ಅಲ್ಲಿಯೇ ಬಿಟ್ಟು ಬಂದಿದ್ದ, ನೆನಪು ಅವನಿಗಿರಲಿಲ್ಲ.

"ಶೀನೂ... ಮಾಧವನ ಬೂಟ್ಸು ಎಲ್ಲಿವೆ?" ರಮಾಬಾಯಿಯವರು ಅರ್ಭಟಿಸಿದರು.

"ಇಲ್ಲಿಯೇ ಇದ್ದವಮ್ಮಾ." ಶೀನು ಹೇಳಿದ.

"ನಡೆ ಬೇಗನೆ ಹುಡುಕಿ ತಾ ನೋಡೋಣ." ತಾಯಿಯವರು ಅಧೀರತೆಯಿಂದ ಹೇಳಿದರು. ತುಸು ಹೊತ್ತು ಅಲ್ಲಿ ಇಲ್ಲಿ ಹುಡುಕಿದ ನಂತರ ಬೆದರಿದ ಸ್ವರದಿಂದ ಶೀನು ಹೇಳಿದ, "ಸಿಕ್ಕಲೊಲ್ಲವು ಅಮ್ಮಾ!"

"ಎಂತಹ ಮೂರ್ಖನಿದ್ದೀಯೋ. ನಿನ್ನ ಅಜಾಗರೂಕತೆಯಿಂದ ಇಂದು ಹರಿದಿನವಾಗಿ ನನ್ನ ಮಗು ಬರಿಗಾಲಿನಿಂದ ನಡೆಯುವಂತಾಯಿತು." ಅಮ್ಮನವರು ಸಿಡುಕಿನಿಂದ ಹೇಳಿದರು.

—ಕಡೆಗೂ ಅಕ್ಕ-ಭಾವಂದಿರು ಸಮಾಧಾನ ಹೇಳಿದ ಮೇಲೆ ಮಾಧವ ಅವರೊಡನೆ ಹೊರಡಲು ಒಪ್ಪಿದನು.

"ಶೀನೂ, ನನ್ನ ರಂಗವಲ್ಲಿಯ ಮೇಲೆ ಲಕ್ಷ್ಯವಿರಲಿ! ನೆರೆಯ ಹುಡುಗರು ಬಂದು ಕೆಡಿಸಿಬಿಟ್ಟಾರು. ಎಲ್ಲಿಯಾದರೂ ಕೆಟ್ಟಿತೆಂದರೆ ನಾನು ನಿನ್ನ ಮೇಲೆ ಕೋಪಗೊಂಡೇನು." ಚಂದ್ರಕಲೆಯು ನಸು ನಗುತ್ತ ಪ್ರೇಮದಿಂದ ಹೇಳಿದಳು.

"ನನ್ನ ಗಾಳಿಪಟವನ್ನು ಯಾರಾದರೂ ಮುಟ್ಟಿ ಹಾಳು ಮಾಡಿದರೆ ನಿನ್ನ ಹಲ್ಲು ಮುರಿದೇನು ತಿಳಿದಿರಲಿ!" ಮೊದಲೇ ಸಿಟ್ಟಿಗೆದ್ದಿದ್ದ ಮಾಧವ ಬಿಕ್ಕುವ ಸ್ವರದಿಂದ ಕೂಗಾಡಿದ.

"ಮತ್ತು ಇಲ್ಲಿ ಕೇಳು ಶೀನು; ನಾವು ಬರಲಿಕ್ಕೆ ತಡವಾಗಬಹುದು. ಕತ್ತಲಾದೊಡನೆ ಮನೆಯೊಳಗೆಲ್ಲ ದೀಪಗಳನ್ನು ಉರಿಸು. ನಂತರ ಒಲೆಹೊತ್ತಿಸಿ, ನಾನು ತೆಗೆದಿಟ್ಟ ಅಕ್ಕಿ ಮತ್ತು ಬೇಳೆಗಳನ್ನು ತೊಳೆದು ಬೇಯಲು ಹಾಕು. ತರಕಾರಿಯನ್ನು ಹೆಚ್ಚಿ ಇಡು. ನನಗೆ ಅಡಿಗೆಗೆ ಸುಲಭವಾಗುತ್ತದೆ. ಸುಮ್ಮನೆ ಅತ್ತಿತ್ತ ತಿರುಗಾಡಿ ವೇಳೆ ಕಳೆಯಬೇಡ!" ಯಜಮಾನಿಯು ಅಧಿಕಾರವಾಣಿಯಿಂದ ನುಡಿದರು

"ನಮಗೆ ಭೋಜನವಾದ ಮೇಲೆ ತೆಗೆದುಕೊಳ್ಳಲು ಅರ್ಧ ಡಝನ್ ಲೇಮನಿನ ಬಾಟ್ಲಿಗಳನ್ನು ತಂದಿಡು ಮತ್ತು ಆ ಅಣ್ಣಾಜಿ ರಾಯರನ್ನು ರಾತ್ರಿ ಇಸ್ಪೀಟು ಆಡಲಿಕ್ಕೆ ಬರುವಂತೆ ಆಮಂತ್ರಿಸು." ನರಸಿಂಗರಾಯರು ಸಾಹುಕಾರೀ ದರ್ಪದಿಂದ ಅಪ್ಪಣೆ ವಿಧಿಸಿದರು.

ಪ್ರತ್ಯೇಕವಾಗಿ ತಮ್ಮ ತಮ್ಮ ರೀತಿಗಳಲ್ಲಿ ಶೀನುವಿಗೆ ಹುಕುಂ ಬಿಟ್ಟ ನಂತರ ಆ ಪಂಗಡವು ಆನಂದದಿಂದ ಮನೆಯ ಹೊರಗೆ ಬಿದ್ದಿತು. ಈಗ ಮನೆಯಲ್ಲಿ ಶೀನು ಒಬ್ಬಂಟಿಗನಾದನು. ಹುಕುಂ ಬಿಡಲು ಯಾರೂ ಇಲ್ಲ. ಹೀಗಿದ್ದಂತೆ ಅವನಿಗೆ ತನ್ನ ಜೀವನದ ನೆನಪು ಹುಟ್ಟಿತು, ಇಂದು ಹಬ್ಬದ ದಿನ. ಆದರೆ ಶೀನುವಿನ ಅಣ್ಣ, ತಾಯಿ-ತಂದೆ, ತಮ್ಮಂದಿರು ಎಲ್ಲಿದ್ದಾರೆ? ದೂರದ ಒಂದು ಹಳ್ಳಿಯಲ್ಲಿ. ಮಾಧವ ಶೀನುವಿಗಿಂತ ಎರಡು-ಮೂರು ವರ್ಷಕ್ಕೆ ಹಿರಿಯವನು. ಆದರೆ ಅವನು ಚಿಕ್ಕವನೆಂದು ಶೀನು ಅವನನ್ನು ಪ್ರೀತಿಯಿಂದ ಕಾಣಬೇಕು. ಬೆಳಿಗ್ಗೆ ಲಲಿತೆಯನ್ನು ಶಾಲೆಗೆ ಬಿಟ್ಟು ಬರಬೇಕು. ಮಧ್ಯಾಹ್ನ ಮಾಧವನಿಗೆ ಶಾಲೆಗೆ ಹಾಲನ್ನು ಕೊಟ್ಟು ಬರಬೇಕು. ಸಾಯಂಕಾಲ ಲಲಿತೆಯನ್ನು ಶಾಲೆಯಿಂದ ಮನೆಗೆ ಕರೆ ತರಬೇಕು.

ಇಲ್ಲಿ ತನ್ನನ್ನು ಯಾರೂ ಅಕ್ಕರೆಯಿಂದ ನೋಡುವವರಿಲ್ಲವೆಂದು ಅವನ ಮುಗ್ಧ ಹೃದಯಕ್ಕೆ ತಿಳಿದಿತ್ತು. ಹಾಗೆಂದೇ ಅವನು ಖಿನ್ನತೆಯಿಂದ ಮತ್ತು ಭೀತಿಯಿಂದ ತನ್ನ ಕೆಲಸಕ್ಕೆ ತೊಡಗಿದ.

ರಾತ್ರಿ ಎಂಟು ಹೊಡೆಯುವಾಗ ಮನೆಯವರು ನಗುತ್ತ, ಮಾತನಾಡುತ್ತ ಮರಳಿ ಬಂದರು. ಶೀನುವು ಅಡಿಗೆಯ ಎಲ್ಲ ತಯಾರು ಮಾಡಿ ಇಟ್ಟಿದ್ದರಿಂದ ಅಡಿಗೆಯು ಮತ್ತು ಊಟದ ಕಾರ್ಯಕ್ರಮವು ಬಹುಬೇಗನೆ ಪೂರೈಸಿತು. ಆಮಂತ್ರಿಸಿದಂತೆ ಅಣ್ಣಾಜಿ ರಾಯರು ಇಸ್ಪೀಟು ಆಡಲು ಆಗಮಿಸಿದ್ದರು. ಕೈಮೇಲೆ ನೀರು ಬಿದ್ದೊಡನೆ ಎಲ್ಲರೂ ಬಂದು ಕೊಠಡಿಯಲ್ಲಿ ಸೇರಿದರು. ತುಸು ಹೊತ್ತಿನಲ್ಲಿ ಅವರು ಇಸ್ಪೀಟು ಆಟ ಮತ್ತು ಹರಟೆಯಲ್ಲಿ ತಲ್ಲೀನರಾದರು.

ಶೀನುವು ಎಂಜಲೆಲೆಗಳನ್ನು ತೆಗೆಯುವ ಮತ್ತು ಉಳಿದ ಕೆಲಸಗಳನ್ನು ಮಾಡಿದ. ಅವನಿಗೆ ನಿದ್ರೆಯಿಂದ ಕಣ್ಣು ತೂಗುತ್ತಿತ್ತು. ಅವನು ಎಲ್ಲ ಕೆಲಸಗಳನ್ನು ಮುಗಿಸಿ ಹಾಸಿಗೆಗಳ ಸುರಳಿಗಳನ್ನು ಎತ್ತಿ ತಂದನು. ಆದರೆ ಈಗ ಕೊಠಡಿಯಲ್ಲಿ ಹಾಸಿಗೆಗಳನ್ನು ಬಿಡಿಸುವುದು ಹೇಗೆ? ಆಟದ ಭರದಲ್ಲಿ ತಲ್ಲೀನರಾಗಿದ್ದವರನ್ನು ಎಬ್ಬಿಸುವುದು ಸಾಧ್ಯವೆ? ಕಾರಣ ಅವರು ಆಟ ಮುಗಿಸಿ ಏಳುವ ತನಕ ಅವನು ಕಾಯುತ್ತ ಕುಳಿತುಕೊಳ್ಳಬೇಕಾಯಿತು. ಕಣ್ಣೊಳಗಿನ ನಿದ್ರೆ ಹಾರಿಹೋಗುವಂತೆ ಅವನು ಕಣ್ಣುಗಳನ್ನು ಚಿವುಟುತ್ತಿದ್ದನು.

× × ×

ಇಂದು ವರ್ಷ ಪ್ರತಿಪದೆಯ ದಿನ. ಬೆಳಗಿನಿಂದಲೂ ಹೊಸ ವಧು—ವರರಿಗೆ ಸ್ನಾನ, ಊಟ- ಉಪಚಾರಗಳು ನಡೆದಿದ್ದವು. ಸಾಯಂಕಾಲ ಗೋಡೆಯ ಗಡಿಯಾರ ನಾಲ್ಕು ಹೊಡೆಯುವಾಗ ಚಂದ್ರಕಲಾ ಮತ್ತು ರಮಾಬಾಯಿಯವರು "ಮಹಿಳಾ ಸಭೆ"ಗೆ ಹೋಗುವ ಅಟ್ಟಣೆಯಲ್ಲಿದ್ದರು. ಕಾರ್ಕಳದಲ್ಲಿಯ ಸಾಕ್ಷರತಾ ಪ್ರಚಾರ ಕಾರ್ಯವನ್ನು ರಮಾಬಾಯಿಯವರು ಕಳೆದ ಒಂದು ವರ್ಷದಿಂದ ಕೈಕೊಂಡಿದ್ದರು. ಅವರು ಕೈಕೊಂಡ ಈ ಕಾರ್ಯಕ್ಕಾಗಿ ಅವರನ್ನು 'ಮಹಿಳಾ ಸಭೆ'ಯವರು ಇಂದು ಸನ್ಮಾನಿಸಲು ನಿಶ್ಚಯಿಸಿದ್ದರು. ಒಬ್ಬ ಸಮಾಜವಾದೀ ಕಾರ್ಯಕರ್ತರು ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸುವವರಿದ್ದರು. ಶೀನುವಿಗೆ ರಮಾಬಾಯಿಯವರು ಹೇಳಿದರು, "ಶೀನೂ, ಲಲಿತೆಯು ಬಹಳ ಹಟ ಹಿಡಿದು ಕೂಗಿದರೆ ಅವಳನ್ನು ಸಭೆಗೆ ಕರೆದುಕೊಂಡು ಬಾ. ಆದರೆ ನೋಡು ಇದೇ ಹರಕು ಚಿಂದಿ ಬಟ್ಟೆಗಳಲ್ಲಿ ಬರಬೇಡ. ನಿನಗೆ ಹೊರಗೆ ಹೋಗುವಾಗ ಹಾಕಿಕೊಳ್ಳಲು ಕೊಟ್ಟ ಮಾಧವನ ಇಜಾರು-ಅಂಗಿಯಿಲ್ಲವೇ ಅದನ್ನೇ ಹಾಕಿಕೊಂಡು ಬಾ."

ಇತ್ತ ಮಹಿಳಾ ಸಭೆಯಲ್ಲಿ ಉತ್ಸಾಹಕ್ಕೆ ಕೊರೆಯಿರಲಿಲ್ಲ. ಅವಿವಾಹಿತ—ವಿವಾಹಿತ ತರುಣಿಯರು, ಸುಂದರಿಯರು, ಕುರೂಪಿಗಳು, ವೃದ್ಧೆಯರೆಂದು ಎಲ್ಲ ವರ್ಗದ ಸ್ತ್ರೀಯರು ಇಂದು ತಮ್ಮ ಸಿರಿಯನ್ನು ಮೆರೆಸುತ್ತ ನೂತನಾಲಂಕಾರಗಳಿಂದ ಭೂಷಿತರಾಗಿ ಬಂದಿದ್ದರು. ಸಮಾರಂಭ ಪ್ರಾರಂಭವಾಗಲು ಇನ್ನೂ ಹತ್ತು ಹದಿನೈದು ನಿಮಿಷಗಳಿದ್ದವು.

ಸಭೆಗೆ ಬಂದಿದ್ದ ಚಂದ್ರಾಬಾಯಿಯವರು ಹೇಳಿದರು, "ಏನು ಲೀಲಾಬಾಯಿಯವರೇ, ಇನ್ನೂ ಗಿರಿಜಾಬಾಯಿಯವರು ಬರಲಿಲ್ಲವೇಕೆ?"

"ಹೂಂ, ಅವರ ಯಜಮಾನರಿಗೆ ಊಟಕ್ಕೆ ತಡವಾದರೆ ಆಗುವುದಿಲ್ಲ. ಅದಕ್ಕಾಗಿ ಅವರು ಅಡಿಗೆ ಮಾಡಿಟ್ಟು ಬರುತ್ತಾರೆ. ಆದ್ದರಿಂದ ನಮ್ಮ ಕಾರ್ಯಕ್ರಮಕ್ಕೆ ತಡವಾದೀತು" ಲೀಲಾಬಾಯಿಯವರು ತಮ್ಮ ಕುತ್ತಿಗೆಯಲ್ಲಿದ್ದ ಚಂದ್ರಹಾರವನ್ನು ಕೈಯಿಂದ ತಿರುವುತ್ತ ಹೇಳಿದರು. "ಎಂತಹ ಕಷ್ಟ ಪಡುತ್ತಾರೆ! ನನಗಾದರೆ ಚಂದ್ರಾಬಾಯಿಯವರೆ ಎಂತಹ ಒಳ್ಳೇಯ ಕೆಲಸದ ಹುಡುಗ ಸಿಕ್ಕಿದ್ದಾನೆ. ಎಷ್ಟು ತಡವಾದರೂ ಗಾಬರಿಯಿಲ್ಲ. ಅವನೇ ಅಡಿಗೆ ಮಾಡುತ್ತಾನೆ. ಸಣ್ಣ ಮಗು ವಾಸಂತಿಗೆ ಹಾಲನ್ನು ಸಹ ಕುಡಿಸಿ ಮಲಗಿಸುತ್ತಾನೆ. ಹಾಗೆ ನೋಡಿದರೆ ವಯಸ್ಸಿನಲ್ಲಿ ಕೂಡ ಅವನು ಚಿಕ್ಕವನು." ಸರಳಾಬಾಯಿಯವರು ತಮ್ಮ ಮೇಲ್ಮೆಯನ್ನು ಹೊಗಳಿಕೊಂಡರು. "ಮನೆಗೆಲಸಕ್ಕೆ ಚಿಕ್ಕ ಹುಡುಗರೇ ಒಳ್ಳೆಯದು. ದೊಡ್ಡವರಾದರೆ ಊಟ-ಸಂಬಳದಿಂದ ಖರ್ಚು ವಿಪರೀತವಾಗುತ್ತದೆ.

—೧೬ನೆಯ ಪುಟಕ್ಕೆ

ದೇಶಾಂತರಗಳಿಂದ

ಅಣುಬಾಂಬಿನ ವಿನಾಶ

ಸಂ. ರಾ. ಸಂಘದ ರಾಜಕೀಯ ಸಮಿತಿಯ ಸರ್ವ ಸದಸ್ಯರ ಸಭೆಯಲ್ಲಿ ೩ ದಿನಗಳ ವರೆಗೆ ಪಾಶ್ಚಾತ್ಯ-ಪೌರಸ್ತ್ಯ ವಾದ ಪ್ರತಿವಾದ ನಡೆದ ನಂತರ ಸೋವಿಯಟ್ ಪ್ರತಿನಿಧಿ ವಿಶಿನಸ್ಕಿ ಅಣುಬಾಂಬನ್ನು ನಾಶಗೊಳಿಸಬೇಕೆಂಬ ಸಲಹೆಯನ್ನು ಸಭೆಯ ಮುಂದಿಟ್ಟನು. ಅದರ ಪ್ರಕಾರ, ಅಣುಶಕ್ತಿ ನಿರ್ಮಿತವಾದ ಶಸ್ತ್ರಾಸ್ತ್ರಗಳನ್ನೂ ಇತರ ಎಲ್ಲ ಸಾಮೂಹಿಕ ಮಾರಕ ಆಯುಧಗಳನ್ನೂ ಬಹಿಷ್ಕರಿಸಬೇಕು; ಅಣುಶಕ್ತಿಯನ್ನು ಅಂತಾರಾಷ್ಟ್ರೀಯ ನಿಯಂತ್ರಣಕ್ಕೊಳಪಡಿಸಬೇಕು. ಇದನ್ನು ಕೇಳಿ ಫ್ರೆಂಚ್ ರಕ್ಷಣಾಮಂತ್ರಿಯು ಒಂದು ಅಂತಾರಾಷ್ಟ್ರೀಯ ಸಂಸ್ಥೆಯ ವಶಕ್ಕೆ ಸದ್ಯಃ ಇರುವ ಎಲ್ಲ ಅಣುಬಾಂಬುಗಳನ್ನೂ ಒಪ್ಪಿಸಬೇಕೆಂದು ಹೇಳಿದನು.

ಫ್ರೆಂಚ್ ರಕ್ಷಣಾ ಮಂತ್ರಿ ರಮೇದಿಯರನು ವಿಶಿನಸ್ಕಿಯ ಸಲಹೆಯಿಂದ ಪಾಶ್ಚಾತ್ಯ ಪೌರಸ್ತ್ಯರಲ್ಲಿ ಒಂದು ಸಂಧಾನ ಕೈಗೂಡುವಂತಿದೆಯೆಂದು ಅದನ್ನು ಬೆಂಬಲಿಸಿ ಮಾತನಾಡಿದನು. ಬ್ರಿಟನ್ನಿನ ಸಹಾಯಕ ಮಂತ್ರಿ ಹೆಕ್ಟರ್ ಮ್ಯಾಕ್ ನೀಲನು ಸಲಹೆಯನ್ನು ಪರಿಶೀಲಿಸಲು ಸಮಯಬೇಕೆಂದು ನುಡಿದನು.

ವಿಶಿನಸ್ಕಿಯ ಮಾತುಗಳಿಂದ ರಶಿಯದಲ್ಲಿ ಅಣುಬಾಂಬುಗಳಿಲ್ಲವೆಂದು ಪಾಶ್ಚಾತ್ಯ ರಾಷ್ಟ್ರರು ತಂತಮ್ಮಲ್ಲೇ ಆನಂದವಶರಾಗಿ ನಿಟ್ಟುಸಿರನ್ನು ಬಿಡುತ್ತಿದ್ದಾರೆ. ಬಹುಶಃ ಈ ಕಾರಣದಿಂದಲೇ ಅಮೇರಿಕ ಈ ಸಮಿತಿಯನ್ನು ಸ್ವಾಗತಿಸಲು ಮುಂದೆ ಬಂದಿಲ್ಲ- ತನ್ನಲ್ಲಿರುವ ಹೆಚ್ಚಿನ ಅಣು ಬಾಂಬುಗಳನ್ನು ನಾಶ ಮಾಡಿ ನಷ್ಟಹೊಂದುವದಲ್ಲದೆ ಮಿಕ್ಕ ರಾಷ್ಟ್ರಗಳಿಗಿಂತ ಬಲಾಢ್ಯವೆಂಬ ತೃಪ್ತಿ ಮತ್ತು ಸುರಕ್ಷಿತತೆಯ ಭಾವ ಇಲ್ಲದಂತಾಗುವದೆಂದು ಅಮೇರಿಕ ಚಿಂತಿಸತೊಡಗಿದೆ.

ವರ್ಣಭೇದ ನಿರಾಸ

ಪ್ಯಾರಿಸ್ಸಿನಲ್ಲಿ ನಡೆದ ಸಂ. ರಾ. ಸಂಘದ ಸಭೆಯಲ್ಲಿ ಹಿಂದುಸ್ತಾನದ ಮುಖ್ಯ ಪ್ರತಿನಿಧಿ ಶ್ರೀಮತಿ ವಿಜಯಲಕ್ಷ್ಮಿ ದ. ಆಫ್ರಿಕದ ಏಶಿಯಾಟಿಕ್ ಮಸೂದೆಯ ಮೇಲೆ ಮಾತನಾಡುತ್ತ ದ. ಆಫ್ರಿಕನ ಪಾರ್ಲಿಮೆಂಟಿನಲ್ಲಿ ತೃತೀಯವಾಚನ ನಡೆದ ಏಶಿಯಾಟಿಕ್ ಮಸೂದೆ ಅಲ್ಲಿಯ ಸುಮಾರು ೧೨½ ಲಕ್ಷ ಹಿಂದೀಯರಿಗಿರುವ ಪ್ರಾತಿನಿಧ್ಯದ ಹಕ್ಕನ್ನು ತೆಗೆದುಹಾಕುತ್ತದೆ ಎಂಬುದರತ್ತ ಸೆಳೆದು, ವರ್ಣದ್ವೇಷದ ವಿರುದ್ಧ ಹಿಂದುಸ್ತಾನ ಅಜಸ್ರ ಹೋರಾಟ ನಡೆಸುವುದೆಂದೂ ದ. ಆಫ್ರಿಕದಲ್ಲಿಷ್ಟೇ ಅಲ್ಲ ಇಡಿ ಪ್ರಪಂಚದಲ್ಲೇ ಆ ಸಮರವನ್ನು ಸಾಗಿಸುವುದೆಂದೂ ಸಾರಿದರು.

ದ. ಆಫ್ರಿಕ ಮತ್ತು ಭಾರತದ ಪ್ರಶ್ನೆ ಬಂದಾಗ ಬಲವಾಗಿ ವಾದಿಸಲು ಹಿಂದೀ ಪ್ರತಿನಿಧಿಮಂಡಲ ಸಿದ್ಧತೆ ನಡೆಸುತ್ತಿದೆ. ಕಳೆದ ವರ್ಷ ಇಷ್ಟ ಕ್ರಮವನ್ನು ಕೈಗೊಳ್ಳಲಾರದ ಸಂ. ರಾ. ಸಂಘವೀಗ ಹೊಸ ಶೀಘ್ರಗತಿಯ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಭಾರತ ಸಂಘವನ್ನು ಕೇಳಿಕೊಂಡಿದೆ. ಪ್ರಶ್ನೆ ಬಹು ಮುಖ್ಯವಾದದೆಂದೂ ಸಂಘದ ಪುರಸ್ಕಾರ ಅದಕ್ಕೆ ಸಿಗಬೇಕೆಂದೂ ಶ್ರೀಮತಿ ವಿಜಯಲಕ್ಷ್ಮಿಯವರು ಸಾಧಿಸುವರೆಂದು ತಿಳಿಯುತ್ತದೆ.

ರಿಪಬ್ಲಿಕನ್ನರ ವಿದೇಶ ನೀತಿ

ಅಮೇರಿಕದ ರಿಪಬ್ಲಿಕನ್ ಪಕ್ಷದ ಅಧ್ಯಕ್ಷಪದದ ಹುರಿಯಾಳೆನಿಸಿದ ಥಾಮಸ್ ಡ್ಯೂಯಿ ತನ್ನ ಪಕ್ಷದ ವಿದೇಶ ನೀತಿಯನ್ನು ಆಗಲೆ ಸಾರಿದ್ದಾನೆ. ಅದರಲ್ಲಿ ಅವನು ಸಂ. ರಾ. ಸಂಘಕ್ಕೆ ತಮ್ಮ ಬೆಂಬಲವಿದೆಯೆಂದೂ ಪಶ್ಚಿಮ ಯುರೋಪಿನ ಪುನರುದ್ಧಾರಕ್ಕೆ ನೆರವೀಯುವುದಾಗಿಯೂ ಹೇಳಿದ್ದಾನೆ. ಪಶ್ಚಿಮ ಯುರೋಪಿನ ಒಕ್ಕೂಟವು ಕಮ್ಯೂನಿಜಮ್ಮಿನ ವಿರುದ್ಧ ಕಟ್ಟುವ ಕೋಟೆಯೆಂದು ಹೇಳುತ್ತ ಅವನು ಸರ್ವ ರಾಷ್ಟ್ರಗಳ ಸಂಘವೆನಿಸುವ ಸಂ. ರಾ. ಸಂಘಕ್ಕೆ ಬೆಂಬಲವೀಯುವೆನೆಂಬುದು ವ್ಯಾಪತಿಯೆನಿಸುತ್ತದೆ.

ಅಮೇರಿಕದ ಸಂ. ಸಂಸ್ಥಾನವನ್ನು ಎಲ್ಲ ರಾಷ್ಟ್ರಗಳಿಗಿಂತ ಹೆಚ್ಚು ಬಲಿಷ್ಠವನ್ನಾಗಿ ಮಾಡುವ ಆಶ್ವಾಸನವನ್ನೂ ಡ್ಯೂಯಿ ಕೊಟ್ಟಿದ್ದಾನೆ. ಇದರಿಂದ ಕಮ್ಯೂನಿಜಮ್ಮನ್ನು ನಿರ್ಮೂಲ ಮಾಡುವ ಆತುರ ಹೆಚ್ಚಿ ಅವನ ಅಧ್ಯಕ್ಷತೆಯ ಕಾಲದಲ್ಲಿ ಕಾಲು ಕೆರೆದು ರಶಿಯದೊಡನೆ ಜಗಳ ತೆಗೆದು ಮೂರನೆಯ ಜಾಗತಿಕ ಯುದ್ಧವನ್ನು ಆಮಂತ್ರಿಸಬಹುದಾದ ಸಂದರ್ಭವೂ ಬರುತ್ತದೆ. ಆಗ ಸಂ. ರಾ. ಸಂಘದ ಗತಿ ಏನು? ಚೀನಕ್ಕೆ ಸಹಾಯವಿತ್ತು ಡ್ಯೂಯಿ ಅಲ್ಲೂ ರಶಿಯದ ವಿರುದ್ಧ ಒಂದು ಕೋಟೆ ಕಟ್ಟುವನಂತೆ. ಇದೆಲ್ಲ ಶುಭ ಲಕ್ಷಣವೆನ್ನಲು ಬರದು. ಶಾಂತಿಯ ಮಾತು ಬಾಯಲ್ಲೇ ಉಳಿದು ಸಂ. ರಾ. ಸಂಘದ ಸದಸ್ಯರು ತಂತಮ್ಮ ಮನೆಯಲ್ಲೇ ಉಳಿದು "ಯಥಾ ಪೂರ್ವಮಕಲ್ಪಯತ್" ಎಂಬಂತೆ ಪುನಃ ಯುದ್ಧದ ಬೆಂಗಾಲಿ ಬೀಸುವಂತಹ ಪರಿಸ್ಥಿತಿ ಡ್ಯೂಯಿಗೆ ಬೇಕಾಗಿರಬಹುದೇ?

ದಂಗೆಗಾರರ ಶರಣಾಗತಿ

ಬಾಂಕಾಕಿನ ಮಾರ್ಶಲ್ ಪೈಬುಲ್ ಸಾಂಗ್ ಕ್ರಾಮನ ಸರಕಾರವನ್ನು ಉರುಳಿಸಲು ದಂಗೆಗಾರರು ಪ್ರಯತ್ನ ನಡೆಸಿದರೆಂದೂ ಆ ಪ್ರಯತ್ನದಲ್ಲಿ ಸಯಾಮಿನ ಸಂರಕ್ಷಣಾ ಮಂತ್ರಿಖಾತೆಯನ್ನು ವಶಪಡಿಸಿಕೊಂಡರೆಂದೂ ಆದರೆ ಸರಕಾರದ ದಲಗಳು ದಂಗೆಗಾರರನ್ನು ಸೋಲಿಸಿ ಓಡಿಸಿದವೆಂದೂ ತಿಳಿಯುತ್ತದೆ.

೧೯೪೬ ರಲ್ಲಿ ಸಯಾಮಿ ಅರಸ ಆನಂದನನ್ನು ಕೊಲೆ ಮಾಡಿದ ಮೂವರನ್ನು ಬಿಡಿಸಿಕೊಳ್ಳುವುದೇ ದಂಗೆಗಾರರ ಮುಖ್ಯೋದ್ದೇಶವಾಗಿತ್ತೆಂದು ಮಾರ್ಶಲ್ ಸಾಂಗ್ ಕ್ರಾಮನ್ ಹೇಳಿದನು. ಅತೃಪ್ತ ಸೈನಿಕರೂ ಈ ದಂಗೆಗೆ ನೆರವಾದರೆಂದು ಸುದ್ದಿ.


ದಂಗೆಗಾರರಲ್ಲಿ ಅನೇಕರನ್ನು ಹಿಡಿಯಲಾಗಿದೆಯೆಂದೂ ಪರಿಸ್ಥಿತಿ ಸಂಪೂರ್ಣ ಹಿಡಿತದಲ್ಲಿ ಇರುವುದೆಂದೂ ತಿಳಿದು ಬಂದಿದೆ.

ಅರಬ ಲೀಗಿನಲ್ಲಿ ಒಡಕು

ಈಜಿಪ್ಟಿನ ಒಂದು ವರದಿಯ ಪ್ರಕಾರ ಹೊಸದಾಗಿ ಸ್ಥಾಪಿತವಾದ ಪಾಲಿಸ್ತಾನೀ ಅರಬ ಸರಕಾರದ ವಿದೇಶ ಮಂತ್ರಿ ಜಮಾಲ್ ಎಲ್ ಹುಸೇನಿಯನ್ನು ಟ್ರಾನ್ಸಜೋರ್ಡನ್ನಿನ ಅರಸ ಅಬ್ದುಲ್ಲನು ರಾಜಧಾನಿಯಾದ ಅಮ್ಮಾನ್ನಿನಲ್ಲಿ ಹಿಡಿದುನಿಲ್ಲಿಸಿದ್ದಾನೆಂದು ತಿಳಿಯುತ್ತದೆ. ಇದಕ್ಕೆ ಅರಬ ಲೀಗು ಮತ್ತು ಅಬ್ದುಲ್ಲರಲ್ಲಿ ಉಂಟಾದ ಒಡಕೇ ಕಾರಣವೆಂದು ಹೇಳಲಾಗಿದೆ. ಅಬ್ದುಲ್ಲನು ಪಾಲಿಸ್ತಾನದ ಅರಬ್ಬೀ ಭಾಗವನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಳ್ಳಬೇಕೆಂಬ ಅಪೇಕ್ಷೆಯುಳ್ಳವನಿರಬಹುದಾದ್ದರಿಂದ ಆ ಹೊಸ ಅರಬ ಸರಕಾರಕ್ಕೆ ಮನ್ನಣೆಯನ್ನು ಕೊಡಲಿಲ್ಲ. ಇದರಿಂದ ಸಂ. ರಾ. ಸಂಘ ಸೂಕ್ಷ್ಮ ಪರಿಸ್ಥಿತಿಯನ್ನೆದುರಿಸಬೇಕಾದ ಪ್ರಸಂಗ ಉಂಟಾಗಿದೆ.



ಬ್ರಿಟನ್ನಿನ ಅಂತಾರಾಷ್ಟ್ರೀಯ ಭ್ರಾತೃಮಂದಿರದ ಉದ್ಯಾನಗಳಲ್ಲಿ ಉತ್ತೀರ್ಣರಾದ ಪ್ರಮುಖ ಭಾರತೀಯ ವಿದ್ಯಾರ್ಥಿಗಳು ಕುಳಿತಿರುವುದು.



ಬ್ರಿಟಿಷ್ ಸರಕಾರದ ಹಣಕಾಸಿನ ಮಂತ್ರಿ ಸರ್ ಸ್ಟ್ಯಾಫರ್ಡ್ ಕ್ರಿಪ್ಸರು ವಾಣಿಜ್ಯ ಸಂಘಗಳ ಸಭೆಯಲ್ಲಿ ಉತ್ಪಾದನೆ ಹೆಚ್ಚಿಸಲು ಬೋಧಿಸುತ್ತಿರುವುದು.

ವಿಚಿತ್ರ ವಿಶ್ವ

ಬಾಲ ಬೃಹಸ್ಪತಿ

ಇಂಗ್ಲೆಂಡಿನಲ್ಲಿ ಆರ್ಚಬಾಲ್ಡ್ ಮಾರ್ಗರೆಟ್ಟೆಂಬ ೧೬ ವರ್ಷ ವಯಸ್ಸಿನ ಹುಡುಗನಿದ್ದಾನೆ. ಅವನು ಲಂಡನ್ ವಿಶ್ವವಿದ್ಯಾಲಯದ ಮೆಟ್ರಿಕ್ ಪರೀಕ್ಷೆಯಲ್ಲಿ ಪಾಸಾಗಿದ್ದಾನೆ— ಅದೂ ಚೀನಿ ಭಾಷೆ ತೆಗೆದುಕೊಂಡು! ಅಷ್ಟೇ ಅಲ್ಲ, ಅವನಿಗೆ ೭ ವಿದೇಶೀ ಭಾಷೆಗಳು ಬರುತ್ತವೆ." ಅವುಗಳಲ್ಲಿ ರಶಿಯನ್, ಜಪಾನೀ ಜರ್ಮನ್ ಮತ್ತು ಗ್ರೀಕ್ ಭಾಷೆಗಳು ಮುಖ್ಯವಾದವು. ಅವನು ೮ ಮಕ್ಕಳ ತಾಯಿಯಾದ ಒಬ್ಬಳು ಕಸಗುಡಿಸುವ ಹೆಂಗಸಿನ ಒಬ್ಬ ಮಗ. ಅವನು ತನ್ನ ೬ ನೆಯ ವರ್ಷ ವಯಸ್ಸಿನಲ್ಲಿ ಫ್ರೆಂಚ್ ಕಲಿಯಲಾರಂಭಿಸಿ, ಅನಂತರ ಸಂಸ್ಕೃತ ಮತ್ತು ಲ್ಯಾಟಿನ್ ಭಾಷೆಗಳಲ್ಲೂ ತಕ್ಕಮಟ್ಟಿಗೆ ಪರಿಶ್ರಮವನ್ನು ಪಡೆದನು!

ಅರ್ಧಸ್ತ್ರೀ



ಜವ. ೧೯೨೮ರಲ್ಲಿ ಹುಟ್ಟಿದ ಇವಳ ಹೆಸರು ವರ್ಜೀನಿಯಾ ಇವಳಿಗೆ ಕೈಕಾಲುಗಳು ಹುಟ್ಟಿದಾಗಲೆ ಇಲ್ಲ.

ಬೆರಳುಗಿವಿ

೧೯೪೨ ರಲ್ಲಿ ಅಲೆಕ್ಸಾಂಡ್ರಿಯಾದ ಮೇಲಾದ ಬಾಂಬು ದಾಳಿಯಲ್ಲಿ ಉಮರ್ ಮಹಮ್ಮದ್ ಮಹಮೂದ್ ಎಂಬ ೬ ವರ್ಷದ ಹುಡುಗ ತಬ್ಬಲಿಯೂ ಕಿವುಡನೂ ಆದನು. ಆಸ್ಪತ್ರೆಯಲ್ಲಿ ಅವನು ಒಮ್ಮೆ ಮತ್ತೊಬ್ಬ ಹುಡುಗನೊಡನೆ ಜಗಳಾಡುತ್ತಿದ್ದಾಗ ಅವನ ಕುತ್ತಿಗೆಯನ್ನು ಕೈಗಳಿಂದ ಹಿಡಿದುಕೊಂಡನು. ಆಗ ಅವನು ತನ್ನ ಬೆರಳುಗಳ ಮೂಲಕ ಆ ಹುಡುಗ ಹೇಳುವದೆಲ್ಲವನ್ನೂ ಕೇಳಲು ಶಕ್ತನಾದನು.

ಆರೋಗ್ಯ ಹೊಂದಿ ಉಮರನು ಆಸ್ಪತ್ರೆಯಿಂದ ಹೊರ ಬಿದ್ದು ದೊಡ್ಡವನಾದನು. ಈಗ ಅವನಿಗೆ ೧೨ ವರ್ಷ ವಯಸ್ಸು. ಒಮ್ಮೆ ಒಬ್ಬಳು ಒಂದು ಸ್ಥಳಕ್ಕೆ ದಾರಿ ಯಾವುದೆಂದು ಕೇಳಲು ಓಡಿ ಹೋಗಿ ಅವಳ ಕುತ್ತಿಗೆಯನ್ನು ಹಿಡಿದುಕೊಂಡು ಅವಳ ಮಾತನ್ನು ಅರ್ಥ ಮಾಡಿಕೊಳ್ಳ ಹೋದಾಗ ಅವಳು ಚೀರಿದಳು, ಪೋಲೀಸರು ಹುಡುಗನನ್ನು ಹಿಡಿದುಕೊಂಡು ಹೋದರು. ಆದರೆ ದಾಕ್ತರರು ವಿಷಯ ತಿಳಿಸಿದಾಗ ಅವನನ್ನು ಬಿಟ್ಟರು.

ಈಗ ಒಬ್ಬ ವಿದ್ಯುತ್‌ತಜ್ಞನು ಉಮರನಿಗೊಂದು ಧ್ವನಿಗ್ರಾಹಕವನ್ನೂ ಧ್ವನಿವರ್ಧಕವನ್ನೂ ಕೊಟ್ಟಿದ್ದಾನೆ. ಅದನ್ನು ಹಿಡಿದುಕೊಂಡು ಅವನು ಆಡುವ ಮಾತನ್ನು ಆಡುವವರನ್ನು ಮುಟ್ಟದೆ ಯಂತ್ರಗಳ ಸಹಾಯದಿಂದಲೇ ತನ್ನ ಬೆರಳುಗಳಿಂದ ಕೇಳಬಲ್ಲವನಾಗಿದ್ದಾನೆ!

ಕತ್ತಲಿನ ಸ್ನಾನ

ಪೌಲಾಬ್ರೊಯ್ದಿ ಎಂಬ ಚೆಲುವಳ್ಳ ಚೆಲುವಿಕೆಯನ್ನು ಹೆಚ್ಚಿಸಿಕೊಳ್ಳಲು "ಗಾಳಿಯ ಸ್ನಾನ" ಮತ್ತು "ಕತ್ತಲೆಯ ಸ್ನಾನ" ವನ್ನು ಹುಡುಗಿಯರಿಗಾಗಿ ಉಪದೇಶಿಸುತ್ತಾಳೆ! ಸೂರ್ಯ ಸ್ನಾನ, ಹಿಮಸ್ನಾನ, ಮೃತ್ತಿಕಾ ಸ್ನಾನಗಳನ್ನು ಕೇಳಿದವರು ಇದರಿಂದ ಆಶ್ಚರ್ಯಪಡಬೇಕಾಗಿಲ್ಲ. ಚಿಕ್ಕ ಮಕ್ಕಳನ್ನು ಕೇಳಿದರೆ ಅನ್ನಸ್ನಾನ, ಹಲ್ಲುಸ್ನಾನಗಳನ್ನೂ ಹೇಳುತ್ತವೆ!

ಕೋಣೆಯಲ್ಲಿ ಬಾಗಿಲು ಹಾಕಿಕೊಂಡು ಕೈದೀಪ ಆರಿಸಿ ಕತ್ತಲೆ ಮುಳುಗಿ ಎಲ್ಲಭಾರವನ್ನೂ ಬಿಡುವ ಭಾವನೆಯಿಂದ ೧೫ ನಿಮಿಷ ಕುಳಿತ ಕಾಲವಿದ್ದರೆ ಕತ್ತಲೆಯ ಸ್ನಾನ ಮುಗಿಯುವುದು. ಇದರಿಂದ ನರಗಳಿಗೆ ಬಲ ಬರುವುದಂತೆ!

ಹೈದರಾಬಾದ ದಂಡಯಾತ್ರೆಗೆ ೧॥ ಕೋಟಿ ರೂ. ವೆಚ್ಚ

ಭದ್ರತಾ ಮಂಡಲದಲ್ಲಿ ಹೈದರಾಬಾದ ಸಮಸ್ಯೆಯನ್ನು ಕಿತ್ತಿಹಾಕುವ ಸಂಭವ

ಹೈದರಾಬಾದದಲ್ಲಿ ಈಗ ಶಾಂತಿ ಸುವ್ಯವಸ್ಥೆ ದಿನದಿನ ಸ್ಥಾಪಿತವಾಗುತ್ತಿದೆ. ನಿರಾಶ್ರಿತರು ಸಂಸ್ಥಾನಕ್ಕೆ ಮರುಳುತ್ತಿದ್ದಾರೆ. ಮಿಲಟರಿ ಗವರ್ನರರಾದ ಮೆ. ಜ. ಚೌಧರಿಯವರ ಅಜ್ಞೆಯಂತೆ ತಾ. ೨೬ ರೊಳಗಾಗಿ ೧೦ಲಕ್ಷ ಶಸ್ತ್ರಾಸ್ತ್ರಗಳನ್ನು ಹಿಂದೀ ಸೈನಿಕರ ವಶಕ್ಕೆ ಜನರೂ ರಜಾಕಾರರೂ ತಂದೊಪ್ಪಿಸಿದ್ದಾರೆ. ಶಸ್ತ್ರ ತಂದೊಪ್ಪಿಸುವ ಅವಧಿಯನ್ನು ಮತ್ತೆ ಒಂದು ವಾರ ಬೆಳಸಲಾಗಿದೆ. ರಜಾಕಾರರನ್ನು ಹುಡುಹುಡುಕಿ ಬಂಧಿಸಲಾಗುತ್ತಿದೆ. ಹೈದರಾಬಾದಕ್ಕೆ ಬಂದ ೭೦೦೦ ಅರಬರನ್ನು ಅರಬಸ್ತಾನಕ್ಕೆ ಅಟ್ಟುವ ವ್ಯವಸ್ಥೆಯನ್ನು ಹಿಂದಿ ಸೈನಿಕರು ಮಾಡುತ್ತಿದ್ದಾರೆಂದು ತಿಳಿಯುತ್ತದೆ. ಈ ಅರಬರನ್ನು ನಿಃಶಸ್ತ್ರ ಮಾಡಲಾಗಿದೆ. ಈ ಜನರಲ್ಲದೆ ಸುಮಾರು ೨೦೦೦ ಪಠಾಣರನ್ನು ಬಂಧಿಸಲಾಗಿದೆ.

ನಿಜಾಮರೇ ನೇರವಾಗಿ ಭದ್ರತಾ ಮಂಡಲಕ್ಕೆ ಹೈದರಾಬಾದದ ದೂರನ್ನು ಹಿಂತೆಗೆದುಕೊಂಡಿರುವದಾಗಿ ಕೇಳಿಕೊಂಡಿದ್ದರೂ ಭದ್ರತಾ ಮಂಡಲವು ಈ ವಿಷಯದ ಚರ್ಚೆಯನ್ನು ದುರಾಗ್ರಹದಿಂದ ಸಾಗಿಸುತ್ತಲೆ ಇದೆ. ಹೈದರಾಬಾದದ ಹಿಂದಿನ ಅರ್ಥ ಸಚಿವರೂ ಈಗ ಹೈದರಾಬಾದದ ದೂರನ್ನು ಭದ್ರತಾ ಮಂಡಲಕ್ಕೊಯ್ದ ಶಿಷ್ಟ ಮಂಡಳದ ಧುರೀಣರೂ ಆದ ನವಾಬ ಮೋಯಿನ ನವಾಜ ಜಂಗರು ನಿಜಾಮರ ಹಣವನ್ನು ಎತ್ತಿಹಾಕುವ ಹೊಂಚು ಹೂಡಿ, ನಿಜಾಮರು ಶರಣಾಗತರಾದ ನಂತರ ೩ ದಿನಗಳ ಮೇಲೆ ಅಂದರೆ ತಾ ೨೦ಕ್ಕೆ ಲಂಡನ ಬ್ಯಾಂಕಿನಲ್ಲಿ ಹೈದರಾಬಾದ ಸಂಸ್ಥಾನದ ಹೆಸರಿನಲ್ಲಿದ್ದ ೧ ಕೋಟಿ ೪೦ ಲಕ್ಷ ರೂಪಾಯಿಗಳನ್ನು ಪಾಕಿಸ್ತಾನದ ಲಂಡನದಲ್ಲಿಯ ಹಾಯಿ ಕಮಿಶನರರಾದ ಹಬೀಬ ರಹೀಮತುಲ್ಲಾ ಇವರ ಹೆಸರಿಗೆ ಅನಧಿಕೃತವಾಗಿ ವರ್ಗಾಯಿಸಿದ್ದಾರೆ. ಹಿಂದುಸ್ತಾನ ಸರಕಾರಕ್ಕೆ ನಿಜಾಮರು ಈ ಬಗ್ಗೆ ಮೊರೆ ಹೊಕ್ಕು ನನ್ನ ಧನವನ್ನು ಹೇಗಾದರೂ ಮಾಡಿ ತಿರುಗಿ ಕೊಡಿಸಿರಿ ಎಂದು ಕೇಳಿದ್ದಾರೆ. ಇದಲ್ಲದೆ ನವಾಬ ಮೋಯಿನ ಜಂಗರು ಭದ್ರತಾ ಮಂಡಲಕ್ಕೆ ಹೋಗುವಾಗ ಸಂಸ್ಥಾನದ ಅಪಾರ ಸಂಪತ್ತನ್ನು ನಿಜಾಮರ ೫೦ ಲಕ್ಷ ರೂ. ಬೆಲೆಯ ಆಭರಣಗಳನ್ನು ಒಯ್ದಿದ್ದಾರೆಂದೂ ಅವರು ಕುಟುಂಬ ಸಮೇತ ವಿದೇಶದಲ್ಲಿ ಧ್ವಜ ಊರಿದ್ದಾರೆಂದೂ ತಿಳಿಯುತ್ತದೆ.

ಆಡಳಿತಕ್ಕಾಗಿ ಹೊಸದಾಗಿ ಹೋದ ಹಿಂದೀ ಅಧಿಕಾರಿಗಳಿಗೆ ನಿಜಾಮರ ಬೊಕ್ಕಸದಲ್ಲಿದ್ದ ಧನವೆಲ್ಲ ಅಪವ್ಯಯವಾದದ್ದೇ ಕಂಡು ಬರುತ್ತದೆ. ಈಗ ಸಂಸ್ಥಾನದ ಆಡಳಿತವು ಹಿಂದೀ ಅಧಿಕಾರಿಗಳ ಹಿಡಿತದಲ್ಲಿ ಬಂದಿದೆ. ಘಾತಕಿಗಳನ್ನಲ್ಲದೆ ಮೊದಲಿನ ಅಧಿಕಾರಿ ವರ್ಗದಲ್ಲಿ ವಿಶೇಷ ಹೆಚ್ಚು ಕಡಿಮೆ ಮಾಡಿಲ್ಲವೆಂದು ತಿಳಿದುಬರುತ್ತದೆ. ಈ ಹೊಸ ಆಡಳಿತವನ್ನು ಹೈದರಾಬಾದದ ಪ್ರಮುಖ ಮುಸಲ್ಮಾನರೂ ಮೆಚ್ಚಿಕೊಂಡಿದ್ದಾರೆ. ಹಿಂದೀ ಸೈನಿಕರ ಜಾತ್ಯತೀತ ಧೋರಣೆಗೆ ಮತ್ತು ಜನಕಲ್ಯಾಣದ ದುಡಿಮೆಗೆ ಸ್ವತಃ ನಿಜಾಮರೂ ಬಹಳ ಸಂತೋಷಪಡುತ್ತಿದ್ದಾರೆ.

ಹೈ. ಸಂ. ಕಾಂ. ಅಧ್ಯಕ್ಷರಾದ ಸ್ವಾಮಿ ರಮಾನಂದ ತೀರ್ಥರು ತಮ್ಮ ಸಹ ಕಾರ್ಯಕರ್ತರೊಂದಿಗೆ ದಿಲ್ಲಿಯಲ್ಲಿ ಹೈದರಾಬಾದದ ಭವಿತವ್ಯದ ಬಗ್ಗೆ ಮುಖ್ಯಮಂತ್ರಿ ಪಂ. ನೆಹರೂ ಮತ್ತು ಸಂಸ್ಥಾನ ಮಂತ್ರಿ ಸರದಾರ ಪಟೇಲರೊಡನೆ ವಿಚಾರ ವಿನಿಮಯ ಮಾಡಿ, ಇನ್ನು ೬-೮ ತಿಂಗಳಲ್ಲಿ ಹೈದರಾಬಾದದಲ್ಲಿ ಜನಪ್ರಾತಿನಿಧಿಕವಾದ ಘಟನಾ ಸಮಿತಿಯು ಏರ್ಪಡುವದೆಂದೂ ಹೈದರಾಬಾದದ ಜನರೇ ಸಂಸ್ಥಾನದ ಆಗುಹೋಗುಗಳನ್ನು ಕೊನೆಯದಾಗಿ ನಿರ್ಧರಿಸತಕ್ಕವರೆಂದೂ ಸಾರಿದ್ದಾರೆ.

ಯುದ್ಧ ಕಾಲದ ರಜಾಕಾರರ ಆಹಾರವೆಂದು ಸಂಗ್ರಹಿಸಿಟ್ಟ ಚುರಮುರಿ ಮತ್ತು ಶೇಂಗಾಗಳ ಚೀಲಗಳು ರಜಾಕಾರರ ಬೀಡುಗಳಲ್ಲಿ ದೊರೆತಿವೆ. ರಜಾಕಾರರ ಸೇನಾಪತಿಯಾದ (ಸಾಲಾರ ಈ ಆಲಾ) ಮೊಹಬತ್ ಖಾನನನ್ನು ಅವನ ಮನೆಗೆ ಮುತ್ತಿಗೆ ಹಾಕಿ ಬಂಧಿಸಲಾಗಿದೆ. ದೀನದಾರ ಸಂಸ್ಥೆಯ ಮುಖಂಡನಾದ ಸಿದ್ದೀಕ ದೀನದಾರ ಮತ್ತು ಅವನ ಇನ್ನೂರು ಅನುಯಾಯಿಗಳನ್ನೂ ಬಂಧಿಸಲಾಗಿದೆ. ರಜಾಕಾರ ದೀನದಾರ ಪುಂಡರ ಜೊತೆಗೆ ಕಮ್ಯುನಿಸ್ಟರ ಸಮಾಚಾರವನ್ನೂ ಹಿಂದೀ ಸೈನಿಕರು ತೆಗೆದುಕೊಳ್ಳುತ್ತಿದ್ದಾರೆ.

ಈ ಕೆಲವು ದಿನಗಳಲ್ಲಿ ಕೊಪ್ಪಳದೊಳಗೆ ನೂರಾರು ರಜಾಕಾರರ ಬಂಧನವಾಗಿದೆಯಲ್ಲದೆ ೨ ಬಂಡಿಗೆ ಮಿಕ್ಕಿ ಶಸ್ತ್ರಗಳು ಶೋಧಿಸಲ್ಪಟ್ಟಿವೆ. ಕೊಪ್ಪಳದಲ್ಲಿ ರಜಾಕಾರರ ಮನೆಯನ್ನು ಶೋಧಿಸಲಾಗಿ ೨ ಲಕ್ಷ ರೂ. ಬೆಲೆಯ ಸಾಮಾನುಗಳು ಸಿಕ್ಕ ವಾರ್ತೆ ಬಂದಿದೆ. ಕೊಪ್ಪಳದಲ್ಲಿ ಸಂಜೆ ೭ ರಿಂದ ಬೆಳಗಿನ ೫ ರ ವರೆಗೆ ಕರ್ಫ್ಯೂ ಜಾರಿಯಲ್ಲಿದ್ದು ಅಲ್ಲಿ ಪರಿಸ್ಥಿತಿ ಶಾಂತವಾಗಿದೆ. ಕೊಪ್ಪಳದಲ್ಲಿ ತಾ ೨ ಕ್ಕೆ ಕಾಂಗ್ರೆಸ ಧುರೀಣರನ್ನು ಬಹಳ ಸಂಭ್ರಮದಿಂದ ಸ್ವಾಗತಿಸಿದರು.

ಹೈದರಾಬಾದದ ಸಮಸ್ಯೆಯನ್ನು ಹಿಂದುಸ್ತಾನ ಸರಕಾರವು ಏನೂ ರಕ್ತಪಾತವಿಲ್ಲದೆ ಬಿಡಿಸಿದ್ದಕ್ಕೆ ಅಭಿನಂದಿಸಿ ಸಿಕಂದರಾಬಾದ ಪೌರ ಸಭೆಯು ಒಂದು ಗೊತ್ತುವಳಿ ಮಾಡಿತು. ಭದ್ರತಾ ಮಂಡಲದಲ್ಲಿ ಅರ್ಜಂಟೀನಾ ಸೀರಿಯಾಗಳ ಪ್ರತಿನಿಧಿಗಳು ಹೈದರಾಬಾದದ ಬಗ್ಗೆ ಇಲ್ಲದ ಉಪದ್ವ್ಯಾಪ ಹೂಡುತ್ತಿದ್ದರೂ ಚೀನ ಮತ್ತು ಕಾನಡಾ ದೇಶಗಳ ಪ್ರತಿನಿಧಿಗಳು ಹಿಂದುಸ್ತಾನದ ನಿಲುಮೆಯನ್ನು ಸಮರ್ಥಿಸುವರೆಂದೂ ರಶಿಯಾ ಈ ವರೆಗೆ ಈ ಬಗ್ಗೆ ತಟಸ್ಥವಾಗಿದ್ದರೂ ಹಿಂದುಸ್ತಾನಕ್ಕೆ ಅನುಕೂಲವಾಗಿ ವಾದಿಸುವ ಸಂಭವವಿದೆಯೆಂದೂ ವಾರ್ತೆ ಬಂದಿದೆ. ಆದರೆ ತಾ. ೨೮ ರಂದು ಭದ್ರತಾ ಮಂಡಲದಲ್ಲಿ ಹಿಂದುಸ್ತಾನದ ಪ್ರತಿನಿಧಿಗಳಾದ ಸರ್ ರಾಮಸ್ವಾಮಿ ಮುದಲಿಯಾರರು, ಹೈದರಾಬಾದದ ಶಿಷ್ಟ ಮಂಡಳವು ಒಪ್ಪಿಸಿದ್ದ ಕಾಗದ ಪತ್ರಗಳ ಆಧಾರವನ್ನೇ ಕೊಟ್ಟು ಹಿಂದುಸ್ತಾನದ ನಿಲುಮೆ ಸರಿಯೆಂದೂ ನಿಜಾಮರನ್ನು ಲಾಯಕ ಅಲಿ ಮಂತ್ರಿ ಮಂಡಲವು ಕೇವಲ ಕೈಗೊಂಬೆಯಾಗಿ ಮಾಡಿ ಕೂಡಿಸಿತ್ತೆಂದೂ ನಿಜಾಮರ ಪ್ರಜೆಗಳನ್ನೂ ನಿಜಾಮರನ್ನೂ ಹಿಂದುಸ್ತಾನವು ಬಂಧಮುಕ್ತ ಮಾಡಿದೆಯೆಂದೂ ಭದ್ರತಾ ಮಂಡಲಕ್ಕೆ ಬಂದ ಶಿಷ್ಟ ಮಂಡಲ ಒಳಗೊಂಡು ಲಾಯಕಅಲ್ಲಿ ಮಂತ್ರಿ ಮಂಡಲ, ಅಲ್ಲಿಯ ಅಧಿಕಾರಿ ವರ್ಗ ಎಲ್ಲರೂ ಕೂಡಿನಿಜಾಮರನ್ನೂ ಸಮಸ್ತ ಸಂಸ್ಥಾನೀ ಪ್ರಜೆಗಳನ್ನೂ ವಂಚಿಸುತ್ತ ಬಂದಿರುವರಲ್ಲದೆ ರಜಾಕಾರರ ಮುಖಾಂತರ ಅನನ್ವಿತ ಅತ್ಯಾಚಾರಗಳನ್ನು ಎಸಗಿದ್ದಾರೆ. ಛತ್ತಾರಿ ನವಾಬರು ರಾಜೀನಾಮೆ ಕೊಡುವಂತೆ ಈ ಜನ ಹೇಗೆ ಬಲಾತ್ಕಾರ ಪ್ರಯೋಗ ಮಾಡಿದರೆಂಬುದಕ್ಕೆ ಮುದಲಿಯಾರರು ಹಿಂದಿನ ಗವರ್ನರ ಜನರಲರಾದ ಲಾರ್ಡ ಮೌಂಟ ಬ್ಯಾಟನ್ನರ ಪತ್ರವನ್ನೇ ಓದಿ ತೋರಿಸಿದರು. ಈ ಪತ್ರವು ಹೈದರಾಬಾದ ಪ್ರತಿನಿಧಿಗಳು ಒಪ್ಪಿಸಿದ ಕಾಗದ ಪತ್ರಗಳಲ್ಲಿಯೇ ಇತ್ತು. ಈ ಪ್ರತಿಪಾದನೆಯ ಪರಿಣಾಮವು ಭದ್ರತಾ ಮಂಡಲದ ಸದಸ್ಯರ ಮೇಲೆ ಆಗಿ ಇನ್ನು ಮೇಲೆ ಹೈದರಾಬಾದದ ಪ್ರಶ್ನೆಯನ್ನೇ ಭದ್ರತಾ ಮಂಡಲದಲ್ಲಿ ಎತ್ತಕೂಡದು ಎನ್ನುವಂತಾಯಿತೆಂದು ಅಲ್ಲಿಂದ ಬಂದ ವರದಿಯು ಹೇಳುತ್ತದೆ. ಹಿಂದುಸ್ತಾನದ ವಿರುದ್ಧ ಅತ್ಯಂತ ತೀವ್ರವಾಗಿ ವಾದಿಸಿದ ಅರ್ಜಂಟೀನಾದ ಪ್ರತಿನಿಧಿಗೆ ಈಗ ಪಶ್ಚಾತ್ತಾಪವಾಗಿದೆಯೆಂದೂ ಈ ಬಗ್ಗೆ ಅರ್ಜಂಟೀನಾದ ವಿದೇಶ ಮಂತ್ರಿಯು ಹಿಂದುಸ್ತಾನದ ಪ್ರತಿನಿಧಿಗಳಿಗೆ ಕ್ಷಮಾಯಾಚನೆ ಕೂಡ ಮಾಡಿಕೊಂಡಿದ್ದಾರೆಂದೂ ತಿಳಿಯುತ್ತದೆ.

ಹೈದರಾಬಾದದ ದಂಡಯಾತ್ರೆಯ ಬಗ್ಗೆ ಹಿಂದುಸ್ತಾನ ಸರಕಾರಕ್ಕೆ ೧॥ ಕೋಟಿ ರೂಪಾಯಿಯ ವೆಚ್ಚ ತಗಲಿದೆಯೆಂದು ವಿಶ್ವಸನೀಯವಾಗಿ ತಿಳಿದು ಬರುತ್ತದೆ.

ಕಚೇರಿಯಲ್ಲಿ ಹಗಲೇ ಕಳವು

ದಿಲ್ಲಿಯಲ್ಲಿ ಹಿಂದುಸ್ತಾನ ಕೇಂದ್ರ ಸರಕಾರದ ಉದ್ಯೋಗ ಮತ್ತು ಪೂರೈಕೆ ಶಾಖೆಯ ಕಚೇರಿಯಲ್ಲಿ ತಾ. ೧ ಕ್ಕೆ ಮುಂಜಾನೆ ಶಸ್ತ್ರಧಾರಿಗಳಾದ ಕಳ್ಳರು ಹೊಕ್ಕು ೩೩ ಸಾವಿರ ರೂ. ನಗದು ಹಣ ಅಪಹರಿಸಿಕೊಂಡು ಹೋದರು. ಕೈಯಲ್ಲಿ ಪಿಸ್ತೂಲು ಹಿಡಿದು ನಾಲ್ವರು ಒಂದು ಮೋಟಾರಿನಲ್ಲಿ ಬಂದರೆಂದೂ ಆಗ ಕಚೇರಿಯ ಪೇದೆಯು ಸಂಬಳದ ಹಣವನ್ನು ಕೋಣೆಯಿಂದ ಕೋಣೆಗೆ ಒಯ್ಯುತ್ತಿದ್ದನೆಂದೂ ಅವನಿಗೆ ಪಿಸ್ತೂಲು ತೋರಿಸಿ ಹಣದ ಚೀಲವನ್ನು ಕಸಿದುಕೊಂಡು ಓಡಿದರೆಂದೂ ತಿಳಿಯುತ್ತದೆ. ಅವರನ್ನು ಹಿಡಿಯಲು ಒಬ್ಬ ಸಿಪಾಯಿಯು ಬೆನ್ನುಹತ್ತಲು ಅವನಿಗೆ ಪುಂಡರು ಗುಂಡುಹಾಕಿದರು. ಅವನ ಹೆಗಲಿಗೆ ಗಾಯವಾಗಿದ್ದು ಚಿಕಿತ್ಸೆ ಹೊಂದುತ್ತಿದ್ದಾನೆ. ಕಳ್ಳರ ಶೋಧದ ಏತ್ತುಗಡೆಯಾಗಿದೆ.

ರೈತ ಪ್ರಪಂಚ

ಹೊಲ ಸಾಗುವಳಿ ಮಸೂದೆ

ಮುಂಬಯಿಯ ಕಂದಾಯ ಮಂತ್ರಿಗಳು ಮಂಡಿಸಿದ ಹೊಲ ಸಾಗುವಳಿ ತಿದ್ದುಪಡಿಯ ಮಸೂದೆಯು ೧೪ ದಿನಗಳ ಚರ್ಚಾನಂತರ ತಾ. ೩೦ ಕ್ಕೆ ಸ್ವೀಕೃತವಾಯಿತು. ಈ ಕಾಯದೆಯು ರೈತರ ಸಮಸ್ಯೆಯನ್ನು ಶಾಂತ ರೀತಿಯಿಂದ ಮತ್ತು ನ್ಯಾಯವಾಗಿ ಪರಿಹರಿಸುವದೆಂದು ಮಂತ್ರಿಗಳು ಹೇಳಿದರು. ಸಾಮಾಜಿಕ ಸಮತೆಯನ್ನು ನೆಲೆಗೊಳಿಸುವದು ಸರಕಾರದ ಉದ್ದೇಶವೆಂದೂ ಇದನ್ನು ಕೆಲಮಟ್ಟಿಗೆ ಈ ಮಸೂದೆ ಸಾಧಿಸುವದೆಂದೂ ಮಂತ್ರಿಗಳು ತಮ್ಮ ಧೋರಣವನ್ನು ಸಮರ್ಥಿಸಿಕೊಂಡರು. ಆದರೆ ಈ ಮಸೂದೆಯಿಂದ ಸಾಮಾಜಿಕ ವಿಷಮತೆ ಉಂಟಾಗುವದಲ್ಲದೆ ರೈತರು ಮತ್ತು ಹೊಲದೊಡೆಯರಲ್ಲಿ ಈ ವರೆಗಿದ್ದ ಸೌಹಾರ್ದ ಹೊರಟು ಹೋಗುವದೆಂದೂ ಕಾರಣವಿಲ್ಲದೆ ಈ ಮಸೂದೆಯಿಂದ ಅವರಲ್ಲಿ ಪಕ್ಷ ಭಾವವನ್ನು ಉಂಟುಮಾಡಿದಂತಾಗಿರುವದೆಂದೂ ಇದರಿಂದ ಹಳ್ಳಿಹಳ್ಳಿಗಳಲ್ಲಿ ರೈತ ಮತ್ತು ಹೊಲದೊಡೆಯರಲ್ಲಿ ಸತತ ತಿಕ್ಕಾಟ ಪ್ರಾರಂಭವಾಗಿ ಪರಸ್ಪರರು ಸಾಶಂಕ ದೃಷ್ಟಿಯಿಂದ ನೋಡುವಂತಾಗಿ ಸಾಮಾಜಿಕ ಶಾಂತಿಗೆ ಒಕ್ಕಟ್ಟಿಗೆ ಭಂಗ ಬರುವಂಥ ಪರಿಸ್ಥಿತಿಯೇ ಉಂಟಾಗುವದೆಂದೂ ಇನ್ನೊಂದು ಪಂಗಡದವರ ಅಭಿಪ್ರಾಯವಾಗಿದೆ. ಈ ಅಭಿಪ್ರಾಯದಲ್ಲಿ ಹುರುಳಿಲ್ಲದಿಲ್ಲ. ಈ ಮಸೂದೆಯು ಚುನಾವಣೆಯಲ್ಲಿ ಮತ್ತೆ ತಾವೇ ಆರಿಸಿ ಬರಬೇಕೆಂಬ ಹಂಬಲದಿಂದ ಹೂಡಿದ ಒಂದು ತಂತ್ರವೆಂದೂ ಈ ಪಂಗಡ ಹೇಳುತ್ತದೆ. ಈ ಮಸೂದೆಯ ಸಾಧಕಬಾಧಕವನ್ನು ತೂಗಿಗಡುಗಿನ ಅನುಭವಿಕ ವಕೀಲರೂ ನಿಷ್ಠಾವಂತ ಹಳೆಯ ಕಾಂಗ್ರೆಸ ಕಾರ್ಯಕರ್ತರೂ ಆದ ಶ್ರೀ ಅನಂತರಾವ ಜಾಲೀಹಾಳರು ಒಂದು ಲೇಖನ ಬರೆದಿದ್ದು ಅದರ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ.

ರೈತರಿಗೂ ಹೊಲದೊಡೆಯರಿಗೂ ನಷ್ಟ

ಈ ಹೊಲ ಸಾಗುವಳಿ ಮಸೂದೆಯಿಂದ ರೈತರಿಗೂ ಲಾಭವಿಲ್ಲ ಹೊಲದೊಡೆಯರಿಗೂ ಲಾಭವಿಲ್ಲ ಇಷ್ಟೇ ಅಲ್ಲ ರೈತರಿಗೆ ಇದರಿಂದ ಹಾನಿಯೇ ಉಂಟು ಸಾಮಾನ್ಯ ಕಾಯದೆಯಿಂದ ರೈತರಿಗೆ ಸಿಗುವ ಹಕ್ಕುಗಳನ್ನು ಕೂಡ ಈ ಕಾಯದೆಯಿಂದ ಕಸಿದುಕೊಳ್ಳಲಾಗಿದೆ. ರೈತನು ಲಾವಣಿ ಹಣ ಕೊಡಲಿಕ್ಕೆ ತಪ್ಪಿದರೂ ಸಾಮಾನ್ಯ ಕಾಯದೆಯಿಂದ ಅವನ ಲಾವಣೀ ಹಕ್ಕು ಹಾರುವದಿಲ್ಲ. ಆದರೆ ಈ ಹೊಸ ಕಾಯದೆಯಿಂದ ಅವನು ಈ ತನ್ನ ಹಕ್ಕನ್ನು ಕಳೆದುಕೊಳ್ಳುತ್ತಾನೆ. ಈ ಕಾಯದೆಯು ಅಮಲಿನಲ್ಲಿ ಬರುವ ಮೊದಲು ಹಕ್ಕುದಾರ ಪತ್ರದಲ್ಲಿ ರೈತರೆಂದು ಹಚ್ಚಿಸಿದ್ದ ಜನರೇ ನಿರಂತರ ರೈತರಾಗುವರು. ಇವರ ಹೊಲಗಳಲ್ಲಿ ದುಡಿಯುವ ಜನರು ಕಡೆತನಕ ಕೂಲಿಗಳಾಗಿಯೇ ಇರಬೇಕಾಗುವದು. ಈ ಕಾಯದೆಯಾಗುವ ಮೊದಲು ಅದೆಷ್ಟೋ ಆಳುಗಳು ರೈತರೂ ರೈತರು ಹೊಲದೊಡೆಯರೂ ಆಗಿದ್ದಾರೆ. ಇಂತಹ ಉದಾಹರಣೆ ಬೇಕಾದಷ್ಟಿವೆ. ಆದರೆ ಈಗ ಒಡೆಯರು ಒಡೆಯರೆಂದೇ ಕೂಲಿಕಾರರು ಕೂಲಿಯವರೆಂದೇ ಉಳಿಯಬೇಕಾಗುತ್ತದೆ. ಈ ಕಾಯದೆಯಿಂದ ನಾಡಿಗೆ ಅವಶ್ಯವಿದ್ದ ನೆಮ್ಮದಿ, ಸೌಹಾರ್ದಭಾವನೆ ಇಲ್ಲದಂತಾಗಿ ಏಳ್ಗೆಗೆ ಕಾಲ್ತೊಡಕು ಆಗುತ್ತದೆ. ನಿರುಪದ್ರವಿಗಳಾದ ಚಿಕ್ಕ ಚಿಕ್ಕ ಹೊಲದೊಡೆಯರಿಗೆ ಇದರಿಂದ ಹೇಳತೀರದಷ್ಟು ತೊಂದರೆಯಾಗುವದು. ಏನಾದರೂ ಲಾಭವಾಗುತ್ತಿದ್ದರೆ ಅದು ಗೌಡ ಕುಲಕರ್ಣಿ ಮಾಮಲೇದಾರ ಮೊದಲಾದ ಸರಕಾರೀ ಅಧಿಕಾರಿಗಳಿಗೆ ಹೋಗುವದು ದುಡಿವ ರೈತರಿಗೆ ಈ ಕಾಯ್ದೆಯಿಂದ ಲಾಭವಾಗದೆ ಸೋಮಾರಿಗಳಿಗೆ ಜಗಳ ತೆಗೆಯಲು ಅನುಕೂಲ ಮಾಡಿ ಕೊಟ್ಟಂತಾಗಿದೆ. ಮೈಮುರಿದು ದುಡಿಯುವ ರೈತರನ್ನು ಹೊಲದೊಡೆಯರು ಎಂದೂ ಬಿಡಿಸಬಯಸುವದಿಲ್ಲ. ಅದ್ದರಿಂದ ಇಂತಹ ಕಾಯದೆಯ ಅವಶ್ಯಕತೆಯೇ ಇದ್ದಿಲ್ಲ.

ಕೆಲವು ಪ್ರತ್ಯಕ್ಷ ಉದಾಹರಣೆಗಳು

ಈ ಕಾಯದೆಯಿಂದ ಸೋಮಾರಿಗಳಿಗೆ ಜಗಳಗಂಟರಿಗೆ ಅನುವಾಗಿದೆ ಎಂಬುದಕ್ಕೆ ಮತ್ತು ರೈತ ಹೊಲದೊಡೆಯರಲ್ಲಿ ಇಲ್ಲದ ದ್ವೇಷಾಸೂಯೆ ಬೆಳೆದ ಬಗ್ಗೆ ಒಂದೆರಡು ಪ್ರತ್ಯಕ್ಷ ಉದಾಹರಣೆಗಳನ್ನೇ ನೋಡಬಹುದು. ಇದರಿಂದ ಈ ಕಾಯದೆಯ ಜಟಿಲತೆಯ ಕಲ್ಪನೆಯು ನಷ್ಟವಾಗುವದು.

೧) ಡೋಣಿ ಊರಲ್ಲಿ ಒಬ್ಬ ರೈತನಿಗೆ ವಯಸ್ಸಾದ್ದರಿಂದ ತನ್ನ ಹೊಲದ ಕೆಲಸ ಮಾಡಲಾಗಲಿಲ್ಲ. ಅವನ ಮಕ್ಕಳು ಚಿಕ್ಕವರಿದ್ದರು. ಹುಡುಗರು ವಯಕ್ಕೆ ಬರುವ ವರೆಗೆ ಹೊಲ ಲಾವಣಿ ಕೊಟ್ಟನು. ಹುಡುಗರು ದೊಡ್ಡವರಾಗಿ ಹೊಲ ಸ್ವತಃ ಮಾಡಬೇಕೆನ್ನುವಾಗ ಈ ಕಾಯಿದೆ ಜಾರಿಯಲ್ಲಿ ಬಂತು. ಲಾವಣಿ ಮಾಡಿದವನು ಹೊಲ ಬಿಡಲೊಪ್ಪಲಿಲ್ಲ. ಅವನಿಗೆ ನೋಟೀಸು ಕೊಟ್ಟರು. ಅಷ್ಟರಲ್ಲಿ ರೈತ ಸತ್ತ. ಈಗ ಹೊಲದ ಸುತ್ತಲಿನ ಬೇಲಿಯೂ ಹೋಗಿದೆ ೩—೪ ವರ್ಷಗಳಿಂದ ಲಾವಣಿಯೂ ಇಲ್ಲ, ಹೊಲವೂ ತಾಬೇಕ್ಕೆ ಬಂದಿಲ್ಲ.

೨) ಗದುಗಿನ ರೈತನೊಬ್ಬ ಮನೆಯ ಅಡಚಣಿ, ಮಕ್ಕಳ ಜಗಳಗಳ ಮೂಲಕ ತನ್ನ ತೋಟವನ್ನು ೧—೨ ವರ್ಷಗಳ ಮಟ್ಟಿಗೆಂದು ಲಾವಣಿ ಕೊಟ್ಟು ಹೊಲಗಳನ್ನು ಮಾತ್ರ ತಾನೇ ಸಾಗುಮಾಡಿಕೊಂಡನು. ತೋಟ ಹಿಡಿದವನು ತನಗೆ ಅನಾನುಕೂಲವೆಂದು ಬೇರೊಬ್ಬನಿಗೆ ಲಾವಣಿ ಕೊಟ್ಟನು. ಈಗ ಆ ತೋಟದ ಒಡೆಯನೇ ಸ್ವತಃ ಸಾಗುವಳಿ ಮಾಡಬೇಕೆಂದರೆ ಕಬ್ಜಾ ಸಿಗದಾಗಿದೆ. ಕಚೇರಿಯಲ್ಲಿ ಇದಕ್ಕಾಗಿ ಕೆಲಸ ನಡೆಯಬೇಕು. ಆ ವರೆಗೆ ಬೆಳೆಯೂ ಇಲ್ಲ. ಕೋರ್ಟಿನ ವೆಚ್ಚವೂ ಮೈಮೇಲೆ. ಈ ಕಾಯಿದೆಯ ಮೂಲಕ ಇಲ್ಲದ ದ್ವೇಷಾಸೂಯೆ ಬೆಳೆದು ಬಂದಂತಾಯಿತಷ್ಟೇ ಅಲ್ಲ ಆರ್ಥಿಕ ನಷ್ಟವೂ ಆಯಿತು.

೩) ರೈತನೊಬ್ಬನು ಲಾವಣಿ ಕೊಟ್ಟಿದ ಹೊಲವನ್ನು ಕೊಂಡನು. ಲಾವಣಿ ಪತ್ರದಲ್ಲಿ ೧ ವರ್ಷದ ನೋಟೀಸು ಕೊಟ್ಟು ಹೊಲ ಬಿಡಿಸಬೇಕೆಂದು ಇತ್ತು. ಅದರಂತೆ ಹೊಲ ಕೊಂಡ ರೈತನು ಆ ಅವಧಿ ಮುಗಿದ ಮೇಲೆ ತನ್ನ ಹೊಲದ ಕಬ್ಜಾ ಬೇಡುತ್ತಿದ್ದಾನೆ. ಲಾವಣಿ ಮಾಡುವ ರೈತನು ಈ ಕಾಯ್ದೆಯ ದುರ್ಲಾಭ ಪಡೆದು ಹೊಲ ಬಿಡುವದಿಲ್ಲವೆಂದು ಸಾಧಿಸುತ್ತಿದ್ದಾನೆ.

ಇಂತಹ ಉದಾಹರಣೆಗಳು ಹೇರಳವಾಗಿವೆ. ಒಟ್ಟಿನ ಮೇಲೆ ಈ ಕಾಯದೆಯಿಂದ ಜಮೀನದಾರರಿಗೆ ಮತ್ತು ಚಿಕ್ಕ ಚಿಕ್ಕ ಹೊಲದೊಡೆಯರಿಗೆ ಅಷ್ಟೇ ತ್ರಾಸವಾಗಿರದೆ ಹೊಲಗಳಲ್ಲಿ ದುಡಿವ ರೈತರಿಗೂ ವಿಪರೀತ ತೊಂದರೆಯಾಗಿ ಅವರನ್ನು ನೆಲೆದಪ್ಪಿಸಿಬಿಟ್ಟಿದೆ. ಈ ಕಾಯದೆಯಿಂದ ಪ್ರಾಮಾಣಿಕರಿಗೆ ಲಾಭವಾಗದೆ ಜಗಳಗಂಟ ರೈತರಿಗೆ ಮಾತ್ರ ಲಾಭವಾಗುತ್ತದೆ, ಹೊಸದಾಗಿ ಮಾಡಿದ ತಿದ್ದುಪಡಿಯಿಂದಂತೂ ಇದ್ದ ಬಿದ್ದ ಕೆಲ ಹಕ್ಕುಗಳನ್ನೂ ರೈತರಿಂದ ಕಸಿದುಕೊಳ್ಳಲಾಗಿದೆ. ಹೊಸ ಹೊಸ ತಿದ್ದುಪಡಿ ಮಾಡುತ್ತ ಹಕ್ಕುಗಳನ್ನು ಕಸಿಯುತ್ತ ಹೋದರೆ ಜನರು ಕಾಯದೆಗಳನ್ನು ನಂಬುವದಾದರೂ ಹೇಗೆ? ಇಂದು ಕೊಟ್ಟದ್ದನ್ನು ನಾಳೆ ಕಸಿದುಕೊಳ್ಳುವಂತಹ ಕ್ಷಣಭಂಗುರವಾದ ಕಾಯದೆಯಿಂದ ಸಮಾಜದ ನೆಮ್ಮದಿ ಎಂದಾದರೂ ಉಳಿದೀತೆ?

ರೈತರು ಹೊಲಗಳನ್ನು ಸುಧಾರಿಸಬೇಕು, ಹೊಲ ಹುಟ್ಟುವಳಿಯನ್ನು ಹೆಚ್ಚಿಸಬೇಕು ಎಂದು ಸರಕಾರಕ್ಕೆ ನಿಜವಾಗಿಯೂ ಅನಿಸುತ್ತಿದ್ದರೆ, ಅರ್ಥಾತ್ ಸರಕಾರವು ಇದನ್ನೇ ಬಯಸುತ್ತದೆ, ೧] ರೈತನಿಗೆ ಲಾವಣೀಹಕ್ಕು ಅಂದರೆ ಬೆಳೆಯನ್ನು ಒತ್ತಿ ಇಡುವ ಹಕ್ಕನ್ನು ಕೊಡಬೇಕು. ೨] ಈಗಿನ ಕಾಯದೆಯಂತೆ ಹೊಲದೊಡೆಯನು ೧೦ ವರ್ಷಗಳಿಗೆ ಕಡಮೆಯಾಗದಂತೆ ಲಾವಣಿಗೆ ಹೊಲ ಕೊಡಬೇಕು. ಈ ಹತ್ತು ವರ್ಷದ ಕರಾರು ರೈತ ಮತ್ತು ಹೊಲದೊಡೆಯ ಇಬ್ಬರಿಗೂ ಅನ್ವಯಿಸಬೇಕು. ಇಲ್ಲದೆ ಹೋದರೆ ಹೊಲಗಳ ದುರಸ್ತಿಯೇ ಆಗದೆ ಹುಟ್ಟುವಳಿ ಕಡಿಮೆಯಾಗುವದು. ಸರಕಾರದ ಮೂಲ ಉದ್ದೇಶಕ್ಕೇ ಭಂಗ ಬರುವದು.

ಆದ್ದರಿಂದ ಸರಕಾರವು ಯಾವದೇ ಕಾಯದೆಯನ್ನು ಅಮಲಿನಲ್ಲಿ ತರಬೇಕಾದಾಗ ಅವಸರಪಟ್ಟು ದುಡುಕದೆ ಸಾಧಕ ಬಾಧಕಗಳನ್ನು ತೂಗಿನೋಡಬೇಕು ಎಂದು ಈ ಮೂಲಕ ಸೂಚಿಸಿದರೆ ಅದು ಅಪ್ರಾಸಂಗಿಕವಾಗಲಾರದೆಂದು ಹೇಳಬಹುದು.

ಹಿಂದುಸ್ತಾನವು ಆಕ್ರಮಣಶೀಲ ರಾಷ್ಟ್ರವಲ್ಲ

ಆದರೆ ಪರಕೀಯರ ಆಕ್ರಮಣವನ್ನು ಎಂದಿಗೂ ಸಹಿಸೆವು

ಪಾಕಿಸ್ತಾನದ ಅಪಪ್ರಚಾರಕ್ಕೆ ಖಂಡ ತುಂಡ ಉತ್ತರ
ಯುಕ್ತರಾಷ್ಟ್ರ ಸಂಘಕ್ಕೆ ಸಕಾಲಿಕ ಎಚ್ಚರಿಕೆ
ಮುಖ್ಯ ಮಂತ್ರಿ ಜವಾಹರಲಾಲ ಮತ್ತು ಉಪಮುಖ್ಯ ಮಂತ್ರಿ ಸರದಾರ ವಲ್ಲಭಭಾಯಿಯವರ ಗರ್ಜನೆ

ಹಿಂದುಸ್ತಾನದ ಮುಖ್ಯ ಮಂತ್ರಿಗಳಾದ ಪಂಡಿತ ಜವಾಹರಲಾಲರು ಮತ್ತು ಉಪ ಮುಖ್ಯ ಮಂತ್ರಿಗಳಾದ ಸರದಾರ ವಲ್ಲಭಭಾಯಿಯವರು ಕಳೆದ ವಾರ ಮಹತ್ವದ ಹಲವು ಸಮಸ್ಯೆಗಳನ್ನು ವಿವೇಚಿಸಿ ಆ ಬಗ್ಗೆ ಹಿಂದುಸ್ತಾನ ಸರಕಾರದ ಧೋರಣವನ್ನು ಸ್ಪಷ್ಟಪಡಿಸಿದರು. ಅವರು ಮುಖ್ಯವಾಗಿ ಗಾಂಧಿಜಿಯ ತತ್ವಗಳ ಹಿರಿಮೆ, ಆ ತತ್ವಗಳ ಆಚರಣೆಯಿಂದಲೆ ಜಗತ್ತಿಗೆ ಶಾಂತಿ, ಪಾಕಿಸ್ತಾನದ ಅಪಪ್ರಚಾರ, ಭದ್ರತಾ ಮಂಡಳ, ಹಿಂದುಸ್ತಾನಕ್ಕೆ ಸೈನ್ಯದ ಅವಶ್ಯಕತೆ, ಜನತೆಯ ಮತ್ತು ಕೂಲಿಕಾರರ ಕರ್ತವ್ಯ ಇವುಗಳ ಬಗ್ಗೆ ವಿವೇಚಿಸಿದರು. ಅವರ ಭಾಷಣಗಳ ಸಾರವನ್ನು ಇಲ್ಲಿ ಕೊಡಲಾಗಿದೆ.



ಮಹಾತ್ಮರ ಅಮರ ತತ್ವಗಳು

ಮಹಾತ್ಮರ ತತ್ವಗಳ ಬಗ್ಗೆ ಮುಖ್ಯ ಮಂತ್ರಿಗಳು ಈ ರೀತಿ ಹೇಳಿದರು. ಸತ್ಯವನ್ನು ಪ್ರೀತಿಸಿರಿ, ವೈಯಕ್ತಿಕ ಮತ್ತು ಸಾರ್ವಜನಿಕ ಜೀವನದಲ್ಲಿ ಸರಳತನದಿಂದ ವರ್ತಿಸಿರಿ; ರಾಷ್ಟ್ರ ರಾಷ್ಟ್ರಗಳ ಸಂಬಂಧವೂ ಸರಳವಾಗಿರಲಿ ಎಂದು ಮಹಾತ್ಮರು ಬೋಧಿಸಿದರು. ದ್ವೇಷ ಹಿಂಸೆಗಳ ಗರ್ಭದಲ್ಲಿ ಹುಟ್ಟುವ ದ್ವೇಷ ಹಿಂಸೆಗಳನ್ನು ತೊರೆದು ನಿರ್ಭಯತೆ ಒಳ್ಳೆಟ್ಟು ಸಹನಶೀಲತೆ ಶಾಂತಿಯ ಮಾರ್ಗವನ್ನು ಅವಲಂಬಿಸಬೇಕೆಂದು ಗಾಂಧೀಜಿ ಬೋಧಿಸಿದರು. ಆದರೆ ನಾವೆಂದು ಅವರ ತತ್ವಗಳನ್ನು ಎಷ್ಟರಮಟ್ಟಿಗೆ ಆಚರಿಸುತ್ತಿದ್ದೇವೆ. ಸ್ವಾತಂತ್ರ್ಯಪ್ರಾಪ್ತಿಯ ನಂತರ ಸಂಭವಿಸಿದ ಹಲವು ಘಟನೆಗಳಿಂದ ಅವರಿಗೆ ಎಷ್ಟೊಂದು ವಿಷಾದವಾಗಿರಬಹುದು! ಈ ಘಟನೆಗಳಿಂದ ಹಿಂದುಸ್ತಾನದ ಬಗ್ಗೆ ನಾನು ಕಟ್ಟಿದ ಕನಸು ಒಮ್ಮೊಮ್ಮೆ ಮಸುಕು ಮಸುಕಾಗಿ ತೋರುತ್ತದೆ. ಆದರೂ ಹಿಂದುಸ್ತಾನವು ಸತ್ಯ ಸ್ವಾತಂತ್ರ್ಯಕ್ಕಾಗಿ, ಉಚ್ಚ ಜೀವನಕ್ಕಾಗಿ ಹೋರಾಡುವದೆಂದು ನನಗೆ ಖಾತ್ರಿಯುದ್ದರಿಂದ ಅದರ ಬಗ್ಗೆ ನನಗಿದ್ದ ಪ್ರೇಮ ಅಚಲವಾಗಿದೆ.

ಮಹಾತ್ಮರ ಆದರ್ಶವನ್ನು ಸಾಧಿಸಬೇಕಿದ್ದರೆ ರಾಷ್ಟ್ರದ ಬಲವನ್ನು ಕುಗ್ಗಿಸುತ್ತಿರುವಂಥ ಜಾತೀಯತೆ ಪ್ರಾಂತೀಯತೆಯನ್ನು ಹೊಡೆದು ಹಾಕಿರಿ.

ಕಾಶ್ಮೀರ ಸಮಸ್ಯೆ

ಕಾಶ್ಮೀರ ಸಮಸ್ಯೆಯನ್ನು ವಿವೇಚಿಸುತ್ತ ಸರದಾರವಲ್ಲಭಭಾಯಿಯವರು ಹೀಗೆ ಹೇಳಿದರು

ಕಾಶ್ಮೀರದ ಬಗ್ಗೆ ನಾವು ಎಷ್ಟು ಬೆಲೆ ತೆರಬೇಕಾಯಿತೆಂಬವನ್ನು ನೀವು ಅರಿತಿದ್ದೀರಿ. ಪಾಕಿಸ್ತಾನ ಸರಕಾರವೂ ಈ ದೇಶವನ್ನೇ ನೋಡದ, ನಮ್ಮ ಸಮಸ್ಯೆಗಳನ್ನೇ ಅರಿತುಕೊಳ್ಳದ ಅನೇಕರು ಕೂಡಿಕೊಂಡು ಆರು ತಿಂಗಳ ವರೆಗೆ ನಮ್ಮ ಹೆಸರು ಕೆಡಿಸಿದರು. ನಮ್ಮ ಪರಿಚಯವೇ ಇಲ್ಲದವರಿಂದ ನಮ್ಮ ನ್ಯಾಯವನ್ನು ತಿಳಿದುಕೊಳ್ಳಲು ಪ್ರಯತ್ನಿಸಿದರು. ಆರು ತಿಂಗಳ ನಂತರ ಒಂದು ಸಮಿತಿಯನ್ನು ಕಳಿಸಿದರು. ಅದು ಹಿಂದುಸ್ತಾನ ಪಾಕಿಸ್ತಾನ ಕಾಶ್ಮೀರಗಳನ್ನು ಸಂದರ್ಶಿಸಿ ವಿಚಾರವಿನಿಮಯ ನಡೆಸಿ ನಂತರ ಯುದ್ಧವನ್ನು ನಿಲ್ಲಿಸಿರಿ ಎಂದು ಆದೇಶಿಸಿತು. ನಾವು ಒಪ್ಪಿಕೊಂಡೆವು. ಆದರೆ ಇನ್ನೊಂದು ಪಕ್ಷವು ಒಪ್ಪಿಕೊಳ್ಳಲಿಲ್ಲ. ಈ ವಿಷಯದಲ್ಲಿ ಭದ್ರತಾಮಂಡಳವು ಏನನ್ನೂ ಮಾಡಲಾರದಾಗಿದ್ದಾರೆ ನಮ್ಮ. ಜಗಳವನ್ನು ನಾವೇ ಬಗೆಹರಿಸಿಕೊಳ್ಳಬೇಕಾದರೆ ಈಗ ಅಲ್ಲಿರುವದು ಭದ್ರತಾಮಂಡಳವಲ್ಲ ಅಭದ್ರತಾಮಂಡಳವು, ಶಾಂತಿಘಾತಕ ಮಂಡಲವು ಆಗಿರಬೇಕು. ಹೈದ್ರಾಬಾದದ ನಿಜಾಮರು ಭದ್ರತಾ ಮಂಡಳದಲ್ಲಿಯ ವಾದವನ್ನು ಹಿಂತೆಗೆದುಕೊಳ್ಳಬಯಸುತ್ತಾರೆ ಆದರೆ ಈ ವಾದವನ್ನು ಬಿಟ್ಟುಕೊಡಲು ಬರುವದಿಲ್ಲೆಂದು ಭದ್ರತಾ ಮಂಡಲದ ಆಗ್ರಹ. ಈ ಕಾರಣದಿಂದಾಗಿ ಅಲ್ಲಿ, ಇಲ್ಲಿ ಎಲ್ಲೆಡೆಗೂ ಅಶಾಂತಿಗೆ ಕಾರಣವಾಗಿದೆ. ಭದ್ರತಾ ಮಂಡಳವು ಸ್ಥಾಪಿತವಾದಂದಿನಿಂದ ಒಂದಾದರೂ ಸಮಸ್ಯೆಯನ್ನು ಸಮಾಧಾನಕರವಾಗಿ ಬಿಡಿಸಿದ್ದಕೀರ್ತಿ ಅದಕ್ಕಿಲ್ಲ. ಇಂಡೋನೇಶಿಯಾ, ಪಾಲಿಸ್ತಾನ ಯಾವ ಪ್ರಶ್ನೆಯನ್ನು ತೆಗೆದುಕೊಂಡರೂ ಭದ್ರತಾ ಮಂಡಳಕ್ಕೆ ಯಶಸ್ಸು ಸಿಕ್ಕಿಲ್ಲ. ಈಗಿನ ಯುಕ್ತರಾಷ್ಟ್ರ ಸಂಘವು ಹಿಂದಿನ ರಾಷ್ಟ್ರ ಸಂಘದಂತೆ ನಿರುಪಯುಕ್ತ ಸಂಸ್ಥೆಯಾಗುವದೇನೋ ಎಂಬ ಹೆದರಿಕೆ ಬರುತಿದೆ. ಯುಕ್ತರಾಷ್ಟ್ರ ಸಂಘವೀಗಲೇ ತಿಳಿದು ಸುಧಾರಿಸಿಕೊಳ್ಳದಿದ್ದರೆ ಜಗತ್ತನ್ನು ಇನ್ನೊಂದು ಯುದ್ಧದಲ್ಲಿ ನೂಕೀತು.

ಆಕ್ರಮಣಶೀಲರಲ್ಲ

ಮುಖ್ಯ ಮಂತ್ರಿಗಳು ಇದೇ ಸಮಸ್ಯೆಯನ್ನು ವಿವೇಚಿಸುತ್ತ ಹೀಗೆ ಹೇಳಿದರು.


ಹಿಂದುಸ್ತಾನವು ಆಕ್ರಮಣ ಶೀಲ ರಾಷ್ಟ್ರವೆಂದು ಹಲವರು ಅಜ್ಞಾನದಿಂದ ಹೇಳುತ್ತಿರುವರು. ಹಿಂದುಸ್ತಾನವು ಆಕ್ರಮಣಶೀಲ ರಾಷ್ಟ್ರವಾದರೆ ನನಗಾಗಲಿ ನನ್ನ ಸಹೋದ್ಯೋಗಿಗಳಿಗಾಗಲಿ ಸರಕಾರದಲ್ಲಿ ಸ್ಥಾನಬೇಡ. ಆಕ್ರಮಣಶೀಲ ಧೋರಣವನ್ನು ತಾಳುವದು ಮಹಾತ್ಮರ ತತ್ವಕ್ಕೆ ವಿರುದ್ಧವಿದೆ. ಆದರೆ ಹಿಂದುಸ್ತಾನದ ವಿರುದ್ಧ ಕಾಶ್ಮೀರ ಪ್ರಜೆಗಳ ವಿರುದ್ಧ ಕಾಶ್ಮೀರದಲ್ಲಿ ಆಕ್ರಮಣ ಹಾಗು ಪಾಶವೀ ಅತ್ಯಾಚಾರ ಸಂಭವಿಸಿದೆ. ಯಾವದೇ ಸ್ವಾಭಿಮಾನಿ ರಾಷ್ಟ್ರವು ಮಾಡುವಂತೆ ನಾವದನ್ನು ಪ್ರತಿಭಟಿಸಿದೆವು. ಕಾಶ್ಮೀರದಲ್ಲಿ ಆಕ್ರಮಣ ಮಾಡಿಲ್ಲ ಎಂದು ವಾದಿಸಿದ ಪಾಕಿಸ್ತಾನ ತಾನಾಗಿಯೇ ಅದನ್ನು ಒಪ್ಪಿಕೊಂಡಿತು. ಯುಕ್ತ ರಾಷ್ಟ್ರ ಸಂಘವು ಮುಂದೊಡ್ಡಿದ ಶಾಂತಿಯೋಜನೆಯನ್ನು ನಾವು ಒಪ್ಪಿಕೊಂಡೆವು. ಆದರೆ ಅಭಿಮಾನ ಅಹಂಕಾರಗಳಿಂದ ಮತ್ತನಾದ ಪಾಕಿಸ್ತಾನ ಅದನ್ನು ನಿರಾಕರಿಸಿತು. ಹಿಂದುಸ್ತಾನದ ಮುಖ್ಯ ಮಂತ್ರಿಯೆಂದು ನಾನು ಈ ವಿಷಯವನ್ನು ಸ್ಪಷ್ಟಪಡಿಸುತ್ತೇನೆ. ಏನೇ ಆದರೂ ನಾವು ಈ ಆಕ್ರಮಣಕ್ಕೆ ಮಣಿಯಲಾರೆವು. ಕೊನೆಯ ವರೆಗೂ ಅದನ್ನು ಎದುರಿಸುವೆವು ಏಕೆಂದರೆ ಕಾಶ್ಮೀರದ ಸ್ವಾತಂತ್ರ್ಯದಲ್ಲಿ ಹಿಂದುಸ್ತಾನದ ಗೌರವವಿದೆ. ಅಂತರ್ ರಾಷ್ಟ್ರೀಯ ಕಾಯದೆಯ ಗೌರವವೂ ಅದರಲ್ಲಿದೆ. ಕಾಶ್ಮೀರ- ಹೈದರಾಬಾದಗಳಲ್ಲಿ ನಾವು ಏನು ಮಾಡಿದವೂ ಮಾಡುತಿರುವೆವೋ ಆ ಬಗ್ಗೆ ನನಗೆ ಎಳ್ಳಷ್ಟೂ ಖೇದವಾಗುವದಿಲ್ಲ. ನಾವು ಅಲ್ಲಿ ಏನು ಮಾಡಿದೆವೊ ಅದನ್ನು ಮಾಡದೆ ಹೋಗಿದ್ದರೆ ಹಿಂದುಸ್ತಾನದ ಬಗ್ಗೆ ನನಗೆ ನಾಚಿಕೆಯೆನಿಸುತಿತ್ತು.

ಯುಕ್ತ ರಾಷ್ಟ್ರ ಸಂಘವೆಷ್ಟೇ ದೋಷಪೂರ್ಣವಾಗಿದ್ದರೂ ಅದರಲ್ಲಿ ಶ್ರದ್ಧೆಯನ್ನಿಟ್ಟ ಹಿಂದುಸ್ತಾನವು ಜಾಗತಿಕ ಶಾಂತತೆಯ ತನ್ನ [illegible] ಹೇಳಿದರು.

ಪಾಕಿಸ್ತಾನದ ಅಪಪ್ರಚಾರ

ಪಾಕಿಸ್ತಾನವು ಹಿಂದುಸ್ತಾನ [illegible] ಅಪಪ್ರಚಾರವನ್ನು [illegible] ಮುಖ್ಯ ಮಂತ್ರಿಗಳು ಹೀಗೆ ಹೇಳಿದರು.

ಪಾಕಿಸ್ತಾನದ [illegible] ಆದರೆ [illegible] ಪಾಕಿಸ್ತಾನಕ್ಕೆ [illegible] ಹೇಳುವುದು. [illegible] ಪಾಕಿಸ್ತಾನದ [illegible] ಹಿಂದುಸ್ತಾನದ ವಿರುದ್ಧ ಅಪಪ್ರಚಾರ ನಡೆಸಿದ ಪಾಕಿಸ್ತಾನಿಗಳು ತಮ್ಮ [illegible] ಹಿಂದುಸ್ತಾನಕ್ಕೆ [illegible]



ಆಕ್ರಮಿಸುವದು ಬೇಡ. ಪಾಕಿಸ್ತಾನವನ್ನು ಆಕ್ರಮಿಸುವದಂತೂ ಮೊದಲೇ ಬೇಡ. ಪಾಕಿಸ್ತಾನದೊಡನೆ ನಿಕಟ ಸಂಬಂಧವನ್ನಿಟ್ಟುಕೊಂಡು ಶಾಂತಿಯಿಂದ ಪ್ರಗತಿಯುಕ್ತ ನಾಗಬೇಕೆಂಬುದೇ ನಮ್ಮ ಇಚ್ಛೆ.

ಇದೇ ವಿಷಯವನ್ನೆತ್ತಿ ಉಪ ಮುಖ್ಯ ಮಂತ್ರಿಗಳಾದ ಸರದಾರರು ಹೀಗೆ ಹೇಳಿದರು.

ಪಾಕಿಸ್ತಾನದ ಧುರೀಣರು ಮತ್ತು ವೃತ್ತಪತ್ರಗಳು ಹಿಂದುಸ್ತಾನದ ಮೇಲೆ ಉಗ್ರಭಾಷೆಯಲ್ಲಿ ಹೊರಿಸುತಿರುವ ಅಲ್ಲದ ಸಲ್ಲದ ಆರೋಪಗಳನ್ನು ನೋಡಿದರೆ ಪಾಕಿಸ್ತಾನವು ಹಿಂದುಸ್ತಾನವನ್ನು ಬೆದರಿಸುತಿದೆಯೋ ಅಥವಾ ಪಾಕಿಸ್ತಾನಿಗಳು ತಮ್ಮಲ್ಲಿ ಒಳ್ಳಟ್ಟನ್ನು ಕಾಯ್ದುಕೊಳ್ಳುವದಕ್ಕಾಗಿ ಈ ಉಪದ್ವ್ಯಾಪ ನಡೆಸಿದ್ದಾರೋ ತಿಳಿಯದಂತಾಗಿದೆ. ಪ್ರಾಮಾಣಿಕತನಕ್ಕಾಗಿ ಪ್ರಸಿದ್ಧರಿರುವ ನಮ್ಮ ಮುಖ್ಯಮಂತ್ರಿಗಳು, ಪಾಕಿಸ್ತಾನ ವಿರುದ್ಧ ಹಿಂದುಸ್ತಾನವು ಆಕ್ರಮಣಶೀಲ ಧೋರಣವನ್ನಿಟ್ಟುಕೊಂಡಿಲ್ಲವೆಂದು ಅನೇಕ ಸಾರೆ ಸ್ಪಷ್ಟವಾಗಿ ಹೇಳಿದ್ದಾರೆ. ಆದರೂ ಪಾಕಿಸ್ತಾನದ ಮುಖಂಡರುಗಳು ತಮ್ಮ ನಿರಾಧಾರ ಭಯವನ್ನು ಬಿಟ್ಟಿಲ್ಲ ಇದರಿಂದ ಪಾಕಿಸ್ತಾನದ ಪ್ರಜೆಗಳಲ್ಲಿ ಜಾತೀಯ ವೈಮನಸ್ಸನ್ನುಂಟು ಮಾಡುತಿದೆ. ಈ ವಿಷವು ಹಿಂದುಸ್ತಾನದಲ್ಲಿಯೂ ಹಬ್ಬದಂತೆ ನೋಡಿಕೊಳ್ಳುವದು ಅವಶ್ಯವಾಗಿದೆ.

ಮಹಾತ್ಮರ ತತ್ವಾವಲಂಬನೆ

ಮಹಾತ್ಮರ ತತ್ವಾವಲಂಬನದಲ್ಲಿಯೇ ಜಗತ್ತಿನಲ್ಲಿ ಸುಖ ಶಾಂತಿಗಳಿವೆ ಎಂದು ಮುಖ್ಯ ಮತ್ತು ಉಪ ಮುಖ್ಯ ಮಂತ್ರಿಗಳಿಬ್ಬರೂ ಸಾರಿದರು. ಈ ಸಂಬಂಧದಲ್ಲಿ ಉಪ ಮುಖ್ಯ ಮಂತ್ರಿ ಸರದಾರ ವಲ್ಲಭಭಾಯಿಯವರು ಹೀಗೆ ಹೇಳಿದರು. ಭದ್ರತಾ ಮಂಡಳವು ಮಹಾತ್ಮರ ತತ್ವಗಳನ್ನವಲಂಬಿಸಿದರೆ ಜಗತ್ತಿಗೆ ಇನ್ನಷ್ಟು ಸುಖವಾದೀತು ವಾಕ ರಾಷ್ಟ್ರವಾಗಿದ್ದ ಹಿಂದುಸ್ತಾನವು ಮಹಾತ್ಮ ಗಾಂಧಿಯವರಂಥ ಧುರೀಣರನ್ನು ಹೊಂದಿದಾಗ ಸ್ವತಂತ್ರ ಹಿಂದುಸ್ತಾನವು ಇನ್ನು ಪ್ರಭಾವೀ ಧುರೀಣರನ್ನು ಕೊಡಲಾರದೆ? ಆದರೆ ನಾವು ಮಹಾತ್ಮರ ತತ್ವಗಳನ್ನು ಅನುಸರಿಸದೆ [illegible] ಸಹಾನುಭೂತಿಯನ್ನು ಕೋರುತಿದ್ದೇವೆ. ನಾವು ಮಹಾತ್ಮರ ತತ್ವಗಳನ್ನು ಅನುಸರಿಸುತ್ತಿಲ್ಲ [illegible] ಮಹಾತ್ಮರ [illegible] ಅವರಿಗೆ [illegible] ಹಿಂದುಸ್ತಾನವು [illegible] ಎಂಬುದನ್ನು ಗಾಂಧಿಜಿಯವರಿಗೆ ತಿಳಿದಿತ್ತು.

(೨೨ ನೆಯ ಪುಟಕ್ಕೆ)

ವಿವಿಧ ಪ್ರಪಂಚ

ತಲೆ ಬುರಡೆಗಳ ಉಗ್ರಾಣ

ಇಂಗ್ಲೆಂಡಿನಲ್ಲಿ ಪ್ರಾಣಿ ಶಾಸ್ತ್ರಾಭ್ಯಾಸಕ್ಕಾಗಿ ಎಂಥೆಂಥ ಪ್ರಯತ್ನಗಳಾಗುತ್ತಿವೆಯೆಂಬುದಕ್ಕೆ ಒಂದು ಉದಾಹರಣೆ "ಟಿಟ್ ಬಿಟ್ಸ್" ಪತ್ರಿಕೆಯಲ್ಲಿ ಬಂದಿದೆ. ರಾಯಲ್ ಕಾಲೇಜ್ ಆಫ್ ಸರ್ಜನ್ಸ್ (ಶಸ್ತ್ರ ಚಿಕಿತ್ಸೆಯ ಕಾಲೇಜು) ಇವರು ಜಗತ್ತಿನ ಎಲ್ಲ ಕಡೆಗಳಿಂದ ೬೦೦೦ ನಾನಾ ಆಕಾರದ ಮಾನವ ಕಪಾಲಗಳನ್ನು ಕೂಡಿ ಹಾಕಿದ್ದಾರೆ. ಅವನ್ನೀಗ ನಿಸರ್ಗೇತಿಹಾಸ ವಸ್ತು ಶಾಲೆಗೆ ದಾನ ಮಾಡಲಾಗಿದೆ.

ವಿಚಿತ್ರ ವ್ಯಕ್ತಿಗಳ ತಲೆಬುರುಡೆಗಳನ್ನು ಸಂಪಾದಿಸಲು ಅವರು ಪಟ್ಟ ಸಾಹಸ ನೋಡಿರಿ: "[illegible] ಬ್ರಿಯಾನ" ಎಂದು ಹೆಸರಾಂತ ಚಾರ್ಲ್ಸ ಬ್ರಿಯಾನ್ ಎಂಬವನ ತಲೆಬುರುಡೆಯ ಮೇಲೆ ಆ ಕಾಲೇಜಿನ ಅಧ್ಯಕ್ಷರ ಕಣ್ಣಿತ್ತು. ೧೭೮೩ರಲ್ಲಿ ಸತ್ತ ಈ ಮನುಷ್ಯ ಐರ್ಲಂಡಿನವ. ಅವನ ಎತ್ತರ ೮ ಅಡಿ; ಸಾಯುವ ಕೆಲ ದಿನ ಮೊದಲು ತನ್ನ ತಲೆಬುರುಡೆಯ ಮೇಲೆ ಈ ಕಾಲೇಜ ಅಧ್ಯಕ್ಷರು ಕಣ್ಣಿಟ್ಟಿದ್ದಾರೆಂದು ಅವನಿಗೆ ಸುಳಿವು ಹತ್ತಿತ್ತು. ಇದು ಅವರಿಗೆ ಸಿಗದಂತೆ ಮಾಡುವ ಇಚ್ಛೆಯಿಂದ ಅವನು, ತಾನು ಸತ್ತೊಡನೆ ತನ್ನ ಹೆಣವನ್ನು ಪೆಟ್ಟಿಗೆಯೊಳಗಿಟ್ಟು ಸಮುದ್ರದ ಮಧ್ಯದಲ್ಲಿ ಒಯ್ದು ಕಲ್ಲು ಕಟ್ಟಿ ಮುಳುಗಿಸಿ ಬಿಡಬೇಕೆಂದು ಬರೆದಿಟ್ಟು ಹೋದ. ಆದರೆ ಅಧ್ಯಕ್ಷ ಹಂಟರರು ಆ ಪೆಟ್ಟಿಗೆಯನ್ನು ಕಾಯುತ್ತಿದ್ದವರಿಗೆ ಹೆಂಡ ಕುಡಿಸಿ, ಅವರಲ್ಲೊಬ್ಬೊಬ್ಬನಿಗೆ ೨೦೦ ಪೌಂಡು ಲಂಚ ಕೊಟ್ಟು ರಾತ್ರೋರಾತ್ರಿ ದೈತ್ಯನ ಆ ಹೆಣವನ್ನು ಅಪಹರಿಸಿದರು. ಸಮುದ್ರದಲ್ಲಿ ಬರಿ ಪೆಟ್ಟಿಗೆ ಮುಳುಗಿತು. ಕಾಲೇಜಿನವರು ಹೆಣವನ್ನು ಒಣಗಿಸಿ ಉಗ್ರಾಣದಲ್ಲಿಟ್ಟರು.

ಸುರೇಶ ಚರಕ

ಚರಕದಿಂದ ಹುಟ್ಟುವ ನೂಲಿನ ಪ್ರಮಾಣವನ್ನು ಹೆಚ್ಚಿಸಿ ನೂಲುವವರ ಉತ್ಪನ್ನವನ್ನು ಅಭಿವೃದ್ಧಿಗೊಳಿಸಲು ಅನೇಕ ವರ್ಷಗಳಿಂದ ಪ್ರಯತ್ನಗಳಾಗುತ್ತಿವೆ. ಯರವಡಾ ಚರಕ ಇಂಥ ಪ್ರಯತ್ನಗಳಲ್ಲಿ ಮುಖ್ಯವಾಗಿ ಜನಪ್ರಿಯವಾಗಿದೆ. ಈಗ ವರ್ಧಾ ಆಶ್ರಮದ ಶ್ರೀ ಸತ್ಯನ್ನರು ಹೊಸ ಮಾದರಿಯ ಚರಕವೊಂದನ್ನು ನಿರ್ಮಿಸಿದ್ದು ಅದರಲ್ಲಿ ಸಾಮಾನ್ಯ ಚರಕದ ಇಮ್ಮಡಿ ನೂಲು ಹುಟ್ಟುವದೆಂದು ತಿಳಿಯುತ್ತದೆ. ಈ ಸುರೇಶ ಚರಕವನ್ನು ಕಾಲಿಂದ ನಡೆಸಿ ಒಮ್ಮೆಲೆ ಎರಡು ಕದಿರುಗಳಿಂದ ನೂಲು ತೆಗೆಯಬಹುದು. ವರ್ಧಾದಲ್ಲಿ ಕೂಡಲಿರುವ ಖಾದೀ ಸರಂಜಾಮು ಸಮ್ಮೇಳನದಲ್ಲಿ ಇದನ್ನು ಪ್ರದರ್ಶನಕ್ಕಿಡಲಾಗುವದೆಂದೂ ಸಂಯುಕ್ತ ಪ್ರಾಂತದ ಉನ್ನಾವದ ಸೇವಾಕುಂಜ ಆಶ್ರಮದಲ್ಲಿ ಇದನ್ನು ಬಹುಸಂಖ್ಯೆಯಲ್ಲಿ ತಯಾರಿಸುವ ಏರ್ಪಾಡಾಗಿದೆಯೆಂದೂ ತಿಳಿಯುತ್ತದೆ.

ರಕ್ತಸಾಕ್ಷಿ

ಅನೀತಿಯಿಂದ ಬಸಿರಾದ ಗಂಡಸಿಲ್ಲದ ಹೆಂಗಸರು ಯಾವನಾದರೊಬ್ಬ ಗಂಡಸನ್ನು "ಇವನೇ ನನ್ನ ಮಗುವಿನ ತಂದೆ" ಎಂದು ಆತನಾರ್ಥಕ್ಕಾಗಿ ನ್ಯಾಯಸ್ಥಾನಕ್ಕೆಳೆಯುವ ರೂಢಿ ಹಿಂದುಸ್ಥಾನದಲ್ಲಿ ವಿರಳವಾದರೂ ಇಲ್ಲವೆಂದಲ್ಲ. ಆದರೆ ಜಾತಿ ಕಟ್ಟಿನ ಬಿಗಿ ವಿಶೇಷವಾಗಿ ಇಲ್ಲದ ಯುರೋಪ ಅಮೇರಿಕೆಗಳಲ್ಲಿ ಇದು ಬಹಳವಾಗಿ ಹಬ್ಬಿದೆ. ಎಷ್ಟೋ ವೇಳೆ ಇಂಥ ಹೆಂಗಸರು ಪ್ರತಿಷ್ಠಿತ ಗೃಹಸ್ಥರನ್ನು ಸುಳ್ಳು ಸುಳ್ಳೇ ತಮ್ಮ ಮಕ್ಕಳ ತಂದೆಯೆಂದು ಆರೋಪಿಸಿ ಅನೀತಿಯಲ್ಲೂ ಲಾಭವನ್ನು ಗಳಿಸಲೆಳಸುವರು. ಆರೋಪಕ್ಕೊಳಗಾದ ಗಂಡಸಿಗೆ ತನ್ನ ನಿರಪರಾಧಿತ್ವವನ್ನು ನ್ಯಾಯಸ್ಥಾನದಲ್ಲಿ ಸಿದ್ಧ ಮಾಡಿಕೊಡುವದು ತೀರ ಕಠಿಣವಾಗುತ್ತದೆ. ನೇರವಾಗಿ ನಿಟ್ಟುಸಿರು ಕಣ್ಣೀರುಗಳ ಮಾಯೆಕ್ಕೆ ಮಾರುಹೋಗಿ ನ್ಯಾಯಾಧೀಶರು ಸ್ತ್ರೀಯ ಪಕ್ಷದಲ್ಲಿಯೇ ಅನ್ಯಾಯವಾಗಿ ತೀರ್ಪು ಹೇಳುವದುಂಟು, ಆದರೆ ಪ್ರಾಣಿಶಾಸ್ತ್ರಜ್ಞರು ಇತ್ತೀಚೆಗೆ ಕಂಡು ಹಿಡಿದಿರುವ ರಕ್ತ ಪಾರಂಪರ್ಯದ ಸೃಷ್ಟಿ ನಿಯಮಗಳು ಇಂಥ ಠಕ್ಕ ಹೆಂಗಸರ ಬಾಯಿಗೆ ಮುಚ್ಚಳ ಹಾಕಿಸತೊಡಗಿವೆ. ಯುರೋಪಿನಲ್ಲಿ ಬಹುತರ ಎಲ್ಲ ದೇಶಗಳಲ್ಲಿ ಮತ್ತು ಅಮೇರಿಕೆಯಲ್ಲಿ ಕೆಲ ಕೆಲವೆಡೆ ನ್ಯಾಯಸ್ಥಾನಗಳು ರಕ್ತಪರೀಕ್ಷೆಯ ಸಿದ್ಧಾಂತವನ್ನು ಪ್ರಮಾಣವೆಂದು ಒಪ್ಪುತ್ತಿವೆ.

ಮನುಷ್ಯರಕ್ತವನ್ನು ನಾಲ್ಕು ಜಾತಿಯಾಗಿ ವಿಂಗಡಿಸುತ್ತಾರೆ. ಒಂದು ಮಗು ಹುಟ್ಟಿತೆಂದರೆ ಅದರ ರಕ್ತದಲ್ಲಿ ತಂದೆ ತಾಯಿಗಳಿಬ್ಬರ ರಕ್ತಗಳ ಗುಣಗಳಲ್ಲಿ ಇಂಥದೇ ಆನುವಂಶಿಕವಾಗಿ ಇಳಿಯುವದೆಂದು ಖಚಿತವಾಗಿ ಹೇಳಲು ಬರುತ್ತದೆ. ಅಲ್ಲದೆ ರಕ್ತದಲ್ಲಿ ಮೊಲದ 'ಸೆರಂ' (Serum) ಸೇರಿಸಿದರೆ ರಕ್ತದಲ್ಲಿರುವ ಇನ್ನೂ ಎರಡು ಗುಣಗಳನ್ನು ಬೇರ್ಪಡಿಸಬಹುದು. ೧೯೪೦ರಲ್ಲಿ ಕಂಡುಹಿಡಿಯಲ್ಪಟ್ಟ Rh ರಕ್ತಗುಣವೂ ಇದಕ್ಕೆ ಸಹಾಯ ಮಾಡುತ್ತದೆ.

ಹೀಗೆಲ್ಲ ಪರೀಕ್ಷೆಯಿಂದ ಪರೀಕ್ಷಿಸಲ್ಪಟ್ಟ ತಾಯಿಯ, ಮಗುವಿನ ಮತ್ತು ತಂದೆಯೆಂಬ ಆರೋಪಕ್ಕೊಳಗಾದವನ ರಕ್ತಗಳಿಂದ ಒಬ್ಬನು ಒಂದು ಮಗುವಿನ ತಂದೆ ಹೌದೋ ಅಲ್ಲವೋ ಎಂದು ಕಂಡು ಹಿಡಿಯಬರುತ್ತದೆ.

ಆದರೆ ಇದು ಪರಿಪೂರ್ಣವಾದ ಪದ್ಧತಿಯೆಂದು ತಿಳಿಯಬಾರದು. ಈ ಪರೀಕ್ಷೆಯ ಬಲದಿಂದ ನೂರಕ್ಕೆ ೫೫ ಸಂದರ್ಭಗಳಲ್ಲಿ ಮಾತ್ರ ನಿರಪರಾಧಿತ್ವ ಸ್ಥಾಪಿಸಲ್ಪಡಬಹುದು. ಭೂಮಿಯಲ್ಲಿರುವವರೆಲ್ಲ ಈ ಆರು ಏಳು ರಕ್ತಜಾತಿಗೆ ಸೇರಿದವರಾದುದರಿಂದ ಒಬ್ಬನು ಒಬ್ಬಾಕೆಯ ಸಂಪರ್ಕ ಮಾಡಿರದಿದ್ದರೂ ತನ್ನ ರಕ್ತಜಾತಿಗೇ ಸೇರಿದ ಇನ್ನೊಬ್ಬನು ಮಾಡಿ ಮಗು ಹುಟ್ಟಿದ್ದರೆ ಈ ಪರೀಕ್ಷೆಯಿಂದ ಅವನಿಗೆ ಲಾಭವಾಗದು. ಆದರೆ ಈ ಪರೀಕ್ಷೆಯ ಸುದ್ದಿ ಎತ್ತಿದ ಕೂಡಲೇ ಸುಳ್ಳು ಆರೋಪ ಹೊರಿಸಿದ ಹೆಂಗಸರು ಗಾಬರಿಯಾಗಿ ತಪ್ಪನ್ನು ಒಪ್ಪಿಕೊಳ್ಳುವರೆಂಬುದು ಅನುಭವದ ಮಾತಾಗಿದೆ.

ಅರ್ಧಾಂಗ ವಾಯುವಿಗೆ ಚಿಕಿತ್ಸೆ

ಮಿದುಳಿನ ಮೇಲೆ ಆಘಾತವಾಗುವದರಿಂದ ಉಂಟಾಗುವ ಅರ್ಧಾಂಗ ವಾಯು ಇಲ್ಲವೆ ಪಕ್ಷವಾತ ರೋಗಕ್ಕೆ ಗುರಿಯಾಗಿರುವವರು ಅಮೇರಿಕೆಯ ವೈದ್ಯ ಸಂಘದ ಪತ್ರಿಕೆಯಲ್ಲಿ ಬಂದ ಒಂದು ಲೇಖದಿಂದ ಆಶಾಕಿರಣವನ್ನು ಕಂಡಂತಾಗಿದೆ.

ಅತಿ ನೇರಳೆ ಕಿರಣಗಳು, ಅನತಿ-ರಕ್ತ ಕಿರಣಗಳು (Ultra-Violet rays & infrared rays), ಉಷ್ಣ, ಶೀತ, ಜಲ ವಿದ್ಯುತ್ತು, ಮರ್ದನ, ವಾಯು, ಮೊದಲಾದವುಗಳ ಪ್ರಯೋಗದಿಂದ ಈ ರೋಗವನ್ನು ಅಮೇರಿಕೆಯ ನೌಕಾ ಚಿಕಿತ್ಸಾಲಯದಲ್ಲಿ ಬಹುತರ ವಾಸಿ ಮಾಡಲಾಗಿದೆ.

ಈ ಪ್ರಯೋಗಗಳಿಂದ ೧೮ ನೆನೆಗುದಿಗೆ ಬಿದ್ದ ಪ್ರಕರಣಗಳಲ್ಲಿ ೧೨ ವಾಸಿಯಾಗಿ ರೋಗಿಗಳು ನಡೆಯತೊಡಗಿದ್ದಲ್ಲದೆ ಉಳಿದವರಲ್ಲಿ ಮೂವರು ಸುಧಾರಿಸುವ ಲಕ್ಷಣಗಳು ತೋರಿ ಬಂದಿವೆಯಂತೆ. ರೋಗ ಉಲ್ಬಣಿಸಿ ಬರಿ ನಾಲ್ಕೇವಾರಗಳಲ್ಲಿ ಚಿಕಿತ್ಸೆ ನಡೆಯತೊಡಗಿದ್ದ ೧೦ ಹೊಸ ರೋಗಿಗಳಲ್ಲಿ ೯ ಜನರು ೭ ದಿನಗಳಲ್ಲಿ ನಡೆದರು, ಉಳಿದೊಬ್ಬನು ಸುಧಾರಿಸುತ್ತಿದ್ದಾನೆ.

ಮೊದಲು ಮರ್ದನ, ಜಲಚಿಕಿತ್ಸೆ, ಆ ಮೇಲೆ ಮಲಗಿದಲ್ಲಿಯೆ ವ್ಯಾಯಾಮ, ಆ ಮೇಲೆ ಹಾಸಿಗೆಯಲ್ಲಿ ಕುಳಿತು ಕಾಲು ಇಳಿಬಿಟ್ಟು ತೀವ್ರ ತರವಾದ ಕುಸ್ತಿ ವ್ಯಾಯಾಮ ಹೀಗೆ ಕ್ರಮಾನುಸಾರ ಚಿಕಿತ್ಸೆಯನ್ನು ನಡೆಸಲಾಯಿತು.



ಬಂದರಿನಿಂದ ಹೊರಡಲಿರುವ ಹಡಗಿನ ಮೇಲೆ ಹಾಕಲಿರುವ [illegible]. ಇವುಗಳಲ್ಲಿ [illegible]

ಜನಮತ

ವರದಕ್ಷಿಣೆ

ವರದಕ್ಷಿಣೆ ನಿಲ್ಲಿಸುವ ಬಗ್ಗೆ ಕಾಯದೆ ಪಾಸು ಮಾಡುವುದನ್ನು ಸಮ್ಮತಿಸಿ ಮುಂಬಯಿ ಸರಕಾರ ಮುಂದೂಡಿದುದನ್ನು ಕೇಳಿ ನನಗೆ ಬಹಳ ವಿಷಾದವಾಗಿದೆ. ನಮ್ಮ ತಂದೆಯರು ನಮಗಾಗಿ ಪಡುವ ಕಷ್ಟವನ್ನು ಕಂಡು ನಮ್ಮಲ್ಲಿ ಆತ್ಮಹತ್ಯೆಮಾಡಿಕೊಂಡ ತರುಣಿಯರು ಕೂಡ ಕೇಳಿಬರುತ್ತಾರೆ. ನಮ್ಮ ಹಿರಿಯರು ಕೇವಲ ನಿರ್ಧನತೆಯಲ್ಲಿರುವಾಗ ನಮಗಾಗಿ ಸಾಲ ಶೂಲಕ್ಕೆ ಎದೆಯೊಡ್ಡಿ ಚಿತ್ರ ಹಿಂಸೆಗೆ ಗುರಿಯಾಗಲು ಅವಕಾಶ ಕೊಡಕೂಡದೆಂದು ನನ್ನ ಗೆಳೆಯ ಗೆಳತಿಯರಲ್ಲಿ ವಿಜ್ಞಾಪಿಸಿಕೊಳ್ಳುತ್ತೇನೆ. ಹೆಣ್ಣು ನುಡಿಯಲಾರಳೆಂದು ತಿಳಿವ ಕಾಲವಿದಲ್ಲ. ತನ್ನ ಮತ್ತು ತನ್ನವರಿಗಾಗಿ ಯಾವ ಶ್ರಮದ ಕೆಲಸವನ್ನಾದರೂ ಆವಳು ಮಾಡಿ ಗಳಿಸುವುದರಲ್ಲಿ ಗಂಡನಿಗೆ ನೆರವಾಗಬಲ್ಲಳೆಂದು ನನ್ನ ಗೆಳತಿಯರು ಸಾರಿದರೆ ಈ ವರದಕ್ಷಿಣೆಯ ಪಿಡುಗನ್ನು ಕೆಲಮಟ್ಟಿಗಾದರೂ ನಾವೇ ತಡೆಯಬಹುದಲ್ಲವೆ? ಈ ದೃಷ್ಟಿಯಿಂದ ಸರಕಾರ ಮತ್ತು ನಮ್ಮ ಸಹೋದರಿಯರು ತಂತಮ್ಮ ತಂದೆಯರು ಹೆಣ್ಣು ಹಡೆದವೇಕೆಂದು ಆತ್ಮನಿಂದೆ ಮಾಡಿಕೊಂಬ ದುಃಸ್ಥಿತಿಯನ್ನು ತಡವಿಲ್ಲದೆ ದೂರ ಮಾಡುವುದು ಅನಿವಾರ್ಯವಾಗಿದೆ. ಈ ಸಂಕಟವನ್ನು ನಿವಾರಿಸುವಲ್ಲಿ ಅವಿವಾಹಿತ ತರುಣರ ಸಹಾನುಭೂತಿ ಅತ್ಯಗತ್ಯ. ಅಂಥ ಸಹಾನುಭೂತಿಯನ್ನು ಅವರಲ್ಲಿ ಹುಟ್ಟಿಸಲು ತಮ್ಮ ಅಹಿಂಸಾತ್ಮಕವೂ ಪ್ರೇಮಮಯವೂ ಆದ ಆಚಾರ ವಿಚಾರಗಳಿಂದ ನನ್ನ ಅವಿವಾಹಿತ ಅಕ್ಕತಂಗಿಯರೆಂದು ಶಕ್ತಿ ಮೀರಿ ಪ್ರಯತ್ನಿಸುವರೆಂದು ನಾನು ಆಶಿಸುತ್ತೇನೆ. ——ಸುಭದ್ರೆ

× ×

ಬೆಳ್ಳುಳ್ಳಿ

ಮಹಾಶಯರೇ,

ತಾ. ೨೭-೯-೪೮ ರ 'ಕರ್ಮವೀರ'ದಲ್ಲಿ 'ಮದ್ರಾಸು ಹುಳಿಪುಡಿ' ತಯಾರಿಸುವ ವಿಧಾನವನ್ನು ಓದಿದೆ. ಅದರಲ್ಲಿ ಬೆಳ್ಳುಳ್ಳಿ ಪ್ರಮಾಣ ಮಿತಿಮೀರಿದೆ ಎಂಬುದೊಂದು. ಅದಕ್ಕೆ ಅದನ್ನು ಅವರವರಿಗೆ ಬೇಕಾದಷ್ಟು ಪ್ರಮಾಣಕ್ಕೆ ಇಳಿಸಿಕೊಂಡರಾಯಿತೆಂದು ಸಮಾಧಾನ ಹೇಳಬಹುದು. ಆದರೆ ಧಾರ್ಮಿಕ ಅಥವಾ ಸಂಸ್ಕಾರ ಭೇದದಿಂದ ಬೆಳ್ಳುಳ್ಳಿ ತ್ಯಾಜ್ಯವೆಂಬವರು ಏನುಮಾಡಬೇಕೆಂಬ ಸಂಶಯ ಕೆಲವರಿಗೆ ಉಳಿಯಬಹುದು. ಅದಕ್ಕೆ ಅಂಥವರು ಬೆಳ್ಳುಳ್ಳಿಯನ್ನು ಬಿಟ್ಟೇಬಿಡಬಹುದೆಂದು ನನ್ನ ಸೂಚನೆ. ಬೆಳ್ಳುಳ್ಳಿ ಕೊಡುವ ರುಚಿ ಭೇದ ಅದರಿಂದ ಕಡಿಮೆಯಾದೀತು. ಆದರೆ ಅರುಚಿ ಬೇಡಾದವರು ಅದಕ್ಕೆ ಹೇಗೂ ವ್ಯಥೆಪಡುವ ಕಾರಣವಿಲ್ಲ. ಬೆಳ್ಳುಳ್ಳಿ ಹಾಕದ ಪುಡಿ ಕೆಟ್ಟು ಹೋಗದು. ರುಚಿ ಮಾತ್ರ ಭಿನ್ನವಾಗುತ್ತದೆ, ಅಷ್ಟೆ.

— ಶಾಂತಾದೇವಿ
ಹುಬ್ಬಳ್ಳಿ

× × ×

ಸಂಸ್ಕೃತಿ ಪ್ರಸಾರ

ಭಾರತೀಯ ದೃಷ್ಟಿಯಲ್ಲಿ ಆದರ್ಶ ಜೀವನ ನಡೆಸುವ ಆಶೆಯುಳ್ಳ ತರುಣ ತರುಣಿಯರು ಭಾರತ ಸಂಸ್ಕೃತಿಯ ಅಂಶಗಳನ್ನು ಅಭ್ಯಸಿಸುವುದು ಅಗತ್ಯ. ಅನ್ಯ ಭಾಷೆಗಳನ್ನು ಕಲಿಯಲು ವ್ಯರ್ಥವಾಗಿ ಆಯುಷ್ಯದ ಅನೇಕ ವರ್ಷಗಳನ್ನು ವ್ಯಯಿಸುವ ಹುಚ್ಚನ್ನು ಬಿಟ್ಟು ನಮ್ಮ ತರುಣರೂ ತರುಣಿಯರೂ ಸಂಸ್ಕೃತ ಕನ್ನಡಗಳ ಜ್ಞಾನವನ್ನು ಸರಿಯಾಗಿ ಸಂಪಾದಿಸುವತ್ತ ಲಕ್ಷ್ಯವಿತ್ತರೆ ಕುಟುಂಬ ಸುಸಂಸ್ಕೃತ, ಸುಶಿಕ್ಷಿತ ಎನಿಸಬಹುದು. ಈಗಿನ ಕಾಲದಲ್ಲಿ ಸಾಮಾನ್ಯರು ಇಂದಿನ ಹೊಸ ವಿಷಯಗಳನ್ನು ಕೂಡ ಮಾತೃಭಾಷೆಯಲ್ಲಿಯೇ ಓದಬಹುದಾಗಿದೆ. ವಿಶೇಷತಃ ಪರಂಪರಾಗತ ಸಂಸ್ಕೃತಿ ಶಿಷ್ಟಾಚಾರಗಳನ್ನು ಪೀಳಿಗೆಯಿಂದ ಪೀಳಿಗೆಗೆ ಮುಂಬರಿಸುವ ಕರ್ತವ್ಯ ತರುಣಿಯರದೇ ಆಗಿರುವುದರಿಂದ ಅವರಿಂದು ಕಣ್ತೆರೆದು, ಅನ್ನಸಾಧಕ ವಿದ್ಯೆಯಲ್ಲೇ ಲೀನನಾದ ಗಂಡನಿಗೆ ಆ ಕ್ಷೇತ್ರವನ್ನು ಬಿಟ್ಟು, ಸಂಸ್ಕೃತಿ ಧಾರೆಯನ್ನು ಎರೆವ ಶಕ್ತಿಯನ್ನು ಸಂಪಾದಿಸಲು ಆಸ್ಥೆಯಿಂದ ಪ್ರಯತ್ನಿಸಬೇಕಾಗಿದೆ.

—ಕಾಂತು

ಕರ್ನಾಟಕದಲ್ಲಿ ಗವರ್ನರ ದಂಪತಿಗಳ ಸಂಚಾರ

ಮುಂಬಯಿ ಪ್ರಾಂತದ ಗವರ್ನರರಾದ ಸರ್. ಮಹಾರಾಜಸಿಂಗರು ಸಪತ್ನೀಕರಾಗಿ ಬೆಳಗಾವಿ ಧಾರವಾಡ ವಿಜಾಪುರ ಜಿಲ್ಲೆಗಳನ್ನು ಸಂದರ್ಶಿಸಿದರು. ಬೆಳಗಾವಿಯಲ್ಲಿ ಬೆಳಗಾವಿ ನಗರಸಭೆ, ಜಿಲ್ಲಾ ಲೋಕಲ್ ಬೋರ್ಡ್ ಹಾಗು ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆಗಳ ಮಾನಪತ್ರಗಳನ್ನು ಸ್ವೀಕರಿಸಿದರು. ಧಾರವಾಡ ಜಿಲ್ಲಾ ಲೋಕಲ್ ಬೋರ್ಡ್ ಧಾರವಾಡ ನಗರ ಸಭೆ ಮತ್ತು ಕರ್ನಾಟಕ ವಣಿಕ್ ಸಂಘದವರು ಕೊಟ್ಟ ಮಾನಪತ್ರಗಳನ್ನು ಸ್ವೀಕರಿಸಿದರು. ಈ ಮಾನಪತ್ರಗಳಲ್ಲಿ ಮಾಡಿಕೊಂಡ ಸ್ವತಂತ್ರ ಕರ್ನಾಟಕ ಪ್ರಾಂತರಚನೆಯ ಬೇಡಿ



ಗವರ್ನರ ಸರ್. ಮಹಾರಾಜಸಿಂಗರು ಧಾರವಾಡ ಕರ್ನಾಟಕ ಕಾಲೇಜಿನಲ್ಲಿ ಜಾಟಕಿ ಹಾರಿಸಲ್ಪಟ್ಟ ಸ್ವಾಗತ ಪಡೆಯುತ್ತಿರುವರು.

ಕೆಗೆ ಅವರು ಈ ಆಶಯದ ಉತ್ತರವನ್ನು ಕೊಟ್ಟರು. ಹಿಂದುಸ್ಥಾನದ ಸದ್ಯದ ಪ್ರಾಂತಗಳ ಗಡಿಗಳು ಅಸ್ವಾಭಾವಿಕವಾಗಿದ್ದು ಅವುಗಳಲ್ಲಿ ಬದಲಾವಣೆಗಳಾಗಬೇಕಾದುದು ಅವಶ್ಯವಾಗಿದೆಂದು ನನ್ನ ಅಭಿಪ್ರಾಯ. ಕರ್ನಾಟಕ ಜನತೆ ಏಕೀಕರಣಕ್ಕಾಗಿ ಅತ್ಯಂತ ಆತುರವಾಗಿದೆಂಬುದೂ ನನಗೆ ಮನವರಿಕೆಯಾಗಿದೆ. ಆದರೆ ಕಾಶ್ಮೀರ ಸಮಸ್ಯೆ ಅತ್ಯಂತ ತೊಡಕಿನದಾಗಿದೆ. ಅದಕ್ಕೆ ಯುದ್ಧವೆಂದು ಹೇಳಲಿಕ್ಕೆ ಬಾರದಿದ್ದರೂ ಅದು ಪ್ರತ್ಯಕ್ಷ ಯುದ್ಧವೇ ಆಗಿದೆ. ಅಲ್ಲಿನ ಗುಡ್ಡಗಾಡು ಚಳಿಗಾಲದಲ್ಲಿಯ ಹಿಮ ಮೊದಲಾದವುಗಳ ಮೂಲಕ ಬೇಗನೆ ಆ ಯುದ್ಧ ಮುಗಿಯುವಂತಿಲ್ಲ. ಅದರಂತೆ ಹಿಂದುಸ್ಥಾನ ಸದ್ಯದಲ್ಲಿ ಆರ್ಥಿಕ ದುಃಸ್ಥಿತಿಯಲ್ಲಿದೆ. ಸ್ವತಂತ್ರ ಪ್ರಾಂತರಚನೆಯಿಂದ ಮತ್ತಷ್ಟು ತೊಡಕು ಉಂಟಾಗಬಹುದು. ಅದೇನೇ ಇದ್ದರೂ ಘಟನಾಸಮಿತಿಯ ಅಧ್ಯಕ್ಷರು ವಿಚಾರಣಾ ಸಮಿತಿಯನ್ನು ನೇಮಿಸಿದ್ದು ಅದರ ವರದಿ ಹೊರಬಿದ್ದು ಘಟನಾ ಸಮಿತಿ ಆ ಬಗ್ಗೆ ವಿಚಾರ ಮಾಡುವವರೆಗೆ ತಾಳ್ಮೆಯಿಂದಿರಬೇಕು. ಕರ್ನಾಟಕದ ಜನತೆ ಸ್ವತಂತ್ರ ಪ್ರಾಂತದ ಬಗ್ಗೆ ಅತ್ಯಂತ ಆತುರವಾಗಿದೆ. ಅದು ಬೇಗ ಸಾಧ್ಯವಾಗದಿದ್ದರೆ ಪ್ರಾಂತದಲ್ಲಿ ಅಸಂತೋಷವುಂಟಾಗುವದೆಂದು ಕಾಂಗ್ರೆಸ್ಸಿಗರ ಸಭೆಯಲ್ಲಿ ಗವರ್ನರರಿಗೆ ಹೇಳಲಾಗಿ ಕನ್ನಡಿಗರ ಈ ಅಭಿಪ್ರಾಯವನ್ನು ಗವರ್ನರ ಜನರಲ್‌ರಿಗೆ ತಿಳಿಸುವದಾಗಿ ಆಶ್ವಾಸನವಿತ್ತರು.

ಬೆಳಗಾವಿಯ ನೀರಿನ ಪೂರೈಕೆಯ ಯೋಜನೆಯು ಕುರಂದವಾಡ ಸಂಸ್ಥಾನದಲ್ಲಿಯ ಒಂದು ಖಾಸಗಿ ನೀರಾವರಿ ನೀರಿನ ಪೂರೈಕೆಯ ಯೋಜನೆಯನ್ನು ಅವಲಂಬಿಸಿದೆ. ಅದರ ಪರಿಶೀಲನೆ ಮುಗಿದ ಕೂಡಲೆ ಅದನ್ನು ಕೈಕೊಳ್ಳಲಾಗುವದು.

ಹೈದರಾಬಾದ ಸಮಸ್ಯೆ ಮೂಲಕ ಸಿಮೆಂಟ ಸಿಕ್ಕುವದು ಕಠಿನವಾಗಿತ್ತು. ಈಗ ಅದು ಬಗೆಹರಿದಿದ್ದರಿಂದ ಇನ್ನು ನೀರಸಾಗರ ಯೋಜನೆಯ ಕೆಲಸ ಭರದಿಂದ ಸಾಗುವದಾಗಿ ಅವರು ಆಶ್ವಾಸಿಸಿದರು.

ವಿದ್ಯುತ್‌ಪೂರೈಕೆಯ ಸಲುವಾಗಿ ಜೋಗ ವಿದ್ಯುದ್ಯೋಜನೆಯನ್ನು ಬೇಗ ಕಾರ್ಯರೂಪದಲ್ಲಿ ತರಲಾಗುವದೆಂದು ಆಶ್ವಾಸಿಸಿದರು.

ಕರ್ನಾಟಕವನ್ನು ಅಲಕ್ಷಿಸಿಲ್ಲ

ಧಾರವಾಡ ಜಿಲ್ಲಾ ಲೋಕಲ್ ಬೋರ್ಡಿನ ಮಾನಪತ್ರಕ್ಕೆ ಉತ್ತರ ಕೊಡುತ್ತ ಮುಂಬಯಿ ಸರಕಾರವು ಕರ್ನಾಟಕವನ್ನು ಅಲಕ್ಷಿಸಿಲ್ಲ ಎಂದು ಹೇಳಿ ಸರಕಾರ ಕೈಕೊಂಡ ಯೋಜನೆಗಳನ್ನು ಹೀಗೆ ವಿವರಿಸಿದರು.

"ಹೆಚ್ಚು ಆಹಾರ ಧಾನ್ಯ ಬೆಳೆಯಿರಿ" ಯೋಜನೆಯಲ್ಲಿ ಕೊಡಲ್ಪಟ್ಟ ಎಲ್ಲ ಬಗೆಯ ಸೌಕರ್ಯಗಳನ್ನು ಕರ್ನಾಟಕಕ್ಕೆ ಒದಗಿಸಿ ಕೊಡಲಾಗಿದೆ. ಕಾರವಾರದಲ್ಲಿಯ ಪಡ ಜಮೀನುಗಳನ್ನು ಸಾಗು ಮಾಡಲಾಗಿದೆ. ಕರಕಿ, ಕಜಗ್ಗಾ ಇದ್ದಲ್ಲೆಲ್ಲ ಟ್ರ್ಯಾಕ್ಟರುಗಳನ್ನು ಪೂರೈಸುವ ಯೋಜನೆ ಕೈಕೊಳ್ಳಲಾಗಿದೆ. ಸುಧಾರಿಸಿದ ಬೀಜಗಳನ್ನು ಪೂರೈಸಲಾಗಿವೆ. ಕರಾವಳಿ ದಂಡೆಯಲ್ಲಿ ಹಲ್ಲೆ ಕಾಯಿ ಬೆಳೆಯಲು ಅವಕಾಶ ಕೊಡಲಾಗಿದೆ. ಎಕರೆಗೆ ೩೦ ರೂಪಾಯಿಗಳಂತೆ ಇದಕ್ಕಾಗಿ ಹಣ ಕೊಡಲಾಗುತ್ತದೆ. ಗೊಬ್ಬರ ಪೂರೈಕೆಯ ಯೋಜನೆಗೆ ಪಲ್ಲ ಇರಾದಾಗಿದೆ. [illegible] ಧನ [illegible] ಕೈಕೊಂಡಿದೆ. ವರ್ಷ ಮಟಿ [illegible] ಒಳ್ಳ [illegible] ಬೆಳಗಾವಿಯಲ್ಲಿಯೂ ಈ [illegible] ಆಸ್ಪತ್ರೆಯ ಸ್ಥಳಕ್ಕೆ [illegible] ಯಲ್ಲಿ [illegible] ರೋಗಿಗಳ [illegible] ಯುವ ವಿಚಾರದಿದೆ.

ಕರ್ನಾಟಕದಲ್ಲಿ ಔದ್ಯೋಗಿಕ ಅಭಿವೃದ್ಧಿ ಯೋಜನೆಯ ಬಗ್ಗೆಯೂ ಸರಕಾರವು ವಿಚಾರ ಮಾಡಿದೆ. ಇಲ್ಲಿಯ ಸಾಧನ ಸಂಪತ್ತಿಯ ಪರಿಶೀಲನೆ ಮಾಡಲು ಸ್ಪೆಶಲ್ ಅಧಿಕಾರಿಯೊಬ್ಬನನ್ನು ನಿಯಮಿಸಲಾಗಿದೆ.

ಕರ್ನಾಟಕದಲ್ಲಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗುವದು. ಧಾರವಾಡದಲ್ಲಿ ಪ್ರಾದೇಶಿಕ ಗ್ರಂಥಾಲಯವನ್ನು ತೆರೆಯಲಾಗಿದೆ. ಈ ಗ್ರಂಥಾಲಯಕ್ಕೆ ೧೦೦೦೦ ರೂ. ವಾರ್ಷಿಕ ಕಾಣಿಕೆ ಬೇಗ ಸಿಕ್ಕಲಿರುವದು. ಕಳೆದ ಅಕ್ಟೋಬರದಲ್ಲಿ ಪ್ರಾದೇಶಿಕ ಪ್ರೌಢ ಶಿಕ್ಷಣ ಸಮಿತಿಯು ಸ್ಥಾಪಿತವಾಗಿದೆ. ಪದವೀಧರರಿಗಾಗಿ ಮೂಲ ಶಿಕ್ಷಣ ಕಾಲೇಜನ್ನು ತೆರೆಯಲಾಗಿದೆ. ಹರಿಜನೋದ್ಧಾರದ ವಿವಿಧ ಯೋಜನೆಗಳನ್ನೂ ಕೈಕೊಳ್ಳಲಾಗಿದೆ.

ಗವರ್ನರರು ಈ ಮುಖ್ಯ ಸಂಸ್ಥೆಗಳನ್ನು ಸಂದರ್ಶಿಸಿದ್ದಲ್ಲದೆ ಕರ್ನಾಟಕ ಕಾಲೇಜಿನಲ್ಲಿ ಸಸ್ಯಶಾಸ್ತ್ರ ಮಂದಿರ ಶಂಕು ಸ್ಥಾಪನೆ ಗಾಂಧೀಜಿಯ ಪೂರ್ಣಾಕೃತಿಯ ತೈಲಚಿತ್ರದ ಅನಾವರಣ ಮಾಡಿದರು. ಧಾರವಾಡ ಹರಿಜನ ವಿದ್ಯಾರ್ಥಿಗಳ ವಸತಿಗೃಹದ ಪ್ರಾರಂಭೋತ್ಸವ ಜರುಗಿಸಿದರು. ಕನ್ನಡ ಸಂಶೋಧನ ಸಂಸ್ಥೆಯನ್ನು ಸಂದರ್ಶಿಸಿ ಇಷ್ಟೊಂದು ಐತಿಹಾಸಿಕ ಅವಶೇಷಗಳುಳ್ಳ ಕರ್ನಾಟಕ, ಸ್ವತಂತ್ರ ಪ್ರಾಂತ ಪಡೆಯಲು ತಕ್ಕದಾಗಿದೆಯೆಂದು ಅಭಿಪ್ರಾಯಪಟ್ಟರು. ಹುಬ್ಬಳ್ಳಿಯಲ್ಲಿ ತಾಂತ್ರಿಕ ಶಿಕ್ಷಣ ಶಾಲೆಯ ಅಡಿಗಲ್ಲನ್ನು ಇಡುವಿ ಕರ್ನಾಟಕದಲ್ಲಿ



ರಾಣಿ ಮಹಾರಾಜಸಿಂಗರು ಧಾರವಾಡ ಸಿವಿಲ ಆಸ್ಪತ್ರೆಯಲ್ಲಿ ಶಿಶು ಕಲ್ಯಾಣ ಕೇಂದ್ರದಲ್ಲಿ ಮಕ್ಕಳಿಗೆ ಹಣ್ಣು ಹಂಚುತ್ತಿರುವರು.

ಮನ್ನಣೆ ಕೊಡಲಾಗಿದೆ. ಧಾರವಾಡದಲ್ಲಿ ಕೃಷಿ ಮಹಾವಿದ್ಯಾಲಯ ಸ್ಥಾಪಿಸಿದ್ದಲ್ಲದೆ ಕರ್ನಾಟಕದ ಇತರ ಭಾಗಗಳಲ್ಲಿ ಕೃಷಿಶಾಲೆಗಳನ್ನು ಸಂಸ್ಥಾಪಿಸಲಾಗಿದೆ. ಬೆಳೆಗಳ ರೋಗ ಪ್ರತಿಬಂಧಿಸಲು ಯೋಜಿಸಿದ್ದಲ್ಲದೆ ಕಾಡಮೃಗಗಳಿಂದ ಅವನ್ನು ರಕ್ಷಿಸಲು ಬೇಟೆಯ ಯೋಜನೆ ಮಾಡಲಾಗಿದೆ. ಧಾರವಾಡ ಬೆಳಗಾವ ವಿಜಾಪುರ ಜಿಲ್ಲೆಗಳಲ್ಲಿ ಬುಡಕಿ ನೀರಾವರಿ ಯೋಜನೆಗಳನ್ನು ಕೈಕೊಳ್ಳಲಾಗಿದೆ. ಕರ್ನಾಟಕದಲ್ಲಿಯ ಜಿಲ್ಲಾ ಗ್ರಾಮೋದ್ಧಾರ ಸಮಿತಿಗಳಿಗೆ ಹೆಚ್ಚು ಧನಸಹಾಯವನ್ನು ಮಾಡಿದ್ದಾಗಿದೆ.

ಯುದ್ಧೋತ್ತರ ಅಭಿವೃದ್ಧಿ ಯೋಜನೆಯಲ್ಲಿ ಕರ್ನಾಟಕದಲ್ಲಿ ೫೩ ಮಾರ್ಗ ಯೋಜನೆಗಳನ್ನು ಸೇರಿಸಿದ್ದು ಅವುಗಳಲ್ಲಿ ೩೫ ಯೋಜನೆಗಳು ಈಗಾಗಲೆ ಕಾರ್ಯರೂಪಕ್ಕಿಳಿದಿವೆ. ಉಳಿದ ಯೋಜನೆಗಳ ಕಾರ್ಯವೂ ಭರದಿಂದ ಸಾಗಿದೆ. ಸಂಪರ್ಕ ಮಂಡಳದಲ್ಲಿ ಕರ್ನಾಟಕ ವಣಿಕ್ ಸಂಘಕ್ಕೆ ಪ್ರಾತಿನಿಧ್ಯ ಕೊಡಲಾಗಿದೆ.

ಹುಬ್ಬಳ್ಳಿಯಲ್ಲಿ ವೈದ್ಯಕೀಯ ಕಾಲೇಜೊಂದನ್ನು ಸ್ಥಾಪಿಸಲಾಗುವದು. ಸಂಚಾರೀ ಆಸ್ಪತ್ರೆಯನ್ನು ಕಾಯಂವಾಗಿ ದಕ್ಷಿಣ ಭಾಗ ಆ ಶಿಕ್ಷಣದ ಪ್ರಾರಂಭಮಾಡಿದರು. ರೇಲ್ವೆ ಕೆಲಸಗಾರ ಸಂಘದ ಕಟ್ಟಡದ ಶಂಕು ಸ್ಥಾಪನೆ, ಹರಿಜನ ಬಾಲಿಕಾಶ್ರಮ ಕ್ರಿಮಿನಲ್ ಸೆಟ್ಲಮೆಂಟಿಗೆ ಭೆಟ್ಟಿ ಕೊಟ್ಟು ಗದುಗಿಗೆ ಪ್ರಯಾಣ ಬೆಳಸಿದರು.

ಗದಗಿನಲ್ಲಿ ಗವರ್ನರರು ಕಾಶೀಬಾಯಿ ಮುಶೂರ್ಶಾಸ್ತ್ರದಲ್ಲಿ 'ಕ್ಷ' ಕಿರಣಶಾಖೆಯ ಉದ್ಘಾಟನೆಯನ್ನು ಮಾಡಿದರು.

ಗದಗಿನಲ್ಲಿಯ ಕಾರ್ಯಕ್ರಮ ಮುಗಿಸಿಕೊಂಡು ಗವರ್ನರ ದಂಪತಿಗಳು ವಿಜಾಪುರಕ್ಕೆ ಪ್ರಯಾಣ ಬೆಳಸಿದರು. ದಾರಿಯಲ್ಲಿ ಹೊಳೆ ಆಲೂರ ಸ್ಟೇಶನದಲ್ಲಿ ಬೇರೆ ಬೇರೆ ಸಂಘ ಸಂಸ್ಥೆಗಳು ಅವರನ್ನು ಸತ್ಕರಿಸಿದವು.

ರಾಣೀ ಮಹಾರಾಜಸಿಂಗರು ಧಾರವಾಡದಲ್ಲಿ ವನಿತಾ ಸೇವಾಸಮಾಜವನ್ನು ೬ ನೇ ತಾರೀಕು ಸಂದರ್ಶಿಸಿ ಶ್ರೀಮತಿ ಭಾಗೀರಥೀಬಾಯಿ ಪುರಾಣಿಕ ಇವರೊಬ್ಬರೇ ಬೆಳಸಿದ ಆ ಭವ್ಯ ಸಂಸ್ಥೆಗಾಗಿ ಅವರನ್ನು ಕೊಂಡಾಡಿದರು. ಅನಂತರ ಸಿವಿಲ ಆಸ್ಪತ್ರೆ ಹೆರಿಗೆ ಆಸ್ಪತ್ರೆಗಳನ್ನು ಸಂದರ್ಶಿಸಿದರು. ಹುಬ್ಬಳ್ಳಿಯಲ್ಲಿ ಭಗಿನಿಮಂಡಳ ಶಿಶುವಿಹಾರ ಹೆಣ್ಣುಮಕ್ಕಳ ಆಸ್ಪತ್ರೆ ಮೊದಲಾದವುಗಳನ್ನು ಸಂದರ್ಶಿಸಿ ಅಲ್ಲಿನ ಚಟುವಟಿಕೆಗಳನ್ನು ನೋಡಿ ಸಂತೋಷ ವ್ಯಕ್ತಪಡಿಸಿದರು.

ವ್ಯಾಪಾರ ಪ್ರಪಂಚ

ಮುಂಬಯಿ ಶೇರ ಪೇಟೆ

ತಾ. [illegible]

ಶೇರ ಪೇಟೆಯಲ್ಲಿ ಈ ವಾರ ಸ್ವಲ್ಪ ಸ್ಥಿರ ವಾತಾವರಣ ಕಂಡು ಬಂತು. ಅಧಿಕಾಂಶ ಪಾಲುಗಳಲ್ಲಿ ವಿಶೇಷ ಅಂತರವಾಗಿಲ್ಲ. ಸಟ್ಟಾ ಕಾರಭಾರು ಕೈಕೊಳ್ಳದಿರುವ ಆರ್ಡರ ಜೋರಿನ ಅದಿಂದ ವರ್ತಕರು ಸಂಕೋಚಪಟ್ಟಿದ್ದಾರೆ.

ಜವಳಿ

ಬಾಂಬೆ ಡಾಯಿಂಗ್	[illegible]
ಸೆಂಟ್ರಲ ಇಂಡಿಯಾ	[illegible]
ಗೋಕಾಕ	[illegible]
ಕೊಹಿನೂರು	[illegible]
ಸಿಂಪ್ಲೆಕ್ಸ	[illegible]
ಸ್ವದೇಶಿ	[illegible]

ಇತರ

ಬೇಲಾಪುರ ಸಕ್ಕರೆ	[illegible]
ಸಿಂಧ್ಯಾ ಸ್ಟೀಮ	[illegible]
ಟಾಟಾ ಸ್ಟೀಲ ಡೆಪರ್ಡ	[illegible]
ಅಸೊ. ಸಿಮೆಂಟ್ಸ	[illegible]
ಸೆಂಟ್ರಲ ಬ್ಯಾಂಕ	[illegible]
ಇಂಪೀರಿಯಲ್ ಬ್ಯಾಂಕ ಫೂಲ್	[illegible]
ಇಂಡಿಯನ್ ಬ್ಯಾಂಕ	[illegible]
ರಿಝರ್ವ ,,	[illegible]

ಚಿನ್ನ--ಬೆಳ್ಳಿ

ಚಿನಿವಾರ ಪೇಟೆಯಲ್ಲಿ ಬೆಲೆಗಳು ಕಳೆದ ವಾರಕ್ಕಿಂತ ಏರಿವೆ.

ತಯಾರಿ ಚಿನ್ನ	[illegible]
ತಯಾರಿ ಬೆಳ್ಳಿ	[illegible]
ವಾಯದಾ ,,	[illegible]
ಸಾವರಿನ	[illegible]

ಅರಳೆ

ಅರಳೆ ಬೆಲೆಗಳಲ್ಲೂ ವಿಶೇಷ ಹೆಚ್ಚುಕಡಿಮೆಯಿಲ್ಲ.

ಮಾರ್ಚ	[illegible]
ಮೇ	[illegible]
ಜುಲೈ	[illegible]
ಸಪ್ಟೆಂಬರ	[illegible]

ಎಣ್ಣೆಕಾಳು

ಶೇಂಗಾ	[illegible]
ಅಗಸಿ	[illegible]
,, ಹೊಸ ಬೆಳೆ	[illegible]
ಅಗಸಿ ಎಣ್ಣೆ	[illegible]

ಸಾಂಗಲಿ

	ರೂ. [illegible]
ಅರಸಿಣ ಹೊಸ (ಹೇರು)	[illegible]
ಶೇಂಗಾ ಖಂಡಿ	[illegible]
ಮೆಣಸಿನಕಾಯಿ ಹೊಸ ಹೇರು	[illegible]
ಬೆಲ್ಲ ,,	[illegible]

ಹುಬ್ಬಳ್ಳಿ

	ರೂ. [illegible]
ಜ. ಹತ್ತಿ ಸಗಳೆ	[illegible]
,, ಅರಳೆ ,,	[illegible]
ಜೋಳ (ಜೀಲಕ್ಕೆ)	[illegible]
ಬಿಳಿ ಗೋದಿ ಚೀಲ	[illegible]
ಕೆಂಪು ,, ,,	[illegible]
ಸಜ್ಜಿಕ್ಕೆ ,,	[illegible]
ಜೊಡ್ಡಕ್ಕೆ ,,	[illegible]
ಕುಸುಬೆ ,,	[illegible]
ಶೇಂಗಾ ಹೇರು	[illegible]
,, ಹೊಸ	[illegible]

ಹೈದರಾಬಾದಕ್ಕೆ ೧ ಕೋಟಿ ಹಿಂದೀ ನಾಣ್ಯ

ಹೈದರಾಬಾದದ ಚಲನ ಸೌಕರ್ಯಕ್ಕಾಗಿ ಹಿಂದುಸ್ಥಾನ ಸರಕಾರವು ತಾ. ೧ ರಂದು ವಿಶೇಷ ವಿಮಾನದಿಂದ ಒಂದು ಕೋಟಿ ರೂಪಾಯಿಯನ್ನು ಹಿಂದೀ ನಾಣ್ಯಗಳಲ್ಲಿ ಹೈದರಾಬಾದಕ್ಕೆ ಕಳಿಸಿದೆಯೆಂದೂ ಈ ಹಣವನ್ನು ಸ್ವೀಕರಿಸಿ ಅವಶ್ಯಕತೆ ಇದ್ದಂತೆ ಹೈದರಾಬಾದ ಜಿಲ್ಲಾ ಠಾಣೆಗಳಿಗೆ ಹಂಚಿ ಕೊಡಲಾಗುವದೆಂದೂ ತಿಳಿಯುತ್ತದೆ.

ಬಾಡಿಗೆಗಳನ್ನು ಸಂದರ್ಶಿಸಿ ಅಲ್ಲಿನ ಚಟುವಟಿಕೆಗಳನ್ನು ನೋಡಿ ಸಂತೋಷ ವ್ಯಕ್ತಪಡಿಸಿದರು.

ಕರ್ಮವೀರ

ಶ್ರೀಮಚ್ಚಾಲುಕ್ಯ ವಿಕ್ರಮ ವರ್ಷ ೮೭೦
ಅಶ್ವಿನ ಶು॥ ೯ ಸೋಮವಾರ

ಗವರ್ನರರ ಸಂಚಾರ

ಮುಂಬಯಿ ಪ್ರಾಂತದ ಗವರ್ನರರಾದ ಸರ್ ರಾಜಾ ಮಹಾರಾಜಸಿಂಗರು ರಾಣಿ ಮಹಾರಾಜಸಿಂಗರೊಡನೆ ಕಳೆದ ವಾರ ಬೆಳಗಾವಿ ಧಾರವಾಡ, ಹುಬ್ಬಳ್ಳಿ, ಗದಗ, ವಿಜಾಪುರಗಳಿಗೆ ಭೆಟ್ಟಿಕೊಟ್ಟು ಕರ್ನಾಟಕ ಜನತೆಯ ಬೇಡಿಕೆಗಳನ್ನು ಕಷ್ಟ ನಷ್ಟಗಳನ್ನು ತಿಳಿದುಕೊಂಡರು. ಅವರ ಈ ಸಂಚಾರದ ಸಂಕ್ಷಿಪ್ತ ವರದಿಯನ್ನು ಬೇರೆ ಕಡೆ ಕೊಟ್ಟಿದ್ದೇವೆ. ಹಲವಾರು ಆಡಳಿತಗಳಲ್ಲಿ ಹರಿದು ಹಂಚಿ ಹೋದ ಕನ್ನಡಿಗರು ಸ್ವತಂತ್ರ ಪ್ರಾಂತಕ್ಕಾಗಿ ಎಷ್ಟೊಂದು ತಳಮಳಿಸುತಿರುವರೆಂಬುದು ಈ ಸಂಚಾರದಲ್ಲಿ ಗವರ್ನರರಿಗೆ ತಿಳಿದಿರಲು ಸಾಕು. ಗವರ್ನರರಾದರೂ ಕನ್ನಡಿಗರ ಈ ಒಮ್ಮತದ ಬೇಡಿಕೆಯನ್ನು ಅರಿತುಕೊಂಡು ಕೇಂದ್ರಸರಕಾರಕ್ಕೆ ಆ ಬಗ್ಗೆ ತಿಳಿಸುವದಾಗಿ ಆಶ್ವಾಸಿಸಿದುದು ಸಂತೋಷಪ್ರದವಾಗಿದೆ. ಕೇಂದ್ರ ಸರಕಾರದವರೂ ಈ ಪ್ರಶ್ನೆಯನ್ನು ಹೆಚ್ಚು ಸಹಾನುಭೂತಿಯಿಂದ ನೋಡಬೇಕೆಂದೂ ಭಾಷಾನ್ವಯ ಪ್ರಾಂತ ರಚನೆಯಿಂದ ಜನತೆಯಲ್ಲಿ ಪ್ರತ್ಯೇಕತಾಭಾವನೆ ಉಂಟಾಗುವದೆಂಬ ಪೂರ್ವಗ್ರಹದೂಷಿತರಾಗಬಾರದೆಂದೂ ನಾವು ಬಿನ್ನವಿಸುತ್ತೇವೆ. ಕಾಶ್ಮೀರ ಸಮಸ್ಯೆ ಮತ್ತು ದೇಶದ ಹಾಗು ಸರಕಾರದ ಆರ್ಥಿಕ ದುಃಸ್ಥಿತಿಯ ಈ ಸಮಯದಲ್ಲಿ ಭಾಷಾನ್ವಯ ಪ್ರಾಂತಗಳನ್ನು ರಚಿಸಿದ್ದಾದರೆ ಮತ್ತಷ್ಟು ತೊಡಕುಗಳುಂಟಾಗುವವೆಂದು ಭಾವಿಸದೆ ಒಂದೇ ಆಡಳಿತದಲ್ಲಿ ಬರುವ ಆಯಾ ಭಾಷಾನ್ವಯ ಪ್ರಾಂತಗಳಲ್ಲಿಯ ಜನರು ಹೆಚ್ಚು ಆಸ್ಥೆಯಿಂದ ಮತ್ತು ಸಂಘಟಿತವಾಗಿ ಕೇಂದ್ರ ಸರಕಾರದ ಈ ಸಮಸ್ಯೆಗಳನ್ನ ಬಿಡಿಸುವಲ್ಲಿ ಸಹಾಯ ಸಲ್ಲಿಸಬಲ್ಲರೆಂದು ನಾವು ಸೂಚಿಸಬಯಸುತ್ತೇವೆ. ಕರ್ನಾಟಕದ ಪರವಾಗಿಯಂತೂ ನಾವು ಈ ಬಗ್ಗೆ ಸಂಪೂರ್ಣ ಸಹಾಯದ ಆಶ್ವಾಸನವನ್ನು ಕೊಡುತ್ತೇವೆ. ಭಾಷಾನ್ವಯ ಪ್ರಾಂತರಚನಾ ವಿಚಾರಣೆ ಸಮಿತಿಯ ವರದಿ ಹೊರಬೀಳುವವರೆಗೆ ತಾಳ್ಮೆಯಿಂದ ಇರಬೇಕೆಂದು ಗವರ್ನರರು ಸೂಚಿಸಿದ್ದು ಯಥಾಯೋಗ್ಯವಾಗಿದೆ. ಕನ್ನಡಿಗರು ಮತ್ತು ಇತರ ಭಾಷಾನ್ವಯ ಪ್ರಾಂತ ರಚಿಸಬಯಸುವವರು ಅದರಂತೆ ನಡೆಯಬೇಕೆಂದು ಕೇಳಿಕೊಳ್ಳುತ್ತೇವೆ. ಭಾಷಾನ್ವಯ ಪ್ರಾಂತರಚನೆಯನ್ನು ವಿರೋಧಿಸುವವರು ಇಲ್ಲವೆ ಅದನ್ನು ಮುಂದಕ್ಕೆ ಹಾಕಬೇಕೆಂದು ಅಪೇಕ್ಷಿಸುವವರು ಈ ಸಮಯದಲ್ಲಿ ಮೌನವನ್ನು ತಾಳಬೇಕಲ್ಲದೆ ಕಮೀಶನ್ನಿನವರನ್ನು ಪೂರ್ವಗ್ರಹದೂಷಿತರನ್ನಾಗಿ ಮಾಡುವಂಥ ಭಾಷಣ ಮತ್ತು ಪ್ರಕಟನೆಗಳನ್ನು ತೆಗೆಯಬಾರದೆಂದು ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತೇವೆ.

ಗವರ್ನರ ಸಾಹೇಬರು ಏಕೀಕರಣದ ಬಗ್ಗೆ ಈ ಬಗೆಯ ಆಶ್ವಾಸನ ಕೊಟ್ಟಿದ್ದಲ್ಲದೆ ತಮ್ಮ ಸರಕಾರವು ಕರ್ನಾಟಕವನ್ನು ಅಲಕ್ಷಿಸಿಲ್ಲ ಎಂದು ಹೇಳಿ ಸರಕಾರದವರು ಕರ್ನಾಟಕದಲ್ಲಿ ಕೈಕೊಂಡ ವಿವಿಧ ಯೋಜನೆಗಳನ್ನು ವಿವರಿಸಿದರು. ಕೇವಲ ಯೋಜನೆಗಳ ವಿವರಣೆಯಿಂದ ಕರ್ನಾಟಕಸ್ಥರು ಸಂತುಷ್ಟರಾಗಲಾರರೆಂದು ನಾವೀ ಸಮಯದಲ್ಲಿ ಗವರ್ನರರ ಮತ್ತು ಅವರ ಸರಕಾರದ ಗಮನಕ್ಕೆ ತರಬಯಸುತ್ತೇವೆ. ಹುಬ್ಬಳ್ಳಿಯಂಥ ಮಹತ್ವದ ನಗರದಲ್ಲಿ ಯುದ್ಧ ಮುಗಿದು ಎಷ್ಟೋ ವರ್ಷಗಳಾಗಿ ಹೋಗಿದ್ದರೂ ಇಪ್ಪತ್ತು ನಾಲ್ಕು ಗಂಟೆಗಳ ವರೆಗೆ ವಿದ್ಯುತ್ತು ಸಿಕ್ಕಬಾರದೆಂದರೆ ಬೀದಿಗಳಲ್ಲಿ ವಿದ್ಯುದ್ದೀಪಗಳಿರಬಾರದೆಂದರೆ ಅದೆಂತಹ ದುರ್ದೈವವು? ಇದರಿಂದ ಔದ್ಯೋಗಿಕ ಪ್ರಗತಿಗಾಗಿ ಬಹಳ ತೊಂದರೆಯಾಗಿದೆ. ಇಲ್ಲಿಯ ವಿದ್ಯುತ್ಕಂಪನಿಯು ಈಗ ಸರಕಾರದ ವಶದಲ್ಲಿದ್ದರೂ ಅವಶ್ಯಕ ಯಂತ್ರಗಳನ್ನು ತರಿಸಿ ನಗರಕ್ಕೆ ಬೇಕಾದಷ್ಟು ವಿದ್ಯುತ್ತನ್ನು ಪೂರಯಿಸಲು ಆಗದಿದ್ದುದು ಅತ್ಯಂತ ವಿಷಾದಕರ ಮತ್ತು ಆಶ್ಚರ್ಯಕರವಾದ ಸಂಗತಿಯಾಗಿದೆ. ಈ ಬಗ್ಗೆ ಗವರ್ನರ ಸಾಹೇಬರು ಹೆಚ್ಚು ಲಕ್ಷ್ಯ ಪೂರೈಸುವದು ಅವಶ್ಯವಾಗಿದೆ. ಜೋಗ ವಿದ್ಯುತ್ಪೂರೈಕೆ, ನೀರ ಸಾಗರಯೋಜನೆ, ಘಟಪ್ರಭಾ, ಧರ್ಮಾ ಕಾಲುವೆಗಳ ಯೋಜನೆ ಮೊದಲಾದವುಗಳ ಬಗ್ಗೆ ಗವರ್ನರರು ಆಶ್ವಾಸನ ಕೊಟ್ಟದ್ದು ಸಂತೋಷಪ್ರದವಾಗಿದ್ದರೂ ಅವೆಲ್ಲ ಬೇಗ ಕಾರ್ಯರೂಪದಲ್ಲಿ ಬಂದು ಅವುಗಳ ಫಲವು ಕನ್ನಡಿಗರಿಗೆ ಸಿಕ್ಕುವಂತಾಗಲೆಂದು ಆಶಿಸುತ್ತೇವೆ. ವೈದ್ಯಕೀಯ ಕಾಲೇಜಿನ ಬಗ್ಗೆ ಗವರ್ನರರು ವ್ಯಕ್ತಪಡಿಸಿದ ಅಭಿಪ್ರಾಯವು ಸ್ವಲ್ಪೂ ಸಮಾಧಾನಕರವಾಗಿಲ್ಲ. ಬೇರೆಕಡೆ ಅಂಥ ಕಾಲೇಜು ಸ್ಥಾಪಿತವಾದರೆ ಕರ್ನಾಟಕದಲ್ಲಿ ಏಕಾಗಬಾರದು? ಹುಬ್ಬಳ್ಳಿಯಲ್ಲಿ ಈ ಕಾಲೇಜನ್ನು ಬೇಗನೆ ಸ್ಥಾಪಿಸುವ ಮತ್ತು ಕನ್ನಡಿಗರು ಮುಂದೆ ಮಾಡಿದ ಇತರ ಬೇಡಿಕೆಗಳನ್ನು ಪೂರಯಿಸುವತ್ತ ನಮ್ಮ ಗವರ್ನರರು ಮತ್ತು ಅವರ ಸರಕಾರದವರು ಗಮನಿಸಬೇಕೆಂದು ಬಿನ್ನವಿಸುತ್ತೇವೆ.



ಮುಖ್ಯ ಮಂತ್ರಿ ಪಂ. ಜವಾಹರಲಾಲ ನೆಹರೂ ಅವರು ಕಾಮನ್‌ವೆಲ್ತ ಮುಖ್ಯ ಮಂತ್ರಿ ಪರಿಷತ್ತಿಗಾಗಿ ಲಂಡನ್ನಿಗೆ ಹೊರಟು ನಿಂತಾಗ ದಿಲ್ಲಿಯ ಪಾಲಮ ವಿಮಾನ ನಿಲ್ದಾಣದಲ್ಲಿ ತೆಗೆದ ಭಾವಚಿತ್ರ. ಗವರ್ನರ ಜನರಲ್ ರಾಜಾಜಿ, ಉಪ ಮುಖ್ಯ ಮಂತ್ರಿ ಸರದಾರ ವಲ್ಲಭಭಾಯಿ ಮೊದಲಾದ ಮಂತ್ರಿವರ್ಯರು ಅವರನ್ನು ಬೀಳ್ಕೊಳ್ಳಲು ಬಂದಿರುವರು.

ವಾರದ ಸಿಂಹಾವಲೋಕನ

ವಸಾಹತು ಮಂತ್ರಿಗಳ ಪರಿಷತ್ತು

ವಸಾಹತು ಮುಖ್ಯ ಮಂತ್ರಿಗಳ ಪರಿಷತ್ತು ಈ ದಿನ ಲಂಡನಿನಲ್ಲಿ ಬ್ರಿಟಿಶ ಮುಖ್ಯ ಮಂತ್ರಿ ಅಟ್ಲಿಯವರ ಸ್ವಾಗತ ಭಾಷಣದಿಂದ ಪ್ರಾರಂಭವಾಗುವದು. ಸುಮಾರು ಹದಿನೈದು ದಿನಗಳ ವರೆಗೆ ಈ ಪರಿಷತ್ತು ನಡೆಯಬಹುದೆಂದು ನಿರೀಕ್ಷಿಸಲಾಗಿದೆ. ವಸಾಹತು ರಾಷ್ಟ್ರಗಳಿಗೆಲ್ಲ ಸಂಬಂಧಿಸಿದ ಬರ್ಲಿನ ಸಮಸ್ಯೆ, ಆಗ್ನೇಯ ಏಶಿಯದ ವಿಚಾರ, ಪಶ್ಚಿಮ ರಾಷ್ಟ್ರಗಳ ಗುಂಪಿಗೂ ವಸಾಹತು ರಾಷ್ಟ್ರಗಳಿಗೂ ಇರುವ ಸಂಬಂಧ, ಸ್ಟರ್ಲಿಂಗ ಹಣದ ಸಮಸ್ಯೆ ಸಂರಕ್ಷಣೆಯ ವಿಚಾರ, ಸಂಪರ್ಕ ಸೌಕರ್ಯದ ಅಭಿವೃದ್ಧಿ, ಸುದ್ದೀ ವಿನಿಮಯ, ವಲಸೆಯ ಸಮಸ್ಯೆ ಮೊದಲಾದ ಸಾಮಾನ್ಯ ವಿಷಯಗಳು ಈ ಪರಿಷತ್ತಿನಲ್ಲಿ ಚರ್ಚಿಸಲ್ಪಡುವವಲ್ಲದೆ ಕಾಮನ್‌ವೆಲ್ತಿನ ಘಟನೆಯೆಂತಿರಬೇಕು, ಮತಭೇದವುಂಟಾದಾಗ ಅದನ್ನು ಬಗೆಹರಿಸಿಕೊಡಲು ಒಂದು ಸಂಸ್ಥೆಯ ಅವಶ್ಯಕತೆ ಮೊದಲಾದ ವಿಷಯಗಳೂ ಚರ್ಚಿಸಲ್ಪಡುವವು. ಈ ರೀತಿ ಹಲವು ಮಹತ್ವದ ವಿಷಯಗಳು ಪರಿಷತ್ತಿನಲ್ಲಿ ಚರ್ಚೆಗೆ ಬರಲಿರುವದರಿಂದ ಇದು ಅತ್ಯಂತ ಮಹತ್ವದ ಪರಿಷತ್ತಾಗಿದೆ. ಈ ಪರಿಷತ್ತಿನಲ್ಲಿ ಭಾಗ ವಹಿಸಲು ಹಿಂದುಸ್ತಾನದ ಮುಖ್ಯ ಮಂತ್ರಿಗಳಾದ ಪಂಡಿತ ಜವಾಹರಲಾಲರು ಹೋಗಿರುವರು. ಈ ಮೊದಲು ಇಂಥ ಪರಿಷತ್ತಿಗೆ ಹಿಂದುಸ್ತಾನದ ಪ್ರತಿನಿಧಿಗಳು ಹೋಗುತ್ತಿದ್ದರು. ಆದರೆ ಸ್ವತಂತ್ರ ಹಿಂದುಸ್ತಾನದ ಪ್ರಥಮ ಮುಖ್ಯ ಮಂತ್ರಿಗಳೆಂದು ಹೋಗುವ ಸನ್ಮಾನವು ಪಂಡಿತ ಜವಾಹರಲಾಲರಂಥ ರಾಷ್ಟ್ರ ದುರಂಧರರಿಗೆ ದೊರೆತುದು ಅಭಿನಂದನೀಯವಾಗಿದೆ. ಹಿಂದುಸ್ತಾನವು ಬ್ರಿಟಿಶ ಕಾಮನ್‌ವೆಲ್ತದಲ್ಲಿ ಉಳಿಯಬೇಕೋ ಇಲ್ಲವೆ ಬೇರೆಯಾಗಬೇಕೋ ಎಂಬುದರ ನಿಷ್ಕರ್ಷೆ ಈ ಪರಿಷತ್ತಿನಲ್ಲಿಯ ಚರ್ಚೆಯಿಂದ ಆಗಬಹುದಾಗಿದೆ. ಮುಖ್ಯ ಮಂತ್ರಿಗಳು ಪ್ರತ್ಯಕ್ಷವಾಗಿ ಈ ಪರಿಷತ್ತಿನಲ್ಲಿ ಭಾಗ ವಹಿಸುವದರಿಂದ ಆಯಾ ಕಾಮನ್‌ವೆಲ್ತಗಳ ಮತ್ತು ಬ್ರಿಟನ್ನದ ಧುರೀಣರ ಅಭಿಪ್ರಾಯವನ್ನು ತಿಳಿದುಕೊಳ್ಳಲು ಅವಕಾಶವುಂಟಾಗಿದೆ. ಹಿಂದುಸ್ತಾನದ ವಿದೇಶ ಧೋರಣದ ಬಗ್ಗೆ ಅನೇಕ ಕಡೆ ಅಪಪ್ರಚಾರ ಮಾಡಲಾಗುತಿದೆ. ಮುಖ್ಯ ಮಂತ್ರಿಗಳು ಅದನ್ನು ಸ್ಪಷ್ಟಪಡಿಸಿ ಈ ಅಪಪ್ರಚಾರಕ್ಕೆ ಅರೆದಾಳ ಹಾಕುವರೆಂದು ನಂಬುತ್ತೇವೆ. ಅನೇಕ ತೊಡಕಿನ ಪ್ರಶ್ನೆಗಳು ಈ ಪರಿಷತ್ತಿನಲ್ಲಿ ಬಿಡಿಸಲ್ಪಟ್ಟು ಆಯಾ ಕಾಮನ್‌ವೆಲ್ತ ರಾಷ್ಟ್ರಗಳ ಸಂಬಂಧವು ಹೆಚ್ಚು ಸೌಹಾರ್ದಮಯವಾಗಲೆಂದು ಆಸಿಸುತ್ತೇವೆ.

ತಾಂತ್ರಿಕ ಶಿಕ್ಷಣದ ಯೋಜನೆ

ಕರ್ನಾಟಕದಲ್ಲಿ ತಾಂತ್ರಿಕಶಿಕ್ಷಣದ ಏರ್ಪಾಡು ಮಾಡುವದಕ್ಕಾಗಿ ಹುಬ್ಬಳ್ಳಿಯಲ್ಲಿ ಒಂದು ತಾಂತ್ರಿಕ ಹಾಯಸ್ಕೂಲು ಸ್ಥಾಪಿತವಾಗಲಿದ್ದು ಅದರ ಶಂಕುಸ್ಥಾಪನೆಯನ್ನು ಪ್ರಾಂತದ ಗವರ್ನರರಾದ ಸರ್ ಮಹಾರಾಜಸಿಂಗರು ಮೊನ್ನೆ ೭ ನೆಯ ತಾರೀಕಿನ ದಿನ ಮಾಡಿದರು. ಸದ್ಯದ ಪರಿಸ್ಥಿತಿಯಲ್ಲಿ ತಾಂತ್ರಿಕ ಶಿಕ್ಷಣವು ಎಷ್ಟು ಅವಶ್ಯವಾಗಿದೆಂಬುದನ್ನು ಬೇರೆ ಹೇಳಬೇಕಿಲ್ಲ. ಜಗತ್ತಿನಲ್ಲಿ ಔದ್ಯೋಗೀಕರಣವು ಭರದಿಂದ ಸಾಗಿರುವಾಗ ಹಿಂದುಸ್ತಾನವು ಹಿಂದೆ ಬಿದ್ದರೆ ನಡೆಯಲಾರದು. ಹಿಂದುಸ್ತಾನವು ಮನೆಮಾರಿಗೆಯ ಕೈಗಾರಿಕೆಗೆ ಹೆಚ್ಚು ಪ್ರೋತ್ಸಾಹ ಕೊಡುವದಾದರೂ ಮಹತ್ವದ ಯಂತ್ರ ಮತ್ತು ಯಂತ್ರೋಪಕರಣಗಳನ್ನು ಸಿದ್ಧ ಮಾಡುವದು ಅತ್ಯವಶ್ಯವೆಂದು ಹೇಳದೆ ಗತ್ಯಂತರವಿಲ್ಲ. ಇಷ್ಟು ವರುಷಗಳ ವರೆಗೆ ಪರಕೀಯ ಸರಕಾರವು ಇಲ್ಲಿ ಆಡಳಿತ ಸಾಗಿಸಿದ್ದರಿಂದ ನಮ್ಮ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಕೇವಲ ಕಾರಕೂನರಾಗುವ ಶಿಕ್ಷಣ ಕೊಡಲಾಯಿತಲ್ಲದೆ ತಾಂತ್ರಿಕ ಶಿಕ್ಷಣದತ್ತ ಗಮನಿಸಲಿಲ್ಲ. ಅಂತೆಯೇ ಯಂತ್ರ ಯಂತ್ರೋಪಕರಣಗಳಿಗಾಗಿ ನಾವು ಪರದೇಶಗಳ ಮೋರೆಯನ್ನು ನೋಡಬೇಕಾದ ಪ್ರಸಂಗ ಬಂದಿದೆ. ಇದನ್ನು ಹೋಗಲಾಡಿಸಬೇಕಾದರೆ ಇಲ್ಲಿಯೂ ಇಂತಹ ತಾಂತ್ರಿಕ ಸಾಲೆಗಳನ್ನು ತೆರೆದು ನಮ್ಮ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ತಾಂತ್ರಿಕ ಶಿಕ್ಷಣವನ್ನು ಕೊಡಬೇಕು. ಕರ್ನಾಟಕದಲ್ಲಿ ಈ ಬಗೆಯ ಶಿಕ್ಷಣದ ಏರ್ಪಾಡು ಈ ವರೆಗೆ ಇರಲಿಲ್ಲ. ಈ ಕೊರತೆಯನ್ನು ಹೋಗಲಾಡಿಸಲು ಸರಕಾರದವರು ಹುಬ್ಬಳ್ಳಿಯಲ್ಲಿ ತಾಂತ್ರಿಕ ಹಾಯಸ್ಕೂಲು ಸ್ಥಾಪಿಸಲಣಿಯಾದದ್ದು ಅಭಿನಂದನೀಯವಾಗಿದೆ. ಕರ್ನಾಟಕದ ವಿದ್ಯಾರ್ಥಿ ವಿದ್ಯಾರ್ಥಿನಿಯರು ಇದರ ಲಾಭವನ್ನು ಪಡೆಯುವರೆಂದು ಆಸಿಸುತ್ತೇವೆ. ಈ ಹಾಯಸ್ಕೂಲು ಯೋಜನೆ ಆರು ಲಕ್ಷ ರೂಪಾಯಿಗಳದಿದೆ. ೫೦ ವಿದ್ಯಾರ್ಥಿಗಳಿಗಾಗಿ ವಸತಿಗೃಹದ ವ್ಯವಸ್ಥೆ ಇದ್ದು ಒಟ್ಟು ೩೦೦ ವಿದ್ಯಾರ್ಥಿಗಳಿಗೆ ಪ್ರವೇಶ ಕೊಡಲಾಗುವದು. ಮೊದಲಿನ ತರಗತಿಗಳು ಉಳಿದ ಹಾಯಸ್ಕೂಲುಗಳಲ್ಲಿಯಂತೆಯೇ ಇದ್ದು ಮುಂದೆ ಮೂರು ವರುಷ ತಾಂತ್ರಿಕ ಶಿಕ್ಷಣಕೊಡಲಾಗುವದು. ಇಲ್ಲಿ ಶಿಕ್ಷಣ ಹೊಂದಿದ ವಿದ್ಯಾರ್ಥಿಗಳು ಬೇರೆ ಬೇರೆ ಕಾರಖಾನೆಗಳಲ್ಲಿ ಪ್ರಾಯೋಗಿಕ ಶಿಕ್ಷಣ ಪಡೆಯಬಹುದು. ಮುಂಬಯಿ ಸರಕಾರವು ಕೈಕೊಂಡ ತಾಂತ್ರಿಕ ಶಿಕ್ಷಣದ ಈ ಯೋಜನೆ ಯಶಸ್ವಿಯಾಗಿ ಅದರ ಪ್ರಯೋಜನವು ಕರ್ನಾಟಕಕ್ಕೂ ಇಡೀ ಪ್ರಾಂತಕ್ಕೂ ದೊರೆಯುವಂತಾಗಲಿ.

ಅತಿಪ್ರಸರಣಕ್ಕೆ ಮದ್ದು

ಅತಿಪ್ರಸರಣವನ್ನು ತಡೆಯುವದಕ್ಕಾಗಿ ಹಿಂದುಸ್ತಾನ ಸರಕಾರದವರು ಬಹಳ ದಿನಗಳಿಂದ ಯೋಚಿಸುತ್ತಿರುವರು. ಇತ್ತೀಚೆ ಅವರು, ಉದ್ದಿಮೆದಾರರು, ಅರ್ಥಶಾಸ್ತ್ರಜ್ಞರು ಹಾಗು ಕಾರ್ಮಿಕರ ಸಲಹೆ ಸೂಚನೆಗಳನ್ನು ಪಡೆದುಕೊಂಡು ತಮ್ಮ ನಿರ್ಧಾರವನ್ನು ಬಹಿರಂಗಪಡಿಸಿದ್ದಾರೆ. ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳು ತಮ್ಮ ವೆಚ್ಚವನ್ನು ಕಡಮೆ ಮಾಡಿಕೊಂಡು ಅತಿಪ್ರಸರಣದ ಅನರ್ಥಕ್ಕೆ ತಡೆ ಹಾಕಬೇಕೆಂದು ಸರಕಾರದವರು ಸೂಚಿಸಿದ್ದು ಅತ್ಯಂತ ಮಹತ್ವದ್ದಾಗಿದೆ. ವಿವಿಧ ಶಾಖೆಗಳ ಕಾರ್ಯಕ್ಷಮತೆಗೆ ಧಕ್ಕೆ ತಟ್ಟದಂತೆ ಸರಕಾರದ ವೆಚ್ಚವನ್ನು ಕಡಮೆ ಮಾಡುವದು ಅತ್ಯಂತ ಜಾಣತನದ ಮಾತಾಗಿದೆ. ವೆಚ್ಚವನ್ನು ಕಡಮೆ ಮಾಡುವದಕ್ಕಾಗಿ ಸರಕಾರದವರು ನೋಕರರ ಸಂಖ್ಯೆಯನ್ನು ಕಡಮೆ ಮಾಡಿದರೆ ಸುಶಿಕ್ಷಿತ ನಿರುದ್ಯೋಗಿಗಳ ಸಂಖ್ಯೆ ಹೆಚ್ಚುವದು. ಆದರಿಂದ ಹೊಸ ಹೊಸ ತೊಡಕುಗಳು ಉಂಟಾಗುವವು. ಅಲ್ಲದೆ ಭಾರೀ ಸಂಬಳದ ಉಚ್ಚಾಧಿಕಾರಿಗಳು ಹಾಗೆಯೇ ಉಳಿದು ಕೆಳತರಗತಿಯ ನೋಕರರೇ ಮನೆಗೆ ಹೋಗುವ ಭೀತಿಯೂ ಇದೆ. ಈ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸುವದಕ್ಕಾಗಿ ಉದ್ದಿಮೆದಾರರೂ ಒಕ್ಕಲಿಗರೂ ಹೊಸ ಯೋಜನೆಗಳನ್ನು ಕೈಕೊಂಡು ಈ ಸುಶಿಕ್ಷಿತರ ಲಾಭ ಪಡೆಯಬೇಕು. ಹುಟ್ಟುವಳಿಯು ಹೆಚ್ಚುವಂತಾದರೆ ಎಷ್ಟೋ ಸಮಸ್ಯೆಗಳು ದೂರಾಗುವವು. ಆದರೆ ಒಕ್ಕಲತನ ಹುಟ್ಟುವಳಿಯ ಮೇಲೆ ಕರವನ್ನು ಹೇರಬೇಕೆಂದು ಮಾಡಿದ ಸೂಚನೆಯಿಂದ ಆದೆಂತು ಧ್ಯೇಯ ಸಾಧ್ಯವಾಗಬಲ್ಲುದೋ ತಿಳಿಯದಂತಾಗಿದೆ. ಮೊದಲೆ ಒಕ್ಕಲತನ ಲಾಭದಾಯಕವಾದ ಹೋರೆಯೆಂದು ಪರಿಗಣಿಸಲಾಗಿಲ್ಲ. ಈ ಪರಿಸ್ಥಿತಿಯಲ್ಲಿ ಅದರ ಮೇಲೆ ಕರ ಹೇರಿದರೆ ಅದರ ಪ್ರಗತಿಗೆ ಮತ್ತಷ್ಟು ಆಘಾತವನ್ನುಂಟು ಮಾಡಿದಂತಾಗುವದು. ಯುದ್ಧೋತ್ತರ ಪುನರ್ರಚನೆಯ ಯೋಜನೆಗಳಲ್ಲಿ ಯಾವದಕ್ಕೆ ಪ್ರಥಮ ಪ್ರಾಶಸ್ತ್ಯ ಕೊಡಬೇಕೆಂಬದನ್ನು ಸೂಚಿಸಲು ಸಮಿತಿಯೊಂದನ್ನು ರಚಿಸಲಾಗಿದೆ. ಈ ಸಮಿತಿಯವರು ಹಿಂದುಸ್ತಾನದ ಜೀವಾಳವೆ ಹಳ್ಳಿ ಇದೆಂಬದನ್ನು ಮನದಂದು ಹಳ್ಳಿಗಳ ಪುನರುದ್ಧಾರ ಕಾರ್ಯದಲ್ಲಿಯೇ ನಿರತರಾಗಬೇಕಾದುದು ಅವಶ್ಯವಾಗಿದೆ. ಅತಿಪ್ರಸರಣವನ್ನು ಹೋಗಲಾಡಿಸುವದಕ್ಕಾಗಿ ಸರಕಾರದವರು ಕೈಕೊಳ್ಳುವ ಯಾವ ಯೋಜನೆಗಳಾದರೂ ಯಶಸ್ವಿಯಾಗಬೇಕಾದರೆ ಜನತೆಯ ಹಾರ್ದಿಕ ಸಹಕಾರ ಅವಶ್ಯವಾಗಿದೆ. ಸರಕಾರ ಕೈಕೊಳ್ಳುವ ಯೋಜನೆಗಳಲ್ಲಿ ಹಲವಾರು ಲೋಪದೋಷಗಳು ಕಂಡು ಬಂದರೂ ಅವನ್ನು ತಿದ್ದಿಕೊಳ್ಳುವದು ಶಕ್ಯವಿದೆಂಬದನ್ನು ಮನದಂದು ಎಲ್ಲರೂ ಸಹಕರಿಸಬೇಕಾದುದು ಕರ್ತವ್ಯವಾಗಿದೆ.

ಸೂಚನೆ

ವಾಡಿಕೆಯಂತೆ ವಿಜಯದಶಮಿ ನಿಮಿತ್ತ ಮುಂದಿನವಾರದ ಅಂದರೆ ೧೮-೧೦-೪೮ ನೇ ತಾರೀಕಿನ ಸಂಚಿಕೆ ಹೊರಡುವದಿಲ್ಲ.

ವ್ಯವಸ್ಥಾಪಕ ಕರ್ಮವೀರ

ಮಾತೃಭಾಷಾವಾದ

ಶಿಕ್ಷಣಮಾಧ್ಯಮ ಮಾತೃಭಾಷೆಯಾಗಬೇಕೆಂಬ ವಾದ ಸಾಮಾನ್ಯವಾಗಿ ಜನರು ತಿಳಿದುಕೊಂಡಷ್ಟು ಸುಲಭವಲ್ಲ. ಅದನ್ನು ಸ್ವಲ್ಪ ಸೂಕ್ಷ್ಮವಾಗಿ ಪರಿಶೀಲಿಸುವದು ಅಗತ್ಯ

ದೇವರು ಮನುಷ್ಯನಿಗೆ ಯಾವ ಒಂದು ನೈಸರ್ಗಿಕ ಭಾಷೆಯನ್ನೂ ವರವಾಗಿ ಕೊಟ್ಟಿಲ್ಲ. ಕೋಗಿಲೆಯ ಮರಿ ಕಾಗೆಯ ಗೂಡಿನಲ್ಲಿ ಪೋಷಿತವಾಗುವುದೆಂದು ಜನರ ಭಾವನೆ. ಆದರೆ ಕೂಗಲು ಬಂದೊಡನೆ ಕೋಗಿಲೆಯ ಮರಿ ಕಾ ಕಾ ಎನ್ನದೆ ಕೂ ಕೂ ಎನ್ನುತ್ತದೆ. ನಿಸರ್ಗ ಆ ಎರಡೂ ಹಕ್ಕಿಗಳಿಗೆ ಭಿನ್ನ ಸ್ವರಗಳನ್ನು ಕೊಟ್ಟದ್ದೇ ಹಾಗಾಗಲು ಕಾರಣ. ಅವೇ ಅವುಗಳ ಭಾಷೆಗಳು ಅಥವಾ 'ತಾಯ್ನುಡಿಗಳು' ಅವು ಅವುಗಳಿಗೆ ಜಗತ್ತಿನಲ್ಲಿ ಸರ್ವತ್ರ ವಿಶಿಷ್ಟ ಭಾಷೆಯೆನಿಸಿದ್ದರಿಂದ ಎಲ್ಲ ಕೋಗಿಲೆಗಳೂ ಕೂ ಕೂ ಎನ್ನುತ್ತವೆ, ಎಲ್ಲ ಕಾಗೆಗಳೂ ಕಾ ಕಾ ಎನ್ನುತ್ತವೆ. ಅವುಗಳಿಗೆ ಮಾತೃಭಾಷೆ ಪ್ರಾಂತಭಾಷೆ ಮುಂತಾದ ಭೇದ ಮಾಡಬೇಕಾದ ಅಗತ್ಯವಿಲ್ಲ. ಮನುಷ್ಯರಲ್ಲಿ ಅದು ಹಾಗಿಲ್ಲ. ಗುಜರಾತಿ ತಾಯ್ತಂದೆಗಳಿಗೆ ಹುಟ್ಟಿದ ಒಂದು ಮಗುವನ್ನು ಮರಾಠಿ ಮನೆಯಲ್ಲಿ ಸಾಕಿದರೆ ಮರಾಠಿಯಲ್ಲಿ ಮಾತನಾಡುವುದು, ಇಂಗ್ಲೀಷರ ಮನೆಯಲ್ಲಿ ಸಾಕಿದರೆ ಇಂಗ್ಲೀಷು ಮಾತಾಡುವುದು. ಸ್ವಾಭಾವಿಕವಾಗಿ ಎರಡು ಮೂರು ಭಾಷೆಗಳನ್ನಾಡುವ ವಾತಾವರಣದಲ್ಲಿ ಅದನ್ನು ಸಾಕಿದರೆ ಅವೆಲ್ಲವನ್ನು ಕಲಿತು ಅದು ಗೊತ್ತಿಲ್ಲದೆಯೇ ತನಗಾಗಿ ಒಂದು ಮಿಶ್ರಭಾಷೆಯನ್ನೇ ತಯಾರಿಸಿಕೊಂಡೀತು. ಪಕ್ಷಿಗಳೊಡನೆ ಬೆಳೆದರೆ ಅದು ನಿಜವಾಗಿಯೂ ಕಾ ಕಾ ಕೂ ಕೂ ಎಂಬುದನ್ನು ಕಲಿತು ಕೂಗೀತಲ್ಲದೆ, ಮನುಷ್ಯರಾಡುವ ಯಾವ ಭಾಷೆಯನ್ನೂ ಆಡಲಾರದು. ಮಾನವ ಶಿಶು ಹುಟ್ಟುವಾಗ ಮಾಡುವ ಒಂದೇ ಬಗೆಯ ಕಿರಿಚಾಟವಲ್ಲದೆ ಇಡಿ ಜಗತ್ತಿನಲ್ಲಿ ಮಾನವ ಜೀವಿಗೆ ತನ್ನದೇ ಆದ ಒಂದು ಭಾಷೆ ಎಂಬುದೇ ಇಲ್ಲ. ತನ್ನ ಸುತ್ತ ಕೇಳಬರುವ ಒಂದು ಇಲ್ಲವೆ ಅನೇಕ ಭಾಷೆಗಳನ್ನು ಅದು ಅನಂತರ ಕಲಿತುಕೊಳ್ಳುತ್ತದೆ. ಅದು ತಂದೆಯ ಭಾಷೆಯಾಗಿರಬಹುದು, ತಾಯಿಯ ಭಾಷೆಯಾಗಿರಬಹುದು ಅಥವಾ ಎರಡೂ ಅಲ್ಲದಿರಬಹುದು. ಹೇಗಿದ್ದರೂ ಅದು ಒಂದು ಸ್ಥಳೀಯ ಭಾಷೆಯೇನೋ ಆಗಿರಲೇಬೇಕು.

ಶ್ರೀ ದೇವದಾಸ ಗಾಂಧಿಯವರ ಭಾಷೆ ಗುಜರಾತಿ; ಅವರ ಹೆಂಡತಿ ಶ್ರೀಮತಿ ಲಕ್ಷ್ಮಿ ಗಾಂಧಿಯವರ ಮಾತು ತಮಿಳು. ಅವರು ದೊಹಲಿಯಲ್ಲಿ ವಾಸವಾಗಿದ್ದಾರೆ. ಅವರ ಮಕ್ಕಳಿಗೆ ಹಿಂದುಸ್ತಾನಿಯನ್ನು ಕಲಿಸಲಾಗಿದೆ. ಅದು ಮಕ್ಕಳ ಸ್ವಂತ ಭಾಷೆಯಾಗಿ ಹೋಗಿದೆ ಶ್ರೀ ಆರ್ಯನಾಯಕಂ ಸಿಲೋನಿನ ತಮಿಳರು; ಶ್ರೀಮತಿ ಶಾರದಾದೇವಿ ಬಂಗಾಳಿ. ಅವರ ಮಗಳು ಸೇವಾಗ್ರಾಮದಲ್ಲಿ ಮರಾಠಿ ಆಡುವವರೊಡನೆ ಬೆಳೆದು ಮರಾಠಿ ಮೂಲ ಶಿಕ್ಷಣ ಶಾಲೆಯಲ್ಲಿ ಶಿಕ್ಷಣ ಪಡೆದಿದ್ದಾಳೆ. ಮಾತು ಬಂದ ಮೇಲೆ ಸೇವಾಗ್ರಾಮಕ್ಕೆ ಬಂದರೂ ಅವಳು ಬಂಗಾಳಿಯನ್ನು ಚೆನ್ನಾಗಿ ಆಡುವಳಲ್ಲದೆ ಸೇವಾಗ್ರಾಮದ ಇನ್ನಿತರ ನಿವಾಸಿಗಳಂತೆ ಮರಾಠಿಯಲ್ಲಿ ಲೀಲಾಜಾಲವಾಗಿ ವ್ಯವಹರಿಸಬಲ್ಲಳು. ಸುಮಾರು ಇನ್ನೂರು ವರ್ಷಗಳ ಹಿಂದೆ ವರ್‍ಹಾಡ ಮತ್ತು ಖಾನದೇಶದಲ್ಲಿ (ಮಹಾರಾಷ್ಟ್ರ) ಕೆಲವು ನೂರು ಗುಜರಾತಿ ಕುಟುಂಬಗಳು ಹೋಗಿ ನೆಲೆಸಿವೆ; ಆ ಜನರು ಮನೆಯಲ್ಲಿ ಒಂದು ಬಗೆಯ ಗುಜರಾತಿಯನ್ನು ಆಡುತ್ತಾರೆ. ಅದರಲ್ಲಿ ಕೆಲ ಮಟ್ಟಿಗೆ ಮರಾಠಿ ಬೆರತಿದೆ. ಶಬ್ದಗಳ ಮಿಶ್ರಣವನ್ನು ಬಿಟ್ಟರೂ ಅವರ ಹುಟ್ಟೂರಿಗೆ ವಿಶಿಷ್ಟವಾಗಿರುವ ಸ್ವರಭೇದ ಕೂಡ ಸಂಪೂರ್ಣ ಬದಲಾಗಿ ಹೋಗಿರುವುದರಿಂದ ಅವರು ವ್ಯಾಕರಣಶುದ್ಧವಾದ ಗುಜರಾತಿಯನ್ನೇ ಆಡಿದರೂ ಅಂಥವರನ್ನು ಮಹಾರಾಷ್ಟ್ರದ ಗುಜರಾತಿಗಳೆಂದು ಕಂಡವರು ಗುರುತಿಸಿ ಬಿಡುವರು. ಅದೇ ಮೇರೆಗೆ ಮಧ್ಯಪ್ರಾಂತ ಮತ್ತು ಸಂಯುಕ್ತಪ್ರಾಂತಗಳಲ್ಲಿ ನೆಲೆಸಿದ ಗುಜರಾತಿಗಳನ್ನು ಹಿಂದಿ ಮಾತಾಡುವ ಪ್ರಾಂತದವರೆಂದು ಯಾರಾದರೂ ಕಂಡು ಹಿಡಿದು ಬಿಡಬಲ್ಲರು. ಇದೇ ಮಾತನ್ನು ಇತರ ಪ್ರಾಂತಗಳಲ್ಲಿ ನೆಲೆಸಿದ ಮಹಾರಾಷ್ಟ್ರೀಯರು, ಮಾರವಾಡಿಗಳು ಮತ್ತು ಮಿಕ್ಕವರ ಬಗೆಗೂ ಹೇಳಬಹುದು. ಮನುಷ್ಯರಲ್ಲಿ ತೋರಿಕೆಗೆ ಭಿನ್ನವಿರುವ ಹಲವಾರು ಭಾಷೆಗಳಿದ್ದರೂ ಅವರು ಕಾಗೆ ಕೋಗಿಲೆಗಳಂತೆ ಒಂದು ಭಾಷೆಯನ್ನು ಬಿಟ್ಟು ತೀರ ಭಿನ್ನವಾದ ಇನ್ನೊಂದು ಭಾಷೆಯನ್ನು ಬಳಕೆಗೆ ತೆಗೆದುಕೊಳ್ಳಲಾರದವರಾಗಿಲ್ಲ.

ಹೀಗೆ ನೋಡಿದರೆ, "ತಾಯ್ನುಡಿ" ಎಂಬುದು ಸರಿಯಾದ ಹೆಸರಲ್ಲ, ನಿಜವಾಗಿಯೂ ಅದೊಂದು ಪುಟಿಕೆಸರು. ಮಗುವಿನ ಸುತ್ತ ಮುತ್ತ ಆಡುವ ಸ್ಥಳೀಯ ಭಾಷೆಯೇ ಮಗುವಿನ ಭಾಷೆ. ಅದು ತಾಯಿಯದಾಗಿರಬಹುದು, ತಂದೆಯದಾಗಿರಬಹುದು, ಇಲ್ಲವೆ ಅಕ್ಕ ಪಕ್ಕದವರದಾಗಿರಬಹುದು.

ಶಿಕ್ಷಣದ ದೃಷ್ಟಿಯಿಂದ ಮಗು ತನ್ನದೇ ಮಾತಿನ ಮೂಲಕ ವಿದ್ಯೆಯನ್ನು ಪಡೆಯಬೇಕೆಂಬುದು ಬಹು ಮುಖ್ಯವಾದುದು. ಆದುದರಿಂದ ತಾಯ್ನುಡಿ ಎಂಬ ಪದಕ್ಕೆ ಮಗುವಿನ ಮಾತೆಂದು ಅರ್ಥ ಮಾಡಬೇಕು.

ಹಾಗಾದರೂ ಆ ಹೆಸರಿಗೆ ಸಂಕುಚಿತಾರ್ಥ ಹಚ್ಚಬಾರದು; "ಮಾತು" ಎಂಬುದಕ್ಕೆ ಅದರ ಸಾಹಿತ್ಯಕ ರೂಪವೆಂದಲ್ಲದೆ ಮಗು ತನ್ನ ನೈಸರ್ಗಿಕ ವಾತಾವರಣದಲ್ಲಿ ಕಲಿಯುವ ಭಾಷೆಯ ಸ್ಥಳೀಯ ರೂಪ ಇಲ್ಲವೆ ಉಪಭಾಷೆ ಎಂದು ಅರ್ಥ ಮಾಡಬಾರದು. ಅಲ್ಲದಿದ್ದರೆ, ಸುರತ ಜಿಲ್ಲೆಯಲ್ಲಿರುವ ಗುಜರಾತಿ ಮಗುವಿನ ಮಾತು ಅಹಮದಾಬಾದು ಇಲ್ಲವೆ ಕಾಠೇವಾಡದಲ್ಲಿರುವ ಮಗುವಿನ ಮಾತಿನಿಂದ ಭಿನ್ನವೆಂದು ತಿಳಿಯಬೇಕಾದೀತು. ಆದರೆ ವಿಚಾರಶಕ್ತಿಯುಳ್ಳ ಯಾವನೇ ಆಗಲಿ, ಸುರತದ ಮಕ್ಕಳಿಗೆ ಸುರತದ ಗುಜರಾತಿಯನ್ನೂ ಕಾಠೇವಾಡದ ಮಕ್ಕಳಿಗೆ ಕಾಠೇವಾಡದ ಗುಜರಾತಿಯನ್ನೂ ಕಲಿಸಬೇಕೆಂದು ಹೇಳಲಾರ. ಕಲಿಸಬೇಕಾದ ಗುಜರಾತಿಯೆಂದರೆ, ಗುಜರಾತಿನ ಭಾಷೆಯ ಪ್ರಸಿದ್ಧ ಗ್ರಾಂಥಿಕರೂಪವೆಂದೇ ಎಲ್ಲರೂ ಒಪ್ಪುತ್ತಾರೆ. ಆ ಸಾಹಿತ್ಯ ರೂಪವೇ ಕಾಲಾನುಕಾಲಕ್ಕೆ ಕ್ರಮಿಕ ಪರಿವರ್ತನಹೊಂದಬಹುದೆಂಬುದು ಬೇರೆಯ ಮಾತು.

ಒಂದು ವ್ಯಕ್ತಿಗೆ ತನ್ನ ಮನೆ ಅಥವಾ ಪರಂಪರೆಯ ಭಾಷೆಯನ್ನು ಬಿಟ್ಟು ಬಿಡುವುದು ಕಷ್ಟವಾಗುತ್ತದೆಂಬುದು ನಿಜ. ಬೇರೆಯ ಪ್ರಾಂತಗಳಿಗೆ ವಲಸೆ ಹೋದ ಜನರು ಮೂಲ ನಿವಾಸಸ್ಥಳದೊಡನೆ ಇದ್ದ ತಮ್ಮ ಎಲ್ಲ ಸಂಬಂಧ ಕಡಿದುಹೋಗಿ ಹಲವು ಶತಕ ಕಳೆದರೂ ವಿಕೃತ ರೂಪದಲ್ಲಿಯಾದರೂ ತಮ್ಮ ಪರಂಪರೆಯ ಭಾಷೆಗೆ ಅಂಟಿಕೊಂಡಿರುತ್ತಾರೆ. ಆದರೆ ಅದನ್ನು ಬಿಡುವುದು ಕಷ್ಟವೆಂದ ಕೂಡಲೆ ಮನಸ್ಸು ಮಾಡಿದರೂ ಅದನ್ನು ಬಿಡಲು ಸಾಧ್ಯವೇ ಇಲ್ಲವೆಂದು ಹೇಳಲಾಗದು. ಇಂಗ್ಲೆಂಡಿನಲ್ಲಿ ನೆಲೆಸಿದ ಹಿಂದೀಯರ ಮಕ್ಕಳು ಸಂಪೂರ್ಣವಾಗಿ ಇಂಗ್ಲೀಷನ್ನು ಬಳಕೆ ತೆಗೆದುಕೊಂಡಿರುವುದಷ್ಟೇ ಅಲ್ಲ, ಇಲ್ಲೇ ಬದುಕುವ ಕೆಲ ಹಿಂದೀಯರು ಕೂಡ ಮೊದಲಿಂದಲೇ ತಮ್ಮ ಮಕ್ಕಳಿಗೆ ಆ ಭಾಷೆಯನ್ನು ಕಲಿಸಿದ್ದಾರೆ. ಆದರೆ ಬಹುಜನರು ಅದು ಸ್ಪಷ್ಟವಾಗಿ ಅವಶ್ಯಕವೆಂದು ಕಂಡುಬಂದಾಗ ಕೂಡ ಹಾಗೆ ಮಾಡಲು ಇಷ್ಟಪಡುತ್ತಿಲ್ಲ.

ಹಾಗೆ ನೋಡಿದರೆ, ತನ್ನ ಪರಂಪರೆಯ ಭಾಷೆಯನ್ನು ತನ್ನ ಸ್ವಂತ ಪ್ರಾಂತದಲ್ಲೇ ಒಂದು ವ್ಯಕ್ತಿ ಅಚ್ಚಳಿಯದಂತೆ ಉಳಿಸಿಕೊಳ್ಳಲಾರದು. ಇನ್ನೊಂದು ಪ್ರಾಂತದಲ್ಲಿ ಈಗಲ್ಲದಿದ್ದರೆ ನಾಳೆಯಾದರೂ ಪ್ರಾದೇಶಿಕ ಭಾಷೆಯನ್ನು ಬಳಕೆಗೆ ತೆಗೆದುಕೊಳ್ಳಬೇಕಾಗಿದೆ. ಅದು ವಲಸೆ ಹೋದುದರ ನೈಸರ್ಗಿಕವೂ ಯುಕ್ತವೂ ಆದ ಫಲ ಎಂದು ತೋರುತ್ತದೆ. ಇನ್ನೊಂದು ಭಾಷಾವೃತ ಪ್ರಾಂತದಲ್ಲಿ ಸ್ಥಿರವಾಗಿ ನೆಲೆಸಲು ನಿಶ್ಚಯಿಸಿದ ಮೇಲೆ ಒಂದು ವ್ಯಕ್ತಿಗೆ ತನ್ನ ಭಾಷೆಗೆ ಅಂಟಿಕೊಳ್ಳುವುದು ಅಗತ್ಯವಿಲ್ಲವೆಂದು ನನಗನಿಸುತ್ತದೆ. ಹೇಗೇ ಆಗಲಿ, ಎರಡನೆಯ ಪೀಳಿಗೆಯನ್ನು ಪ್ರಾದೇಶಿಕ ಭಾಷೆಯಲ್ಲೇ ಬೆಳೆಸಬೇಕು. "ಮಾತೃಭಾಷೆಯ ಮೂಲಕ ವಿದ್ಯಾಭ್ಯಾಸ" ಎಂಬ ತತ್ವವನ್ನು "ಮಗುವಿನ ವಾತಾವರಣದಲ್ಲಿಯ ಭಾಷೆಯ ಗ್ರಾಂಥಿಕರೂಪದ ಮೂಲಕ ಕೊಡುವ ಶಿಕ್ಷಣ" ಎಂಬ ಅರ್ಥ ಬರುವಂತೆ ಬದಲಿಸಬೇಕು. ಪ್ರಾಂತಾಂತರವಾದರೂ ಭಾಷಾವರಣ ಒಂದೇ ಆಗಿ ಉಳಿದರೆ ಅದು ಮಗುವಿನ ಹಿರಿಯರ ಪ್ರಾಂತದ ಭಾಷೆಯೆಂದು ಅಥವಾ "ತಾಯ್ನುಡಿ" ಎಂದು ಆಗಬಹುದು. ಹಾಗಲ್ಲದಿದ್ದರೆ, ಅದು ಸಾಮಾನ್ಯವಾಗಿ ಆ ಪ್ರದೇಶದ ಗ್ರಾಂಥಿಕ ಭಾಷೆಯೆ ಆಗಿರುವುದು.

ಇದರಲ್ಲಿ ರಾಜಕಾರಣವಿಲ್ಲ— ಇರಕೂಡದು. ಇದು ಯೋಗ್ಯವಾದ ಶಿಕ್ಷಣತತ್ವಗಳ ಮತ್ತು ಅನುಕೂಲತೆಯ ಮೇಲೆ ಆಧರಿಸಿ ನಿಂತಿದೆ. ನ್ಯಾಯ್ಯವಾದ ದೇಶಭಕ್ತಿಯಿಂದ ನೋಡಿದರೆ ಎಲ್ಲ ಹಿಂದೀಯರೂ ನಮ್ಮವರು ಮತ್ತು ಇಡಿ ನಾಡು ನಮ್ಮ ತಂದೆನಾಡು ಆಗಿರುವಂತೆ ಎಲ್ಲ ಭಾರತೀಯ ಭಾಷೆಗಳೂ ನಮ್ಮವೇ. ಪ್ರತಿ ವರ್ಷ ನಾಡಿನಲ್ಲೆಲ್ಲ ನೂರಾರು ಕುಟುಂಬಗಳು ಒಂದು ಪ್ರಾಂತದಿಂದ ಇನ್ನೊಂದು ಪ್ರಾಂತಕ್ಕೆ ವಲಸೆ ಹೋಗುತ್ತಿವೆ. ಮುಂಬಯಿ ಎಲ್ಲ ಪ್ರಾಂತಗಳಲ್ಲೂ ಅನ್ಯ ಪ್ರಾಂತಗಳಿಂದ ಬಂದು ನೆಲೆಸಿದವರೇ ಇದ್ದಾರೆ. ಈ ವಲಸೆಗಳಲ್ಲಿ ಕೆಲವು ತಾತ್ಕಾಲಿಕ; ಕೆಲವು ಚಿರಕಾಲಿಕ. ಈ ವಲಸೆಗಾರರು ತಂತಮ್ಮ ಮೂಲ ಭಾಷೆಗಳಿಗೆ ಅಂಟಿಕೊಳ್ಳಬೇಕೆಂಬುದು ಅಂಧ ನಿಷ್ಠೆಯೇ ಸರಿ. ಇತರ ಮೊದಲ ಪ್ರಾಂತದವರು ಆ ವಲಸೆಗಾರರ ಮಕ್ಕಳಿಗೆ ಅವುಗಳ ಒಂದಿನ ಪ್ರಾಂತದ ಭಾಷೆಯಿಂದಲೇ ಶಿಕ್ಷಣ ಕೊಡಬೇಕೆಂಬುದು ಅವಿಚಾರದ ಮಾತು. ಅವರ ಉಪಭಾಷೆಗಳಲ್ಲಿ ಪ್ರಧಾನ ಭಾಷೆಗಳ ಮಿಶ್ರಣ ಎಷ್ಟೆಷ್ಟಾಗಿದೆ ಎಂಬುವದರ ಬಗ್ಗೆ ಅತ್ಯಮೂಲ್ಯವಾದ ಫಲಿತಾಂಶ ಕೊಡುವ 'ಭಿನ್ನ ಮತ್ತು ಇತರ ಆದಿವಾಸಿಗಳ ಉಪಭಾಷೆಗಳನ್ನು ಭಾಷಾ ಶಾಸ್ತ್ರೀಯವಾಗಿ ಅಭ್ಯಸಿಸುವುದು ಒಂದು ಒಳ್ಳೆಯ ವಾಙ್ಮಯಸಾಹಸವೆನಿಸಬಹುದು. ಆದರೆ ಆ ಸಂಶೋಧನೆಯ ಫಲಿತಾಂಶಗಳನ್ನು ಒಂದು ಪ್ರಾಂತದಿಂದ ಇನ್ನೊಂದು ಪ್ರಾಂತಕ್ಕೆ ಒಂದು ತಾಲೂಕು ಅಥವಾ ಜಿಲ್ಲೆಯನ್ನು ವರ್ಗಾಯಿಸಬೇಕೆಂದು ಚಳವಳ ಹೂಡಲು ಬಳಸಿಕೊಳ್ಳುವುದು ಬುದ್ಧಿವಂತಿಕೆಯ ಲಕ್ಷಣವೂ ಅಲ್ಲ, ದೇಶಭಕ್ತಿಯ ಬಗೆಯೂ ಅಲ್ಲ. ದೇಶ ಮತ್ತು ಜನಾಂಗದ ಎದುರಿಟ್ಟು ನೋಡಿದರೆ ಕೆಲವು ಲಕ್ಷ ಗುಜರಾತಿಗಳು ಮರಾಠಿ ಮಾತಾಡುವವರೂ ಕೆಲವು ಲಕ್ಷ ಮರಾಠಿಗರು ಗುಜರಾತಿ ಮಾತಾಡುವವರೂ ಆದರೆ ಅಷ್ಟೇನೂ ದೊಡ್ಡ ನಷ್ಟವೆನಿಸಲಾರದು ಒಂದು ಕೋನದ ಬಾಹುಗಳನ್ನು ಬದಲಿಸಿದರೆ ಅದರ ಅಳತೆ ಬದಲಾಗಲಾರದು. ಆ ಕೋನವು ಸಮವಾದ ಭಾರತೀಯ ಕೋನವಾದರೆ, ಗುಜರಾತಿ ಮತ್ತು ಮಹಾರಾಷ್ಟ್ರ, ಗುಜರಾತಿಯದು ಅದ್ವಿತೀಯ... ಇನ್ನಿತರ ಯಾವ ಭಾಷೆಯೂ ಆಗಲಾರದು.

ಒಬ್ಬ ಗುಜರಾತಿ ಸ್ನೇಹಿತ—ಅವರು ಕೈದಲ್ಲಿ ಕೇಳುತ್ತಾರೆ— ಕಾಲ ಕ್ರಮೇಣ, ಭಾರತದ ಎಲ್ಲ ಪ್ರಾಂತ ಭಾಷೆಗಳೂ ತಂತಮ್ಮ ಬಾಳೆ ಅಥವಾ ವ್ಯಕ್ತಿಯಂತೆ ಮುಪ್ಪಿಗೆ ಬಂದು ಹೋಗಿ ಇದು ಹಿಂದುಸ್ತಾನಕ್ಕೆ ಒಂದೇ ಒಂದು ಭಾಷೆ ಉಳಿದರೆ ಅದೊಂದು ದೊಡ್ಡ ನಷ್ಟವೆನಿಸಬಹುದೇ?— ಎಂದು. ಪ್ರಾಂತೀಯ ರಾಜಕಾರಣಿಗಳನ್ನು, ಭಾಷಾಭಿಮಾನಿಗಳನ್ನು ಮತ್ತು ಸಾಹಿತಿಗಳನ್ನು ಅತಿ ದೃಷ್ಟಿಯನ್ನು ಉಳಿಸಿಕೊಳ್ಳುವಂತೆ ಒಪ್ಪಿಸುವುದು ಮುಖ್ಯ. ಪ್ರಶ್ನೆಯನ್ನು ಬಿಟ್ಟರೆ ನಾನದಕ್ಕೆ ಉತ್ತರವನ್ನು ಕೇಳಲಾರೆ. ಹಾಗೇನಾದರೂ ಆದರೆ ನಾನು ಸ್ವತಃ ದುಃಖ ಪಡಲಾರೆ ಇದು ಕೇವಲ ವಿಚಾರದೃಷ್ಟಿ. ಗುಜರಾತಿ ಭಾವನೆಯೂ ಆಗಿರುವುದರಿಂದ ವ್ಯಾಖ್ಯಾನದ ಕ್ರಮಪೂರಕವಾದದ್ದೂ ಮಹತ್ವದ ಹೇಳಲು ಬರದು. ವಿಚಾರ ಮತ್ತು ಬುದ್ಧಿ ಶಕ್ತಿ ಸುವುದರ ಮೂಲಕ ಜನರನ್ನು ಇದಕ್ಕೆ ಒಪ್ಪುವಂತೆ ಮಾಡಬೇಕು. ಅದು ಅಹಿಂಸೆ ಮತ್ತು ಪ್ರಜಾಪ್ರಭುತ್ವದ ರೀತಿ. ಅಲ್ಲಿಯವರೆಗೆ ಆಡಳಿತದ ಮತ್ತು ಇತರ ಕೊಡುಕೊಳ್ಳುವದ್ದರೂ ಪ್ರತಿ ಪ್ರಾಂತಕ್ಕೂ ಒಂದಕ್ಕಿಂತ ಹೆಚ್ಚು ಭಾಷೆಗಳ ಮೂಲಕ ವಿದ್ಯಾದಾನ ಮಾಡುವಂತೆ ವ್ಯವಸ್ಥೆಗೊಳಿಸುವುದು ಅವಶ್ಯವೆನಿಸಬಹುದು.

ಮುಂಬಯಿ,

೨೭-೯-೪೮ — ಕಿ. ಘ. ಮಶ್ರುವಾಲಾ

ಸರ್ವೋದಯ ಪ್ರದರ್ಶನ

ಕಳೆದ ಅನೇಕ ವರ್ಷಗಳಿಂದ ಕಾಂಗ್ರೆಸಿನ ಅಧಿವೇಶನದ ಸಂಗಡ ಒಂದು ಪ್ರದರ್ಶನವನ್ನೂ ಏರ್ಪಡಿಸುವದು ರೂಢಿಗತವಾಗಿದೆ. ನಾಳೆ ದಿಸೆಂಬರದಲ್ಲಿ ಜಯಪುರದಲ್ಲಿ ಜರಗಲಿರುವ ೫೫ನೆಯ ಹಿಂದೀ ರಾಷ್ಟ್ರೀಯ ಕಾಂಗ್ರೆಸ್ಸಿನ ಸ್ವಾಗತ ಸಮಿತಿಯವರು ಅ. ಭಾ. ಚರಕ ಸಂಘ, ಅ. ಭಾ. ಗ್ರಾಮೋದ್ಯೋಗ ಸಂಘ, ಹಿಂದುಸ್ತಾನೀ ತಾಲಿಮೀ ಸಂಘ ಮತ್ತು ಗೋಸೇವಾ ಸಂಘಗಳನ್ನು ಆಮಂತ್ರಿಸಿ ಹಿಂದಿನಂತೆ ಈ ಬಾರಿಯೂ ಒಂದು ಪ್ರದರ್ಶನವನ್ನು ಏರ್ಪಡಿಸಬೇಕೆಂದು ಕೋರಿದ್ದಾರೆ. ಈ ಸಂಸ್ಥೆಗಳು ಅದಕ್ಕೊಪ್ಪಿ ಆ ಕೆಲಸಕ್ಕಾಗಿ ಒಂದು ಪ್ರದರ್ಶನ ಸಮಿತಿಯನ್ನು ನೇಮಿಸಿವೆ. ಅದರಲ್ಲಿ ಸ್ವಾಗತ ಸಮಿತಿಯ ಇಬ್ಬರು ಪ್ರತಿನಿಧಿಗಳೂ ಇರುವರು.

ಪ್ರದರ್ಶನದ ಪರಿಪಾಠ ಬಿದ್ದ ಮೊದಲ ವರ್ಷಗಳಲ್ಲಿ (೧೯೨೦—೧೯೩೪), "ಖಾದೀ ಪ್ರದರ್ಶನ" ವೆಂಬ ಅದಕ್ಕಿದ್ದ ಹೆಸರೇ ಸೂಚಿಸುವಂತೆ, ಖಾದಿಗೆ ಉತ್ತೇಜನ ಕೊಟ್ಟು ಅದನ್ನು ಜನಪ್ರಿಯವಾಗಿ ಮಾಡುವದು, ಮತ್ತು ಆ ಕ್ಷೇತ್ರದಲ್ಲಿ ಆಯಾ ವರ್ಷದಲ್ಲಿ ಸಾಧಿಸಲ್ಪಟ್ಟ ಪ್ರಗತಿಯನ್ನು ಜನರ ಮುಂದಿಡುವದು— ಇಷ್ಟಕ್ಕೇ ಅದರ ವ್ಯಾಪ್ತಿಯಿತ್ತು. ೧೯೩೫ ರಲ್ಲಿ ಅ. ಭಾ. ಗ್ರಾ. ಉ. ಸಂಘದ ಸ್ಥಾಪನೆಯಾದ ಬಳಿಕ ಅದರಲ್ಲಿ ಗ್ರಾಮೋದ್ಯೋಗಗಳ ವಿಭಾಗವನ್ನೂ ಸೇರಿಸಿ "ಖಾದಿ ಮತ್ತು ಗ್ರಾಮೋದ್ಯೋಗ ಪ್ರದರ್ಶನ"ವೆಂದು ಅದಕ್ಕೆ ಹೆಸರು ಕೊಡಲಾಯಿತು. ಆ ಮೇಲೆ ೧೯೪೦ ರಲ್ಲಿ ಹಿಂದುಸ್ತಾನೀ ತಾಲಿಮೀ ಸಂಘವನ್ನು ಕಾಂಗ್ರೆಸ್ಸು ಸ್ಥಾಪಿಸಿದ ನಂತರ ಮೂಲ ಶಿಕ್ಷಣದ ಒಂದು ಪ್ರಯೋಗವನ್ನೂ ಪ್ರದರ್ಶನದಲ್ಲಿ ಅಳವಡಿಸುವದಾಯಿತು. ಈ ಪ್ರಕಾರ ಗಾಂಧೀಜಿಯ ರಚನಾತ್ಮಕ ಕಾರ್ಯಕ್ರಮದ ವಿವಿಧ ಅಂಗಗಳು ಒಂದೊಂದಾಗಿ ಈ ಪ್ರದರ್ಶನದ ಕಕ್ಷೆಯೊಳಗೆ ಬಂದವು. ಆದರೆ ಹೆಸರು ಮಾತ್ರ ಹಿಂದಿನದೇ, ಅಂದರೆ "ಖಾದಿ ಮತ್ತು ಗ್ರಾಮೋದ್ಯೋಗ ಪ್ರದರ್ಶನ" ಎಂಬದೇ, ಉಳಿಯಿತು. ಗಾಂಧೀಜಿಯ ಮರಣಾನಂತರ ಸೇವಾಗ್ರಾಮದಲ್ಲಿ ಕೂಡಿದ ರಚನಾತ್ಮಕ ಕಾರ್ಯಕರ್ತರ ಸಮ್ಮೇಲನದಲ್ಲಿ ಸರ್ವೋದಯ ಸಮಾಜದ ಧ್ಯೇಯವನ್ನು ಮುಂದಿಡಲಾಯಿತು. ಈ ಶಬ್ದ ಗಾಂಧೀಜಿಯ ಧ್ಯೇಯ ಮತ್ತು ಕಾರ್ಯಕ್ರಮಗಳ ಸಂಕೇತವೆಂದು ಪರಿಗಣಿಸಲ್ಪಟ್ಟಿದೆ. ಗಾಂಧೀಜಿಯ ಜೀವಮಾನದಲ್ಲಿ ಕೂಡ ಅವರ ಧ್ಯೇಯಾನುಸಾರವಾಗಿ ರಚನಾತ್ಮಕ ಕಾರ್ಯಕ್ರಮದ ಪ್ರತ್ಯಕ್ಷ ಪ್ರಯೋಗವನ್ನು ಮಾಡಿತೋರಿಸುವದೇ ಈ ಪ್ರದರ್ಶನದ ಉದ್ದೇಶವಾಗಿತ್ತು. ಈಗ ಗಾಂಧೀಜಿ ನಮ್ಮ ನಡುವೆ ಉಳಿದಿಲ್ಲವಾಗಿ, ಈ ಪ್ರದರ್ಶನ ಸರ್ವಥಾ ಅವರು ಹಾಕಿಕೊಟ್ಟ ದಾರಿಯಲ್ಲೆ ಜರಗಬೇಕಾದುದು ಮತ್ತಷ್ಟು ಅವಶ್ಯವಾಗಿದೆ. ಇನ್ನು ಮುಂದೆ ಪ್ರದರ್ಶನವನ್ನು ಸರ್ವೋದಯ-ಅಂದರೆ ಎಲ್ಲರ ಉದ್ಧಾರ ಧ್ಯೇಯಕ್ಕನುಗುಣವಾಗಿಯೆ ಸಂಘಟಿಸಬೇಕೆಂದೂ ಅದಕ್ಕಾಗಿ ಅದು "ಸರ್ವೋದಯ ಪ್ರದರ್ಶನ" ವೆಂದೇ ಹೆಸರಿಸಲ್ಪಡಬೇಕೆಂದೂ ಪ್ರದರ್ಶನ ಸಮಿತಿ ನಿರ್ಧರಿಸಿದೆ.

ಪ್ರದರ್ಶನದಲ್ಲಿ ಈ ಕೆಳಗಿನ ವಿಭಾಗಗಳನ್ನು ಸೇರಿಸಿಕೊಳ್ಳುವ ನಿರ್ಣಯವಾಗಿದೆ.

(೧) ಖಾದಿ (೨) ಗ್ರಾಮೋದ್ಯೋಗ (೩) ಗೋರಕ್ಷಣೆ ಮತ್ತು ಹೈನದ ವ್ಯವಸಾಯ (೪) ಕೃಷಿ (೫) ಮೂಲ ಶಿಕ್ಷಣ (೬) ನಿಸರ್ಗ ಚಿಕಿತ್ಸೆ, (೭) ಹಿಂದುಸ್ತಾನಿ (೮) ಹಳ್ಳಿಯ ಆಟಗಳು, ನೃತ್ಯಗಳು, ಹಾಡುಗಳು, ನಾಟಕಗಳು ಮತ್ತು ಕಲೆ, (೯) ಸರ್ವೋದಯ ಸಾಹಿತ್ಯ, (೧೦) ಗ್ರಾಮ ಯೋಜನೆ (೧೧) ಗ್ರಾಮ ಸ್ವಚ್ಛತೆ (೧೨) ರಾಜಸ್ಥಾನದ ಕಲೆ ಮತ್ತು ಸಂಸ್ಕೃತಿ.

ಸರ್ವೋದಯ ಧ್ಯೇಯಕ್ಕೆ ಒಪ್ಪುವಂತಿದ್ದರೆ ಇನ್ನೂ ಹೊಸ ವಿಷಯಗಳನ್ನು ಸೇರಿಸಬಹುದು.

ಇದರಲ್ಲಿ ಕೆಲವು ವಿಷಯಗಳು ಸಾಂಸ್ಕೃತಿಕವಾಗಿದ್ದರೆ ಉಳಿದವು ಅರ್ಥೋತ್ಪಾದನೆಗೆ ಸಂಬಂಧಿಸಿದವು. ಈ ವರೆಗೆ ಪ್ರದರ್ಶನಗಳಲ್ಲಿ ಗ್ರಾಮೋತ್ಪಾದಿತ ವಸ್ತುಗಳ ವಿಷಯ ಶೈಕ್ಷಣಿಕ ಮತ್ತು ವ್ಯಾವಹಾರಿಕ ಪ್ರತ್ಯಕ್ಷ ಪ್ರಯೋಗಗಳನ್ನು ತೋರಿಸುವದಲ್ಲದೆ ಖಾದಿ ಮತ್ತು ಹಳ್ಳಿಯ ಕೈಗಾರಿಕೆಗಳ ಮಾರಾಟದ ಮಳಿಗೆಗಳ ಏರ್ಪಾಡೂ ಇರುತ್ತಿತ್ತು. ಈಗ ಇಂಥ ಮಾರಾಟದ ಮಳಿಗೆಗಳು ಇರತಕ್ಕದ್ದಲ್ಲವೆಂದು ಸಮಿತಿ ನಿರ್ಣಯಿಸಿದೆ. ಮೂಲಕ ಆದು ಸರ್ವೋದಯದ ಪೂರ್ಣ ತಾತ್ಪರ್ಯವನ್ನು ಬೆಳಗಿಸುವ ಶುದ್ಧ ಶೈಕ್ಷಣಿಕ ಪ್ರದರ್ಶನವಾಗುವುದು. ಸರ್ವೋದಯ ದೃಷ್ಟಿಯಿಂದ ಸ್ವಂತ ಉಪಯೋಗಕ್ಕಾಗಿ ಉತ್ಪಾದನೆ ಮಾಡುವದಕ್ಕೇ ಉತ್ತೇಜನ ಕೊಡಬೇಕಲ್ಲದೆ ಪೇಟೆಯಲ್ಲಿ ಮಾರುವದಕ್ಕಾಗಿ ಅಲ್ಲವೆಂದು ಸಮಿತಿಗೆ ಅನಿಸುತ್ತದೆ. ಉತ್ಪಾದನೆ ಹೆಚ್ಚಬೇಕೆಂದು ಒತ್ತಿ ಹೇಳುವುದು ಈಗೀಗ ಬಹಳ ಸಾಮಾನ್ಯವಾಗಿಬಿಟ್ಟಿದೆ. ಆದರೆ ಅದು ಸ್ವಂತ ಉಪಯೋಗಕ್ಕಾಗಿ ಅಲ್ಲದಿರುವದರಿಂದ ಹಂಚಿಕೆಯ ದೊಡ್ಡ ಸಮಸ್ಯೆಯೊಂದು ಉದ್ಭವಿಸುತ್ತದೆ. ಆದುದರಿಂದ ಸರಕುಗಳ ಹಂಚಿಕೆ, ಸಾಗಣೆಗಳನ್ನು ವ್ಯವಸ್ಥಿತಗೊಳಿಸುವ ಸಲುವಾಗಿಯೂ ಅವುಗಳ ಬೆಲೆ ನಿಯಂತ್ರಣಕ್ಕಾಗಿಯೂ ದೊಡ್ಡ ದೊಡ್ಡ ಯೋಜನೆಗಳನ್ನು ಮಾಡಬೇಕಾಗುವದಲ್ಲದೆ ಕಳ್ಳಪೇಟೆ, ಲಾಭಬಡುಕತನಗಳನ್ನು ಪ್ರತಿಬಂಧಿಸುವ ಕಾಯಿದೆಗಳನ್ನೂ ಸರಕಾರಗಳು ಮಾಡಬೇಕಾಗುತ್ತದೆ. ಜನರು ತಾವೇ ತಯಾರಿಸಿಕೊಳ್ಳಬಹುದಾದ ಅಥವಾ ತಮ್ಮ ಹಳ್ಳಿಯೇ ಕೊಳ್ಳಬಹುದಾದ ವಸ್ತುಗಳ ಹಂಚುವಿಕೆ ಸರಕಾರದ ವ್ಯವಸ್ಥೆಗೆ ಒಳಗಾಗಬೇಕೆಂದರೆ ಅದು ಅವರನ್ನು ತಮ್ಮ ಅಂಕೆಯಲ್ಲಿ

(೧೩ ನೇ ಪುಟಕ್ಕೆ)

ಸರ್ವೋದಯ ಪ್ರದರ್ಶನ

(೯ ನೇ ಪುಟದಿಂದ)

ಕ್ಷದ ಸಂಗತಿಗಳಿಗೆ ಅಧೀನರಾಗಿ ಮಾಡುವದು. ಇದು ಜನರ ಸಾಮರ್ಥ್ಯವನ್ನು ಬೆಳೆಸುವ ಬದಲು ಕುಗ್ಗಿಸುವದು. ಜೀವನದ ಮೂಲಭೂತ ಅವಶ್ಯಕತೆಗಳು ಸರಕಾರದ ನಿಯಂತ್ರಣಕ್ಕೆ ಒಳಗಾದರೆ ಕಳ್ಳಪೇಟೆಗೆ ಅವಕಾಶವೊದಗಿ ಪರಿಣಾಮದಲ್ಲಿ ಅದು ಹಂಚಿಕೆಯ ಉದ್ದೇಶವನ್ನೇ ಕೆಡಿಸಿಬಿಡುವದು. ಈ ಕೆಲವು ವರ್ಷಗಳಲ್ಲಿ ಇದರ ಅನುಭವ ಸರಕಾರಕ್ಕೂ ಜನರಿಗೂ ಸೇರಿಯೆ ಸಾಕಷ್ಟಾಗಿದೆ. ಈ ಕೇಡಿನಿಂದ ಪಾರಾಗಲೆಂದೇ ಗಾಂಧೀಜಿಯವರು “ಉತ್ಪಾದನೆ ಮಾಡಿ ಬಳಸಿರಿ” ಎಂಬ ಉಪದೇಶವನ್ನು ಕೊಟ್ಟರು.

ಜನರಾದರೂ ಈ ವರೆಗೆ ಖಾದಿ ಮತ್ತು ಗ್ರಾಮೋದ್ಯೋಗಗಳನ್ನು ಸ್ವಂತ ಉಪಯೋಗಕ್ಕೆಂದಲ್ಲ, ಮಾರಾಟ ಮತ್ತು ಕೂಲಿಯ ದೃಷ್ಟಿಯಿಂದ ನೋಡುತ್ತ ಬಂದಿದ್ದಾರೆ. ಖಾದಿ ಮತ್ತು ಗ್ರಾಮೋದ್ಯೋಗದ ಸರಕುಗಳ ಮಾರಾಟಕ್ಕೆ ಎಡೆಯೇ ಇಲ್ಲವೆಂದಲ್ಲ, ನಿಜ. ಆದರೆ ಖಾದಿ ಮತ್ತು ಗ್ರಾಮೋದ್ಯೋಗಗಳನ್ನು ಸಾಧ್ಯವಿದ್ದಷ್ಟುಮಟ್ಟಿಗೆ ಹೊರಸಾಗಿಸಿ ಮಾರುವ ಕ್ಷೇತ್ರದಿಂದ ಹೊರಗಿರಿಸಬೇಕೆಂಬುದು ಸರ್ವೋದಯದ ಧ್ಯೇಯ. ಸರ್ವೋದಯದ ಅಂತಃಸ್ಥ ಶಕ್ತಿಯೇ ಈ ತತ್ವವನ್ನವಲಂಬಿಸಿದೆ. ತಾವು ಸ್ವಾವಲಂಬಿಗಳಾಗಿದ್ದರೆ, ಕೊಳ್ಳುವ ಮಾರುವ ಕೆಲಸಕ್ಕೆ ಪೇಟೆಯನ್ನೇ ನಂಬುವ ಅವಶ್ಯವಿಲ್ಲವೆಂಬ ಮಾತನ್ನು ಜನರಿಗೆ ಮನಗಾಣಿಸಿಕೊಡುವದೇ ಪ್ರದರ್ಶನದ ಪ್ರಯತ್ನವಾಗಿರಬೇಕು. ಮನೆಯಲ್ಲೇ ಸಿದ್ಧಗೊಳಿಸಿದ ಸಾಧನಗಳಿಂದ, ಸುಲಭ ಆಯುಧಗಳಿಂದ, ಅಥವಾ ಚಿಕ್ಕ ಸಹಕಾರಿ ಘಟಕಗಳ ಮೂಲಕ ಜನರು ತಂತಮಗೆ ಬೇಕಾದ ಜೀವನಾವಶ್ಯಕ ವಸ್ತುಗಳನ್ನು ತಾವು ತಾವೇ ಹೇಗೆ ಸಿದ್ಧಗೊಳಿಸಿಕೊಳ್ಳಬಹುದೆಂದು ಅವರಿಗೆ ಕಲಿಸುವುದೇ ಅದರ ಮುಖ್ಯ ಗುರಿಯಾಗಿರಬೇಕು. ಪ್ರದರ್ಶನದಲ್ಲಿ ಬಹಿರಂಗ ಮಾರಾಟದ ವ್ಯವಸ್ಥೆಯಿದ್ದರೆ ಶೈಕ್ಷಣಿಕ ಕಾರ್ಯ ಗೌಣವಾಗುವದರಿಂದ ಆ ಗುರಿ ಸಾಧಿಸಲಾರದು. ಆದುದರಿಂದ ಪ್ರದರ್ಶನದಲ್ಲಿ ಹಳ್ಳಿಯ ಸರಕುಗಳನ್ನು ಕೂಡ ಮಾರುವದಕ್ಕೆ ಅವಕಾಶ ಕೊಡಬಾರದೆಂದು ಸಮಿತಿ ನಿರ್ಧರಿಸಿದೆ.

ಆದರೂ ಸರ್ವೋದಯ ತತ್ವಕ್ಕೆ ಭಂಗ ಬಾರದಂತೆ, ರಕ್ಷಣೆ—ಉತ್ತೇಜನಗಳಿಗೆ ಪಾತ್ರವಾದ ಗ್ರಾಮೋದ್ಯೋಗದ ವಸ್ತುಗಳ ಮಾರಾಟದ ಮಂಡಿಗಳನ್ನು ಏರ್ಪಡಿಸುವದು ಸಾಧ್ಯವುಂಟು. ಅಂತೆಯೇ, ಪ್ರದರ್ಶನ ಸಮಿತಿಯ ಅಧೀನದಲ್ಲಿ ಪ್ರದರ್ಶನದ ಸಮೀಪದಲ್ಲಿಯೆ “ಗ್ರಾಮೋದ್ಯೋಗದ ಪೇಟೆ”ಯೊಂದನ್ನು ಏರ್ಪಡಿಸುವ ವಿಚಾರವಿದೆ.

ಇದಲ್ಲದೆ ಹಳ್ಳಿಯೊಂದರೆ ಹೀಗೆಯೆ ಇರಬೇಕೆಂಬ ಸತ್ಯವಾದ ಚಿತ್ರವನ್ನು ಕೊಡುವ ಗೋಸ್ಕರ ಪ್ರದರ್ಶನದ ಹತ್ತಿರವೇ ಒಂದು ಮಾದರಿ ಹಳ್ಳಿಯನ್ನು ಕಟ್ಟುವ ವಿಚಾರವೂ ಉಂಟು. ಭಾರತದ ಹಳ್ಳಿಗಳಿಂದು ಕ್ಷೀಣ ಉತ್ಪಾದನೆ ಮತ್ತು ಸಂಪತ್ತಿನ ಅಪವ್ಯಯವೆಂಬೀ ಇಮ್ಮಡಿ ಕೇಡಿಗೆ ತುತ್ತಾಗಿವೆ. ಅಸ್ವಚ್ಛ ನೀರು, ಶೌಚ ಮೂತ್ರಗಳು, ಶಗಣಿ ಮತ್ತು ಗೊಬ್ಬರವಾಗುವಂಥ ಇತರ ಪದಾರ್ಥಗಳ ಯೋಗ್ಯ ಉಪಯೋಗವನ್ನೆಂತು ಮಾಡಿಕೊಳ್ಳಬೇಕೆಂಬುದನ್ನು ಜನತೆಗೆ ತಿಳಿಸಲಾಗುವದು. ಇದರಿಂದ ಹಳ್ಳಿಗಳು ಸ್ವಚ್ಛ ಮತ್ತು ಆರೋಗ್ಯದಾಯಕವಾಗುವವು. ಈ ಹೊಲಸೇ ಸಂಪತ್ತಾಧನವೆಂತಾಗಬಲ್ಲುದೆಂಬುದನ್ನು ತೋರಿಸಲಾಗುವದು. ವಸತಿ, ಸಾಲೆ, ಸಹಕಾರ ಸಂಘಗಳ ಕಟ್ಟಡಗಳೆಂತಿರಬೇಕೆಂಬುದನ್ನೂ ಹೇಳಲಾಗುವದು. ಔಷಧಗಳಿಗೆ ಉಪಯುಕ್ತವಾಗುವ ವನಸ್ಪತಿ ಮೊದಲಾದವುಗಳು ಮಾದರಿ ಹಳ್ಳಿಗೆ ಅವಶ್ಯವೆಂತೆಂಬುದನ್ನೂ ತೋರಿಸಲಾಗುವದು.

ಈ ಮಾದರಿ ಹಳ್ಳಿಯನ್ನು ತೋರಿಸುವದಲ್ಲದೆ ಶೌಚ ಮೊದಲಾದವುಗಳ ಯೋಗ್ಯ ಉಪಯೋಗ ಮಾಡಿ ಅವನ್ನು ಗೊಬ್ಬರದಂತೆ ಉಪಯೋಗವೆಂತು ಮಾಡಿಕೊಳ್ಳಬಹುದೆಂಬುದನ್ನು ತೋರಿಸಲು ಸ್ವತಂತ್ರ ಸ್ವೈರ್ಮಲ್ಯ ಶಾಖೆಯನ್ನು ಒತ್ತಟ್ಟಿಗೆ ತೋರಿಸಲಾಗುವದು.

ರಾಜಸ್ಥಾನದಲ್ಲಿ ಕಾಂಗ್ರೆಸ ಅಧಿವೇಶನ ಕೂಡಲಿರುವದರಿಂದ ರಾಜಸ್ಥಾನದಲ್ಲಿಯ ಹಳೆಯ ಹೊಸ ಕಲೆ ಮತ್ತು ಸಂಸ್ಕೃತಿಯ ವೈಶಿಷ್ಟ್ಯಗಳನ್ನು ಪ್ರದರ್ಶಿಸಲಾಗುವದು.

ಶಕ್ಯವಿದ್ದ ಮಟ್ಟಿಗೆ ಹಳ್ಳಿಗಳಲ್ಲಿ ತಯಾರಾದ ಸಾಮಾನುಗಳನ್ನೇ ಈ ಪ್ರದರ್ಶನದಲ್ಲಿ ಉಪಯೋಗಿಸಲಾಗುವದು. ಪ್ರದರ್ಶನದಲ್ಲಿಯ ಪ್ರತಿಯೊಬ್ಬ ಅಧಿಕಾರಿಯು, ಕಾರ್ಯಕರ್ತನು ಮತ್ತು ಕಲಾಕುಶಲನು ಖಾದಿಯನ್ನೆ ಧರಿಸಬೇಕೆಂದು ನಿರ್ಬಂಧಿಸಲಾಗುವದು.

—ಕೃಷ್ಣದಾಸ ಗಾಂಧಿ

(ಹಿಂದುಸ್ತಾನಿಯಿಂದ ಅನುವಾದಿತ)

ವೃತ್ತಪತ್ರಿಕೆಗಳ ತಂತಿಗಳು ರಾಷ್ಟ್ರಭಾಷೆಯಲ್ಲಿ

ಇತ್ತೀಚೆ ಅಂದರೆ ೧೦–೮–೧೯೪೮ ಕ್ಕೆ ಆಂಗ್ಲ ಭಾಷೆಯನ್ನುಳಿದು ಎಲ್ಲ ಪ್ರಾದೇಶಿಕ ಭಾಷೆಗಳ ಒಂದು ಶಿಷ್ಟಸಮಿತಿಯು ಸಂಪರ್ಕ ಶಾಖೆಯ ಮಂತ್ರಿಗಳ ಬಳಿಗೆ ಹೋಗಿತ್ತು. ತಂತಿಯ ವಾರ್ತೆಗಳನ್ನೆಲ್ಲ ಬೇರೆ ಬೇರೆ ದೇಶೀಯ ಭಾಷೆಗಳಲ್ಲಿ ಕಳಿಸುವಂತೆ ಏರ್ಪಾಟು ಮಾಡಬೇಕೆಂದು ಈ ಸಮಿತಿಯವರು ಮಂತ್ರಿಗಳಿಗೆ ಕೇಳಿಕೊಂಡರು. ಅರ್ಥಾತ್ ಈಗ ಹೀಗೆ ವಾರ್ತೆ ಕಳಿಸಬೇಕೆನ್ನುವವರು ರೋಮನ್ ಲಿಪಿಯನ್ನೇ ಬಳಸಬೇಕಾಗುವದು.

ವಸ್ತುಸ್ಥಿತಿಯನ್ನು ನೋಡಿ ಹೇಳುವದಾದರೆ ಈಗಲೂ ವಾರ್ತೆಗಳನ್ನು ಬೇಕಾದ ಭಾಷೆಯಲ್ಲಿ ಕಳಿಸಲು ಯಾವ ನಿರ್ಬಂಧವೂ ಇಲ್ಲ. ಇಷ್ಟೇ ಸ್ವರಲೇಖನವನ್ನು ಮಾತ್ರ ರೋಮನ್ ಲಿಪಿಯಲ್ಲಿಯೇ ಬರೆದಿರಬೇಕು. ಇಂತಹ ವಾರ್ತೆಗಳು ಆಂಗ್ಲ ಭಾಷೆಯಲ್ಲಿ ಇಲ್ಲವೆಂಬ ಕಾರಣದಿಂದ ತಂತಿಯ ಶಾಖೆಯ ಅಧಿಕಾರಿಗಳು ಅವನ್ನು ತಡೆಹಿಡಿಯಲಾರರು. ಆದರೆ ವಾರ್ತಾಹಾರಕ ಠಾಣದವರೆಗೆ ಆ ವಾರ್ತೆಗಳ ಭಾಷೆ ತಿಳಿಯದು ಎಂದು ಅವನ್ನು ತಡೆಗಟ್ಟಬಹುದಷ್ಟೇ.

ಸಂಪರ್ಕಶಾಖೆಯ ಮಂತ್ರಿಗಳು ಈ ವಿಷಯವನ್ನು ಆಸ್ಥೆಯಿಂದ ಸಮಾಲೋಚಿಸುವದಾಗಿ ಸಮಿತಿಗೆ ಆಶ್ವಾಸನಕೊಟ್ಟಿದ್ದಾರೆ.

ಈ ಪ್ರಯತ್ನ ಅಭಿನಂದನೀಯವಾಗಿದೆ. ಹಿಂದುಸ್ತಾನದ ಪ್ರಾದೇಶಿಕ ಭಾಷೆಗಳ ವೃತ್ತಪತ್ರಿಕೆಗಳ ವಿಶೇಷ ಸುದ್ದಿಗಾರರ ಕೆಲಸ ಇದರಿಂದ ಅದೆಷ್ಟೋ ಹಗುರಾಗುವದು. ಅಲ್ಲದೆ, ವೃತ್ತ ಪತ್ರಿಕೆಗಳಿಗೆ ಬರುವ ಎಂಟರಲ್ಲೊಂದು ಭಾಗದ ವಾರ್ತೆಗಳನ್ನು ಆಯಾ ಪ್ರಾದೇಶಿಕ ಭಾಷೆಗೆ ಮತ್ತೆ ಪರಿವರ್ತಿಸಿಕೊಳ್ಳುವ ಪ್ರಯಾಸವು ಆಯಾ ಪತ್ರಿಕೆಗಳ ಕೆಲಸಗಾರರಿಗೆ ತಪ್ಪುತ್ತದೆ. ಆದರೆ ನನಗನಿಸುವದು, ಈ ಶಿಷ್ಟ ಸಮಿತಿಯು ಇನ್ನೊಂದು ಹೆಜ್ಜೆ ಮುಂದೆ ಹೋಗಿ, ವಾರ್ತೆಗಳನ್ನೆಲ್ಲ ರಾಷ್ಟ್ರ ಭಾಷೆಯಲ್ಲಿಯೇ ತಂತಿಯ ಮೂಲಕ ಪಸರಿಸುವ ಪದ್ಧತಿಯನ್ನು ಬಳಕೆಗೆ ತರಬೇಕೆಂದು ಸಂಪರ್ಕ ಸಚಿವರಿಗೆ ಒತ್ತಾಯ ಪಡಿಸಬೇಕಿತ್ತು. ಇದರಿಂದ ಸುದ್ದಿಯ ಸಂಸ್ಥೆಗಳು ತೊಡಕಿನಲ್ಲಿ ಸಿಲುಕಿಕೊಳ್ಳುವವೆಂಬುದು ಗೊತ್ತು. ನನಗೆ ಸುದ್ದಿಯ ಬಹುಭಾಗವನ್ನು ಈ ಸುದ್ದಿಯ ಸಂಸ್ಥೆಗಳೇ ಪ್ರಾದೇಶಿಕ ಭಾಷೆಗಳ ವೃತ್ತಪತ್ರಿಕೆಗಳಿಗೂ ಒದಗಿಸುತ್ತವೆ. ಸ್ಥೂಲಮಾನದಿಂದ ಎಂಟರಲ್ಲಿ ಏಳುಭಾಗ ವಾರ್ತೆಗಳು ಅ. ಪ್ರೆ. ಇಂ, ರಾಯ್ಟರ್, ಯು. ಪ್ರೆ. ಇಂ., ಅ. ಪ್ರೆ. ಅ., ಮೊದಲಾದವರಿಂದಲೇ ಒದಗಿಸಲ್ಪಡುತ್ತವೆ. ಹೀಗಿರುವಾಗ ಪ್ರಾದೇಶಿಕ ಪತ್ರಿಕೆಗಳು ರಾಷ್ಟ್ರಭಾಷೆಯ ವಾರ್ತಾಪ್ರಸಾರವನ್ನು ಅನುಮೋದಿಸಿದರೆ ಈ ಸುದ್ದಿಯ ಸಂಸ್ಥೆಗಳಿಗೆ ಈ ದಿಶೆಯಲ್ಲಿ ತಕ್ಕ ವ್ಯವಸ್ಥೆ ಮಾಡಬೇಕೆಂದು ಸಹಜವಾಗಿ ಮನಗಲಿಸಬಹುದು. ಆಗ ಪತ್ರಿಕಾವಾರ್ತೆಗಳನ್ನೆಲ್ಲ ರಾಷ್ಟ್ರಭಾಷೆಯಲ್ಲಿಯೇ ಬಿತ್ತರಿಸಲೊಪ್ಪಲು ಸಂಪರ್ಕ ಸಚಿವರಿಗೂ ಅಷ್ಟು ಕಷ್ಟವಾಗುವದಿಲ್ಲ.

ಇನ್ನು ನನ್ನ ಈ ಸೂಚನೆಯಿಂದುಂಟಾಗುವ ಸಮಸ್ಯೆಗಳನ್ನು ಪರಾಮರ್ಶಿಸುವಾ. ಆಂಗ್ಲ ಪತ್ರಿಕೆಗಳಿಗೆ ಆಂಗ್ಲ ಭಾಷೆಯಲ್ಲಿಯೇ ವಾರ್ತೆಗಳು ಬಿತ್ತರಿಸಲ್ಪಡುವವೆಂಬ ಗ್ರಹಿಕೆಯಿಂದಲೇ ನಾನು ಸಾಗುತ್ತಿದ್ದೇನೆ.

ಪತ್ರಿಕಾವ್ಯವಸಾಯದಲ್ಲಿ ಪ್ರಚಲಿತವಿರುವ ಹನ್ನೆರಡು ಪ್ರಾದೇಶಿಕ ಭಾಷೆಗಳಲ್ಲಿ ವಾರ್ತೆಗಳನ್ನು ಬಿತ್ತರಿಸುವದಕ್ಕಿಂತ ಆಂಗ್ಲಭಾಷೆಯಲ್ಲಿ ಬಿತ್ತರಿಸುವದು ಸುಲಭವೆಂದು ಹೇಳಿಯೇ ನಾನು ಸಾಗುವೆ. ಹೀಗೆ ಹೇಳಿದೆನೆಂದು ಪ್ರಾದೇಶಿಕ ಭಾಷೆಗಳ ವಾರ್ತೆಯ ಬಿತ್ತರಣೆಗೆ ನಾನು ಪ್ರತಿಕೂಲ ವ್ರತದವನೆಂದು ಮಾತ್ರ ತಿಳಿಯಬಾರದು. ಈ ವಿಷಯವನ್ನು ನಾನು ಕೇವಲ ತುಲನಾತ್ಮಕ ದೃಷ್ಟಿಯಿಂದ ತೂಗಿ ನೋಡಿದೆ ಇಷ್ಟೇ. ಉದಾಹರಣೆಗೆಂದು ದಿಲ್ಲಿಯಂತಹ ಒಂದು ಸ್ಥಳವನ್ನು ತೆಗೆದುಕೊಳ್ಳೋಣ. ಪ್ರಾದೇಶಿಕ ಭಾಷೆಗಳ ಪ್ರಮುಖ ಪತ್ರಿಕೆಗಳ ಅನೇಕ ವಿಶೇಷ ಸುದ್ದಿಗಾರರು ದಿಲ್ಲಿಯಲ್ಲಿ ಇರುತ್ತಾರೆ. ಅವರೆಲ್ಲ ತಮ್ಮ ತಮ್ಮ ಪತ್ರಿಕೆಗಳಿಗೆ ತಮ್ಮ ತಮ್ಮ ವಿಶಿಷ್ಟ ಭಾಷೆಗಳಲ್ಲಿ ವಾರ್ತೆಗಳನ್ನು ಕಳಿಸಬೇಕೆಂದು ಬಯಸಿದರೆ ಬಿತ್ತರಣೆಯ ಯಾತಾಯಾತವನ್ನು ನಿಯಂತ್ರಿಸುವದು, ಸುಗಮವಾಗಿ ಸಾಗಿಸುವದು ತುಂಬ ತೊಂದರೆಯದಾಗುವದು. ಸಿಬ್ಬಂದಿ, ಒಂದಕ್ಕಿಂತ ಹೆಚ್ಚು ಭಾಷೆ ಬಲ್ಲ ಜನರನ್ನು ಕೆಲಸಕ್ಕಿಟ್ಟುಕೊಳ್ಳುವದು, ತಂತಿಯ ಮಾರ್ಗಗಳು ಇವೆಲ್ಲವುಗಳ ದೃಷ್ಟಿಯಿಂದ ನೋಡಿದರೆ, ತಂತಿಯ ಅಧಿಕಾರಿಗಳಿಗೆ ಅನೇಕ ಭಾಷೆಗಳಿಗಿಂತ ಎರಡೇ ಭಾಷೆಗಳ ಮುಖಾಂತರ ಕಾರ್ಯ ನಿರ್ವಹಿಸುವದು ಅದೆಷ್ಟೋ ಸುಲಭವಾಗುವದೆಂಬಲ್ಲಿ ಸಂದೇಹವೇ ಇಲ್ಲ.

ಸುದ್ದಿಯ ಸಂಸ್ಥೆಗಳು ಮಾತ್ರ ಹೊಸ ಸಿಬ್ಬಂದಿಯನ್ನೇ ಏರ್ಪಡಿಸಬೇಕಾಗುವದು. ಆಂಗ್ಲ ಭಾಷೆಯ ಮುಖಾಂತರ ಕೆಲಸ ಸಾಗಿಸುವವರನ್ನು ಇರಿಸಿಕೊಳ್ಳಬೇಕಾಗುವದಲ್ಲದೇ ರಾಷ್ಟ್ರಭಾಷೆ ಆಂಗ್ಲಭಾಷೆ ಎರಡನ್ನೂ ಚೆನ್ನಾಗಿ ಬಲ್ಲ ಕೆಲವರು ಕಾರ್ಯಕ್ಷಮ ಕೆಲಸಗಾರರನ್ನೂ ‘ಸಂಸ್ಥೆಯವರು ನಿಯಮಿಸಿಕೊಳ್ಳಬೇಕಾಗುವದು. ಹಿಂದುಸ್ತಾನದಲ್ಲೆಲ್ಲ ಈಗ ವಾರ್ತೆಗಳನ್ನು ಮೂಡಿಸುತ್ತಿರುವ ಟಾಯಿಪರಾಯ್ಟರಗಳಲ್ಲಾಗಲೀ ಟೆಲಿಪ್ರಿಂಟರಗಳಲ್ಲಾಗಲೀ ಯಾವ ಮಾರ್ಪಾಟೂ ಆಗಬೇಕಾದ ಅವಶ್ಯಕತೆಯಿರುವದಿಲ್ಲ.

ರಾಷ್ಟ್ರ ಭಾಷೆಗಾಗಲೀ ಹಿಂದುಸ್ತಾನದ ಪ್ರಾದೇಶಿಕ ಭಾಷೆಗಳಿಗಾಗಲೀ ರೋಮನ್ ಲಿಪಿಯನ್ನು ಸ್ವೀಕರಿಸಬೇಕೆಂದು ನಾನು ಇಲ್ಲಿ ಒಂದಿಷ್ಟೂ ಸೂಚಿಸಬಯಸುವದಿಲ್ಲ. ಆ ವಿಷಯವೇ ಬೇರೆ. ಅದನ್ನು ಅದರ ಯೋಗ್ಯತೆಯ ಬಲದಿಂದಲೇ ನಿಷ್ಕರ್ಷಿಸಬೇಕು. ಒಬ್ಬ ಸಂಶೋಧಕರು ಒಂದು ಅಕ್ಷರಾಂತರ ಪದ್ಧತಿಯನ್ನು ಕಂಡುಹಿಡಿದಿದ್ದು ಅದರ ಸಹಾಯದಿಂದ ಬೇಕಾದ ದೇಶೀಯ ಭಾಷೆಯನ್ನೂ ಸುಲಭವಾಗಿ ತಂತಿಯ ವ್ಯವಹಾರಕ್ಕೆ ಬಳಸಬಹುದೆಂದು ಪತ್ರಿಕೆಗಳಲ್ಲಿ ಪ್ರಕಟವಾದದ್ದು ಕಂಡು (ನ್ಯಾಶನಲ್ ಹೆರಾಲ್ಡ ೨೦–೮–೪೮) ನನಗೆ ಅತ್ಯಂತ ಆನಂದವಾಗಿದೆ. ದೇವನಾಗರಿ ಲಿಪಿಯನ್ನು ಟಾಯಿಪರಾಯ್ಟರಗಳಿಗೆ, ಟೆಲಿಪ್ರಿಂಟಗಳಿಗೆ ಮತ್ತು ಲಘುಲಿಪಿಗೆ ಅಳವಡುವಂತೆ ಮಾರ್ಪಡಿಸುವ ಪ್ರಯತ್ನ ನಡೆದದ್ದನ್ನೂ ನಾನು ಬಲ್ಲೆ. ಈ ನನ್ನ ಸೂಚನೆಯು ಬರುವ ಒಂದೆರಡು ವರ್ಷಗಳ ನಡುಗಾಲದ ಅನುಕೂಲಕ್ಕೆ ಮಾತ್ರ ಸಂಬಂಧಿಸಿದೆ. ಆದ್ದರಿಂದ ಈ ಒಂದೆರಡು ವರ್ಷಗಳ ಕಾಲ ರಾಷ್ಟ್ರಭಾಷೆಯಲ್ಲಿ ರೋಮನ್ ಲಿಪಿಯ ಮೂಲಕ ವಾರ್ತೆಗಳನ್ನು ಸುಲಭವಾಗಿ ಬಿತ್ತರಿಸಬಹುದಾದರೆ ನಾವೇಕೆ ಆ ಪ್ರಯೋಜನ ಪಡೆಯಬಾರದು?

ಈ ಸೂಚನೆಯು ನಮಗೆ ಕೂಡಲೇ ಪ್ರಯೋಜನಕಾರಿಯಾಗಿರುವದಿಷ್ಟೇ ಅಲ್ಲ, ರಾಷ್ಟ್ರೀಯ ದೃಷ್ಟಿಯಿಂದಲೂ ಇದು ಅತ್ಯಂತ ಶ್ರೇಯಸ್ಕರವಾಗಿದೆ.

ಪ್ರಥಮ ಪ್ರಯೋಜನವೆಂದರೆ, ಆಂಗ್ಲ ಭಾಷೆಗಿಂತ ರಾಷ್ಟ್ರಭಾಷೆಯನ್ನು ಪರಿವರ್ತಿಸಿಕೊಳ್ಳಲು ಪ್ರಾದೇಶಿಕ ಭಾಷೆಯ ಪತ್ರಿಕೆಗಳಿಗೆ ಹೆಚ್ಚಿಗೆ ಸುಲಭವಾಗುವದು. ರಾಷ್ಟ್ರಭಾಷೆಯು ನಮಗೆ ವಿದೇಶೀಯವಲ್ಲದ್ದರಿಂದ ಅರ್ಧದಷ್ಟು ಅವಕಾಶದಲ್ಲಿ ಪರಿವರ್ತನ ಕಾರ್ಯ ಮುಗಿದುಬಿಡುವದು. ರಾಷ್ಟ್ರಭಾಷೆಯ ಬಂಧ, ವಾಕ್ಯರಚನಾ ಪದ್ಧತಿ, ಶಬ್ದಸಂಪದ, ಇವೆಲ್ಲ ನಮಗೆ ಆಂಗ್ಲ ಭಾಷೆಗಿಂತ ಹೆಚ್ಚು ಪರಿಚಿತವಾಗಿವೆ. ಅದು ಭಾರತದಲ್ಲಿಯೇ ಹುಟ್ಟಿ ಬಂದುದಾದ್ದರಿಂದ ಅದರ ನಾಣ್ಣುಡಿಗಳು, ವಡೆನುಡಿಗಳು, ವ್ಯಂಗ್ಯ, ದೇಶಿ ಎಲ್ಲವೂ ಭಾರತೀಯವಾಗಿದ್ದು ಆಂಗ್ಲ ಭಾಷೆಗಿಂತ ಅವುಗಳನ್ನು ನಮ್ಮ ನಮ್ಮ ಭಾಷೆಗೆ ಅತಿಸುಲಭವಾಗಿಯೇ ಪರಿವರ್ತಿಸಬಹುದು.

ದ್ವಿತೀಯ ಪ್ರಯೋಜನವೆಂದರೆ, ಮೂಲಸ್ಥಾನದಲ್ಲಿ ಅಂದರೆ ಸುದ್ದಿ ಸಂಸ್ಥೆಗಳ ಕಚೇರಿಗಳಲ್ಲಿ ಸಾಕಷ್ಟು ಎಚ್ಚರಿಕೆವುಳ್ಳ ನಿಷ್ಣಾತರನ್ನೇ ಅಲ್ಲಿ ಕೆಲಸಕ್ಕೆ ನಿಯೋಜಿಸಿದರೆ ದೇಶದಾದ್ಯಂತ ಪ್ರಚಲಿತ ವಿಚಾರಗಳ ಬಗ್ಗೆ ಒಂದೇ ಬಗೆಯ ಶಬ್ದ ಪ್ರಯೋಗಗಳನ್ನು ಬಳಕೆಗೆ ತರಬಹುದು ಅವನ್ನೇ ಎಲ್ಲ ಪ್ರಾದೇಶಿಕ ಭಾಷೆಗಳೂ ಉಪಯೋಗಿಸುವಂತೆ ಮಾಡಬಹುದು. ಈ ಮೂಲಕ ಪ್ರಾದೇಶಿಕ ಭಾಷೆಗಳು ಹತ್ತಿರ ಹತ್ತಿರ ಬಂದಂತಾಗುವದಲ್ಲದೆ ಆಯಾ ಪ್ರಾಂತಗಳ ಜನರಲ್ಲಿ ತಾವು ಒಬ್ಬರಿಂದೊಬ್ಬರು ದೂರವಾಗಿಲ್ಲವೆಂಬ ಭಾವನೆಯೂ ಉಂಟಾಗುವದು. ಇದಕ್ಕೆ ನಾನೊಂದು ಉದಾಹರಣೆ ಕೊಡಬಹುದು. ಇಂದು ‘ಡೆಮಾಕ್ರಸಿ’ ಎಂಬ ಒಂದೇ ಶಬ್ದವು ವಿಧವಿಧವಾಗಿ ಭಾಷಾಂತರ ಹೊಂದಿದೆ. ಈ ಶಬ್ದಕ್ಕೆ ಯಾರು ಲೋಕಸತ್ತಾ ಎಂದಿದ್ದಾರೆ. ಯಾರು ಲೋಕತಂತ್ರ, ಪ್ರಜಾಪ್ರಭುತ್ವ, ಪ್ರಜಾತಂತ್ರ ಲೋಕಶಾಹಿ, ಪ್ರಜಾಸತ್ತಾ ಎಂದು ಮೊದಲಾಗಿ ಬಳಸಿದ್ದಾರೆ. ಇದೇ ಬಗೆಯಾಗಿ ‘ಕಾನ್‌ಸ್ಟಿಟ್ಯೂಶನ್’ ಎಂಬ ಮಾತನ್ನು ಘಟನಾ, ವಿಧಾನ, ರಾಜ್ಯಾಂಗ ರಚನಾ ಎಂದು ಮೊದಲಾಗಿ ಪರಿವರ್ತಿಸಲಾಗಿದೆ. ಆದರೆ ಮೇಲಿನ ಸೂಚನೆಯನ್ನು ಅಂಗೀಕರಿಸಿದ್ದಾದರೆ ಪ್ರಯೋಗ ಸಾಮಾನ್ಯತೆಯು ಎಲ್ಲೆಲ್ಲಿಯೂ ತಾನಾಗಿ ಪ್ರಸ್ಥಾಪಿತವಾಗುವದು. ಭಾಷೆಯೆಂದರೆ ಒಂದು ಅರ್ಥವನ್ನೋ ಭಾವನೆಯನ್ನೋ ಅಭಿವ್ಯಕ್ತಗೊಳಿಸುವ ಸ್ವರಸಂಕೇತವಲ್ಲದೆ ಇನ್ನೇನು?

ನನ್ನ ನಮ್ರ ಅಭಿಪ್ರಾಯದಂತೆ, ರಚನಾತ್ಮಕ ರಾಷ್ಟ್ರೀಯತ್ವದತ್ತ ಇದೊಂದು ಬಗೆಯ ಬಹುದೊಡ್ಡ ಪ್ರಗತಿಯೇ ಸರಿ. ಇದರಿಂದ ಯಾವ ಪ್ರಾಂತವೂ ಯಾವ ಪ್ರಾದೇಶಿಕ ಭಾಷೆಯೂ ಏನನ್ನೂ ಕಳೆದುಕೊಳ್ಳುವದಿಲ್ಲ. ಆದರೆ ರಾಷ್ಟ್ರಕ್ಕೆ ಮಾತ್ರ ಇದರಿಂದ ಅಸೀಮ ಲಾಭವಿದೆ.

ರಾಷ್ಟ್ರ ಭಾಷೆಗೆ ರೋಮನ್ ಲಿಪಿಯನ್ನು ಉಪಯೋಗಿಸಬೇಕೆಂಬ ಬಗ್ಗೆ ವಿರೋಧವಿದೆ ಎಂಬುದನ್ನು ನಾನು ಬಲ್ಲೆ. ಈ ವಿರೋಧವು ಭಾವನಾಪ್ರಧಾನವಾಗಿರುವದಲ್ಲದೆ ವಿಚಾರಾತ್ಮಕವಾಗಿರುವದಿಲ್ಲ. ಮಾನವಜೀವನದಲ್ಲಿ ಭಾವಾವೇಗಗಳಿಗೆ ಖಂಡಿತ ದೊಡ್ಡ ಸ್ಥಾನವಿದೆ. ಈ ವಿಷಯವನ್ನು ತೀಕ್ಷ್ಣ ತರ್ಕದೃಷ್ಟಿಯಿಂದ ನೋಡಿದ್ದಾದರೆ, ಕಾರ್ಯಕ್ಷಮವಾದ ಯಾವ ಲಿಪಿಯೂ ಆಗಬಹುದು ಎಂದು ತೋರದಿರದು. ನಾಗರಿ ಲಿಪಿಗಿಂತ ತಮಿಳು ಭಾಷೆಯಲ್ಲಿ ೧೫ ಅಕ್ಷರಗಳು ಕಡಿಮೆಯೆಂದು ತಮಿಳು ಭಾಷೆಯಾಗಲೀ ತಮಿಳು ಜನರಾಗಲೀ ಬೌದ್ಧಿಕ ಪ್ರಗತಿಯಲ್ಲಿ ಕುಂಟಲಿಲ್ಲ. ಉಳಿದ ಭಾಷೆಗಿಂತ ಪರಿಪೂರ್ಣವಾದ ನಿರುಕ್ತವಿದ್ದ ನಾಗರಿ ಲಿಪಿಯನ್ನು ಬಳಸುತ್ತ ಬಂದವರು ಅಸಾಮಾನ್ಯ ಬೌದ್ಧಿಕ ಶಕ್ತಿಯನ್ನೋ ಇನ್ನಾವುದೋ ಸಾಮರ್ಥ್ಯವನ್ನೋ ಸಂಪಾದಿಸಿದ್ದೂ ಕಂಡು ಬರುವದಿಲ್ಲ. ಈ ಸಮಸ್ಯೆಯನ್ನು ನಾವು ಮಾನಸಶಾಸ್ತ್ರದ ಮತ್ತೂ ನಾಗರಿಕತೆಯ ಒಲೆತ ಈ ದೃಷ್ಟಿಯಿಂದ ಪರೀಕ್ಷಿಸಿದ್ದಾದರೆ, ಮನುಷ್ಯನು ಅತ್ಯಲ್ಪ ಸಾಮಗ್ರಿಗಳಿಂದ ಹೆಚ್ಚು ಕೆಲಸವನ್ನು ಮಾಡಿ ಮುಗಿಸಲು ಹವಣಿಸುತ್ತ ಬಂದುದೇ ಕಂಡು ಬರುತ್ತನೆ. ಉದ್ದಿಮೆಗಳಲ್ಲಿ ಬುದ್ಧಿವಂತಿಕೆಯೆಂದರೆ ಇದೇ.

ಆದರೆ ನಾನಿಲ್ಲಿ ಯಾವದೇ ಲಿಪಿಯನ್ನು ಎತ್ತಿ ಹಿಡಿಯ ಹೊರಟಿಲ್ಲ. ನನ್ನ ದೃಷ್ಟಿಯೆಲ್ಲ ಕೂಡಲೇ ವಾರ್ತೆಗಳನ್ನು ರಾಷ್ಟ್ರ ಭಾಷೆಯಲ್ಲಿ ಬಿತ್ತರಿಸಲು ಬರುವಂತಾಗಲಿ ಎಂಬುದರ ಮೇಲೆ ಕೇಂದ್ರೀಕೃತವಾಗಿದೆ. ಆಧುನಿಕ ಉಪಯೋಗಕ್ಕೆ ಅನುಕೂಲವಾಗುವಂತೆ ನಾಗರಿ ಲಿಪಿಯು ಮಾರ್ಪಾಟು ಹೊಂದುವ ವರೆಗೆ ಕೆಲ ಕಾಲ ರೋಮನ್ ಲಿಪಿಯನ್ನು ಏಕೆ ಬಳಸಕೂಡದು ಎಂದೇ ನನ್ನ ಪ್ರಶ್ನೆ. ಬುದ್ಧಿಯ ಕಡಿವಾಣವಿಲ್ಲದ ಭಾವಾವೇಗಕ್ಕೆ ನಾವು ಎಡೆಗೊಟ್ಟರೆ ನಮಗೆ ಹಾನಿ ಕಟ್ಟಿಟ್ಟದ್ದೇ.

ರಂ. ರಾ. ದಿವಾಕರ

[ಟಿಪ್ಪಣಿ– ಒಂದು ಶರ್ತನೊಡನೆ ನಾನು ಮೇಲಿನ ವಿಚಾರಗಳನ್ನು ಅನುಮೋದಿಸುತ್ತೇನೆ. ಈ ಪದ್ಧತಿಯು ಬಳಕೆಗೆ ಬರುವ ಮೊದಲು ಭಾರತೀಯ ಸ್ವರಸಂಕೇತಗಳನ್ನು ರೋಮನ್ ಲಿಪಿಯಲ್ಲಿ ಹೊರಡಿಸಲು ಅನುಕೂಲವಾಗುವಂತೆ ಭಾರತದಲ್ಲೆಲ್ಲ ಸಾರ್ವತ್ರಿಕವಾಗಿ ಸ್ವೀಕೃತವಾಗುವಂತಹ ನಿಯಮಗಳನ್ನು ಏರ್ಪಡಿಸಬೇಕು. ತಪ್ಪುತಪ್ಪಾಗಿ ಅಕ್ಷರಾಂತರಗಳನ್ನು ಮಾಡುವ ಮೂಲಕ ಅನವಶ್ಯಕ ಮತ್ತು ಗಂಭೀರ ಉಚ್ಚಾರವಿಕೃತಿಗಳು ಆದದ್ದುಂಟು. ಅರ್ಥಾತ್ ತಂತಿಗೋಸ್ಕರ ಏರ್ಪಟ್ಟ ಅಕ್ಷರಾಂತರ ಪದ್ಧತಿಯಲ್ಲಿ ಕೊಂಬು ಚಿಕ್ಕೆ ಮೊದಲಾದವು ಇರಕೂಡದು. ಆದರೂ ಅದು ಸರಿಯಾಗಿರಬೇಕು ಹೀಗಿರುವದು ಸಾಧ್ಯವೆಂದು ನನ್ನ ನಂಬಿಗೆ.

ವರ್ಧಾ

೧೩–೯–೪೮ ಕಿಶೋರಲಾಲ ಮಶ್ರುವಾಲಾ

ರೂಪರಂಗ

ಸೀಥಾ ರಾಸ್ತಾ

ಮುರಾರಿ ಗೋವಿಂದರು ಗೆಳೆಯರು. ಮುರಾರಿಯ ಮಗ ಶ್ಯಾಮು, ಗೋವಿಂದನ ಮಗಳು ಬೇಲಾ. ಬೇಲೆಯ ಸಾಯಲಿಕ್ಕೆ ಬಿದ್ದಿದ್ದ ತಾಯಿಯಾದ ರಾಧೆಯ ಅಪೇಕ್ಷೆಯಂತೆ ಬೇಲಾ ಶ್ಯಾಮುರ ಬಾಲ್ಯವಿವಾಹವಾಯಿತು. ರಾಧೆ ಕಣ್ಣು ಮುಚ್ಚಿದಳು. ಗೋವಿಂದ ಕುರುಡನಾದ, ಮಗಳೇ ಅವನಿಗೆ ನೆರವಾದಳು.

ಶ್ಯಾಮು ಕಾಲೇಜಿನಲ್ಲಿ ಓದುತ್ತಿದ್ದ. ಬೇಲಾ ಹಾಲು ಮಾರುತ್ತ ತಂದೆಯ ಮನೆಯಲ್ಲಿ ಬೆಳೆಯುತ್ತಿದ್ದಳು. ಒಬ್ಬರಿಗೊಬ್ಬರ ಗುರುತೇ ಇರಲಿಲ್ಲ. ಆಕಸ್ಮಿಕವಾಗಿ ಒಮ್ಮೆ ಗುರುತಾಯಿತು. ಶ್ಯಾಮುನ ಗೆಳತಿಯಾದಳು ಬೇಲಾ. ಆದರೂ ಅವರಿಬ್ಬರಿಗೂ ತಾವು ಗಂಡ ಹೆಂಡಿರೆಂಬುದು ಗೊತ್ತಿಲ್ಲವಾಗಿ ಹೊಸದಾಗಿ ಪ್ರೀತಿಸುವವರಂತೆ ನಡೆದುಕೊಂಡರು. ಒಮ್ಮೆ ಅಪ್ಪನಿಂದ ತನಗೆ ಮದುವೆಯಾಗಿತ್ತೆಂಬುದನ್ನು ತಿಳಿದ ಅವಳಿಗೆ ದುಃಸಹ ವೇದನೆಯಾಯಿತು. ಧರ್ಮ ಬಿಡಲಾರಳು, ಶ್ಯಾಮುನನ್ನೂ ಬಿಡಲಾರಳು—ಹೀಗಾಯಿತು ಅವಳ ಮನಸ್ಸಿನ ಹೊಯ್ದಾಟ.

ಮುರಾರಿ ಬಂದು ಶ್ಯಾಮುನನ್ನು ನೋಡಿ ಅವನ ಹೆಂಡತಿಯನ್ನು ಕರೆದುಕೊಂಡು ಬರುವದಾಗಿ ಹೇಳಿದಾಗ ಅವನಿಗೆ ತನ್ನ ಮದುವೆಯಾಗಿತ್ತೆಂಬುದು ತಿಳಿದು ಅವನ ಮನಸ್ಸಿಗೆ ಬಹಳ ದುಃಖವಾಯಿತು. ಆದರೂ ಅವನ ಮನಸ್ಸು ಮಾತ್ರ ಬೇಲೆಯಿಂದ ವಿಚಲಿತವಾಗಲಿಲ್ಲ. ಆದರೆ ಅವಳು ತನ್ನನ್ನು ಪ್ರೀತಿಸಿದರೂ ಅನ್ಯರ ಪತ್ನಿಯೆಂಬ ಶಂಕೆ ಅವನಲ್ಲಿತ್ತೆಂಬುದನ್ನು ಅರಿತ ಶ್ಯಾಮುನು ಹತಾಶನಾದನು. ಆದರಿಂದ ಹಳೆಯ ದುರ್ಮಿತ್ರರೊಡನೆ ಸೇರಿ ಚಂಪಾ ಎಂಬ ಸೂಳೆಯ ಮನೆಯಲ್ಲಿ ನಿತ್ಯವೂ ಇಸ್ಪೀಟಾಡಿ ಹಣ ಕಳೆಯತೊಡಗಿದ.

ಮಾವ ಕರೆಯಲು ಬಂದಾಗ ಬೇಲಾ ಮನೆ ಬಿಟ್ಟು ಓಡಿ ಹೋದಳು. ಗೋವಿಂದ ಮಗಳನ್ನು ಹುಡುಕುತ್ತ ಭಿಕ್ಷಾಟನೆಗಾರಂಭಿಸಿದ. ಅವಳು ಶ್ಯಾಮುನನ್ನು ಪುನಃ ಸೇರಿ ಅವನೊಡನೆ ಇರಲಾರಂಭಿಸಿದಳು. ಗರ್ಭವತಿಯಾದರೂ ಇಸ್ಪೀಟು ಶ್ಯಾಮುನ ಕಡದಿದ್ದ ಮನವನ್ನು ಶಾಂತಿ ತುಂಬಿದರೂ ಅವನಿಗೆ ಬಿಡುವ ಪ್ರೇಮಶಿಕ್ಷೆ [illegible]ಲಿಲ್ಲ. ಆದರಿಂದ ಒಮ್ಮೆ [illegible] ಮನೆ [illegible] ಕೇಳಲು ಬಂದಾಗ ಅವನನ್ನು ನೋಡದು ಕೊಂದು ಶ್ಯಾಮು [illegible] ಹೋಗಬೇಕಾಯಿತು. [illegible] ಬೇಲಾ [illegible] ಕೆಲಸ ಮಾಡಿ ಹೊಟ್ಟೆ ಹೊರೆದುಕೊಳ್ಳುತ್ತ ಜೊತೆಯ ಕೆಲಸಗಾರ್ತಿ ಪಾರೋಳಿನ ಮನೆಯಲ್ಲಿ ಒಂದು ಗಂಡು ಮಗುವನ್ನು ಹಡೆದಳು. ಅನಂತರ ಗಿರಣಿಯ ಕೆಲಸಕ್ಕೆ ಅವಳು ಅನಾರ್ಹಳಾದಳು. ಶ್ಯಾಮುನು ಜೇಲು ಬಿಟ್ಟು ಬಂದನು. ಒಮ್ಮೆ ಸೂಳೆಯ ಮನೆಗೆ ನಡೆದ. ತಾನು ಇಸ್ಪೀಟಾಡುವುದಿಲ್ಲವೆಂದು ಸುಮ್ಮನೆ ಕುಳಿತ; ಆಗ ಅವನ ಆ ದುರ್ಮಿತ್ರರು ಅವನನ್ನು ಅಪಮಾನಿಸಿದರು. ಆದರಿಂದ ಕ್ಷುಬ್ಧನಾಗಿ ಮನೆಗೆ ಬಂದು ಬೇಲೆಯ ಹಣ ಕಳಲು ಯತ್ನಿಸಿ ಸಿಕ್ಕಿ ಬಿದ್ದ. ಅವಳು ಹಾಗೆ ಮಾಡುವುದು ಅನ್ಯಾಯವೆಂದು ಹೇಳಿದಾಗ ಸಿಟ್ಟಿನಿಂದ ಆ ಹಣವನ್ನು ಬಿಸುಟು ಬೇರೆ ಹಣ ದೊರಕಿಸಿಕೊಂಡು ಸೂಳೆಯ ಮನೆಗೆ ಹೋದ; ಇಸ್ಪೀಟಾಡಿದ, ಗೆದ್ದ; ತುಂಬ ಹಣ ದೊರಕಿತು, ಕಟ್ಟಿಕೊಳ್ಳಲು ವಸ್ತ್ರಬೇಕೆಂದು ಅತ್ತಿತ್ತ ನೋಡುವಾಗ ಸೆರಗಿನ ಹರಕು ಸಿಕ್ಕಿತು. ಅದರಲ್ಲೇ ಆ ಅಪಾರ ಹಣವನ್ನು ಕಟ್ಟಿಕೊಂಡು ಸೂಳೆಗೆ ಬೈದು ಅವಳಿಂದ ಮುಕ್ತನಾಗಿ [illegible]ಯನ್ನು ಧ್ಯಾನಿಸುತ್ತ [illegible] ತೊಡಗಿದನು. ಅದರವಳು ಶ್ಯಾಮು ಆಗ [illegible] ರಾತ್ರಿ ಹಾಗೆ [illegible]

ಮಗುವನ್ನು ದೇವಸ್ಥಾನವೊಂದರಲ್ಲಿ ಬಿಟ್ಟು ಪ್ರಾಣತ್ಯಾಗ ಮಾಡಲು ನದಿ ತೀರಕ್ಕೆ ಹೋದಳು. ಅಲ್ಲಿ ಒಕ್ಕಲುಗಿತ್ತಿಯರು ಸಿಕ್ಕಿ, ಅವಳನ್ನು ತಮ್ಮೊಡನೆ ಅವರು ಕೆಲಸ ಮಾಡಲು ಅವಳ ಮಾವನ ಹೊಲಕ್ಕೆ ಕರೆದೊಯ್ದರು. ಮಾವನ ಮನೆಯಲ್ಲೇ ಅವಳು ಕೂಲಿಯವಳೆನಿಸಿದಳು. [illegible] ಹೆಂಡತಿ ಸತ್ತವನಿದ್ದು, ಅವನಿಗೆ ಬೇಲೆಯನ್ನು ಮದುವೆ ಮಾಡಲು ಇವಳ ಗುರುತರಿಯದ ಅತ್ತೆ ಮಾವ ಕೇಳಿದಾಗ ನಿರ್ವಾಹವಿಲ್ಲದೆ ತಾನು ಮೊಲೆ ಕುಡಿಸುತ್ತಿದ್ದ ಅವರ ಸಾಕು ಮಗು ತನ್ನದೇ ಎಂದೂ ಶ್ಯಾಮುನಿಂದಲೇ ಹುಟ್ಟಿದ್ದೆಂದೂ ಹೇಳಿದಳು. ಅದು ವ್ಯಭಿಚಾರವೆಂದು ಅವಳನ್ನು ಮಾವ ಹೊರಗೆ ಹಾಕಿದ. ಆಗ ಶ್ಯಾಮುನ ಅಣ್ಣ ಚರಣ ಅವಳ ಮೇಲೆ ಕರುಣೆಯಿಟ್ಟು ಅವಳನ್ನು ಬೇರೆ ಇಟ್ಟು ಸಲಹಿದ ಮತ್ತು ಶ್ಯಾಮುನ ಪತ್ತೆ ಹಚ್ಚಿ ಅವನಿಗೆ ಕಾಗದ ಬರೆದ. ಶ್ಯಾಮು ಬಂದ; ಆದರೆ ಅಕಸ್ಮಾತ್ತಾಗಿ ಬೇಲೆಯೊಬ್ಬಳನ್ನೇ ಬೇರೆ ಮನೆಯಲ್ಲಿ ನೋಡಿ ಅವನು ಥಟ್ಟನೆ ಸಂಶಯಿತನಾಗಿ ಉದ್ವಿಗ್ನತೆಯಿಂದ ಮನೆ ಬಿಟ್ಟು ಹೊರಡುವಷ್ಟರಲ್ಲಿ ಚರಣ, ಪಾರೋ ಮುಂತಾದವರು ತಕ್ಕ ಸಾಕ್ಷಿ ಕೊಟ್ಟು ಸಂಶೈಸಿದ್ದಕ್ಕೆ ನಿಸ್ಸಿ [illegible] ಬೇಲೆಯನ್ನೂ ತನ್ನ ಮುದ್ದು ಮಗುವನ್ನೂ ಸ್ವೀಕರಿಸಿ ಮನೆಯಲ್ಲಿ ಆನಂದದಿಂದ ಇರತೊಡಗಿದ.

ಪ್ರಭಾತ ಕಂಪನಿಯ ಈ ಚಿತ್ರಪಟವು ಮಬ್ಬಳ್ಳಿಯ ಸುದರ್ಶನ ಟಾಕೀಜಿನಲ್ಲಿ ಪ್ರದರ್ಶಿಸಲ್ಪಡುತ್ತಿದೆ. ಕಮಲಾ ಕೋಟನೀಸ್, [illegible] ನೋಡಕ ಮುಂತಾದ [illegible] ನಟ ನಟಿಯರಿದ್ದಾರೆ. ಬಹಳ ಆಕಸ್ಮಿಕತೆ ಮತ್ತು ಅಲ್ಲಲ್ಲಿ ಅಸ್ವಾಭಾವಿಕತೆ ಕಥಾವಸ್ತು ನಿರೂಪಣೆಯಲ್ಲಿ ಕಂಡು ಬಂದರೂ ಒಟ್ಟಿನ ಮೇಲೆ ನೈತಿಕ ರಸಸ್ಪರ್ಶ ಪ್ರೇಕ್ಷಕರಿಗೆ ಸಾಕಷ್ಟಾಗುತ್ತದೆ. ಆದರಿಂದ ಈ ಪ್ರಥಮ ವಾರದಲ್ಲೇ ಮುಂದೆ ಅನೇಕ ವಾರಗಳ ವರೆಗೆ ಇದು ನಡೆಯಬಹುದೆನಿಸುತ್ತದೆ. ಹಳ್ಳಿಯ ಧೀರ ಮುಗ್ಧೆ ಬೇಲೆಯ ಪಾತ್ರ ಚೆನ್ನಾಗಿ ಪರಿಪುಷ್ಟವಾಗಿದೆ. ಕಾಲೇಜು ಹುಡುಗರು ಹುಡುಗಿಯರ ಬೆನ್ನು ಹತ್ತುವ ಇಲ್ಲಿಯ ಮೊದಲ ದೃಶ್ಯವು ಗಂಡಸರಿಗೊಂದು ಪಾಠ ಕಲಿಸುವಂಥದಿದೆ. ಇತ್ತ ಪ್ರೇಕ್ಷಕರು ಹೆಚ್ಚು ಲಕ್ಷಕೊಡಬೇಕು. ಹಿರಿಯರ (ಇಲ್ಲಿಯೆ) ಕುರುಡು ವಾತ್ಸಲ್ಯಕ್ಕೆ ಮರ್ಯಾದೆ ಕೊಟ್ಟು ಮಾಡುವ ವಿವಾಹಾದಿ ಕಾರ್ಯಗಳಿಂದ ಹೇಗೆ ಹುಡುಗ ಹುಡುಗಿಯರ ಜೀವನದಲ್ಲಿ ಅಸಾಧ್ಯ ತೊಂದರೆ, ಅತೃಪ್ತಿಗಳು ಉಂಟಾಗುತ್ತವೆ ಎಂಬುದು ಹಿರಿಯರಿಗೊಂದು ಪಾಠ. ಕೃತಕ ಭಾವನೆಗಳಿಲ್ಲದ ಕಥಾನಾಯಿಕೆ ಇಂದಿನ ಹುಡುಗಿಯರಿಗೊಂದು ಒಳ್ಳೆಯ ಮಾದರಿಯಾಗಿದ್ದಾಳೆ. ಅದೇ ಸೀಥಾ ರಾಸ್ತಾ". ಸಾಮಾಜಿಕ ಚಿತ್ರಗಳನ್ನು ನೋಡುವ ಪ್ರೇಕ್ಷಕರು ಕಣ್ಣು ತೆರೆದು ಕುಳಿತಾಗ ಮಾತ್ರ ತಂತಮ್ಮ ಲೋಪದೋಷಗಳನ್ನು ಕನ್ನಡಿಯಲ್ಲಿ ಕಾಣುವಂತೆ ಕಂಡು ಸುಧಾರಿಸಿಕೊಳ್ಳಬಲ್ಲರಲ್ಲದೆ ಬರಿದೆ ನಕ್ಕು, ಚಪ್ಪಾಳೆ ಹೊಡೆದು, ಸಿಳ್ಳುಹಾಕಿ, ಇಲ್ಲವೆ ಕುರುಡು ಜಂಭ ಪಟ್ಟುಕೊಂಡು ಬಂದರೆ ಏನೂ ಪ್ರಯೋಜನವಿಲ್ಲ; ನೈತಿಕ ದೃಷ್ಟಿಗೆ ತೃಪ್ತಿಯಾಗದ ರಸ ರಸವೇ ಅಲ್ಲ, ರಸಾಭಾಸ ಎಂಬುದನ್ನು ಮರೆಯತಕ್ಕದ್ದಲ್ಲ. ಬಲ್ಲವರು ಕಥಾಸಂವಿಧಾನದ ಅಚಾತುರ್ಯಗಳನ್ನು ಲೆಕ್ಕಿಸದೆ ಈ ಚಿತ್ರದಲ್ಲಿಯ ರಸಾಂಶವನ್ನು ಸವಿಯಬಲ್ಲರು. ಈ ದೃಷ್ಟಿಯಿಂದ ಈ ಚಿತ್ರ ಯೋಗ್ಯವಿದೆ ಎನ್ನಲು ಯಾವ ಅಡ್ಡಿಯೂ ಇಲ್ಲ.

(ಕರ್ಮವೀರದ ಪ್ರತಿನಿಧಿಯಿಂದ)

ಶಬ್ದಗಳಲ್ಲಿ ಚರಿತ್ರೆ

(ಲೇ— ಡಾ. ಉಡುಪಿ ವೆಂಕಟಕೃಷ್ಣ [illegible])


ಪ್ರತಿಯೊಂದು ಭಾಷೆಯ ಶಬ್ದಗಳಲ್ಲಿ ಗಮನಾರ್ಹವಾದ ಅನೇಕ ಅಂಶಗಳನ್ನು ಸರಿಯಾಗಿ ಪರಿಶೀಲಿಸಿದಲ್ಲಿ ಕಾಣಬಹುದು. ಅದರಿಂದ ಆ ಶಬ್ದಗಳು ಉಪಯೋಗಿಸಲ್ಪಡುತ್ತಿದ್ದ ಕಾಲದ ಸಾಮಾಜಿಕ ಮತ್ತು ಇನ್ನಿತರ ವಿಷಯಗಳನ್ನು ನಾವು ಕಂಡುಕೊಳ್ಳಬಹುದಾಗಿದೆ.

ಅಮರಕೋಶದಲ್ಲಿ ದೇವತೆಗಳ ಪರ್ಯಾಯ ಪದಗಳನ್ನು ಉಲ್ಲೇಖಿಸಿದ ನಂತರ ದೈತ್ಯರ ನಾಮಾವಳಿಗಳನ್ನು ನಿರ್ದೇಶಿಸುವರು. ಅದರಲ್ಲಿ ಅವರನ್ನು "ಪೂರ್ವದೇವ"ರೆಂದು ಕರೆದಿರುವರು. ಇದೇ ರೀತಿಯಲ್ಲಿ ರಾಕ್ಷಸರನ್ನು ನಿರ್ದೇಶಿಸುವಾಗ ಅವರನ್ನು "ಪುಣ್ಯಜನ"ರೆಂದು ಉಲ್ಲೇಖಿಸಿದೆ.

ನಮ್ಮ ಪುರಾಣಗಳನ್ನು ಪರಿಶೀಲನೆ ಮಾಡಿದರೆ ಪೂರ್ವದೇವ, ಪುಣ್ಯಜನವೆಂಬ ಹೆಸರುಗಳು ಸರ್ವಥಾ ದೈತ್ಯ ಅಥವಾ ರಾಕ್ಷಸರನ್ನು ನಿರ್ದೇಶಿಸಲಾರವು. ಇವು ಅಪಾರ್ಥಗಳೋ ಎಂಬ ಸಂಶಯಕ್ಕೂ ಕೂಡ ಆಸ್ಪದ ಬರಬಹುದು. 'ಎವೆಸ್ತಾ ಎಂದು ಪ್ರಸಿದ್ಧವಾದ ಪರ್ಶಿಯ ದೇಶದವರ ವೇದದಲ್ಲಿ ದೇವರನ್ನು 'ಅಹುರೋಮರ್ಝದ್' ಎಂದು ಕರೆದಿರುವರು. ಇದರ ಸಂಸ್ಕೃತ ಅರ್ಥವು 'ಅಸುರೋಮಹಾನ್' ಎಂದಾಗುವದು. ಅರ್ಥಾತ್ ಅಸುರ ಶಬ್ದಕ್ಕೆ ದೇವರೆಂದರ್ಥವಾಯಿತು. ಹೀಗೆಯೇ ಋಗ್ವೇದದಲ್ಲಿ ಕೂಡ ಅನೇಕ ಸೂಕ್ತಗಳಲ್ಲಿ 'ಅಸುರ' ಶಬ್ದವನ್ನು ದೇವತೆಗಳಲ್ಲಿ ಉತ್ತಮರಾದ ಇಂದ್ರವರುಣ ಇತ್ಯಾದಿಗಳಿಗೆ ವಿಶೇಷಣವಾಗಿ ಉಪಯೋಗಿಸಿರುವರು. ಅಸುರ ಶಬ್ದಕ್ಕೆ ರಾಕ್ಷಸ ಅಥವಾ ದೈತ್ಯ ಎಂದು ಅರ್ಥ ಮಾಡಲು ಸಾಧ್ಯವೇ ಇಲ್ಲವೆಂತ ಪ್ರತ್ಯೇಕ ಹೇಳುವದೇ ಬೇಡ. ರಾಕ್ಷಸರಾದ ಯಾತು ಧಾನರನ್ನು (ಕತ್ತಲೆಯನ್ನೋ ?) ನಾಶ ಮಾಡುತ್ತ, ಸೂರ್ಯನು ಬಂಗಾರದ ಕಿರಣಗಳಿಂದ ಯುಕ್ತನಾಗಿರುವನೆಂದು ಸ್ಪಷ್ಟವಾದ ಉಲ್ಲೇಖವಿದೆ. ಅಸುರ ಶಬ್ದಕ್ಕೆ ಸಾಂಪ್ರದಾಯಿಕವಾಗಿ ದೈತ್ಯ ಎಂದು ಅರ್ಥ ಮಾಡಲು ಸಾಧ್ಯವಿಲ್ಲದೆ ಟೀಕಾಕಾರನು ಅಸೂನ್ ರಾತೀತ್ಯಸುರಃ—ಅಂದರೆ ಪ್ರಾಣವನ್ನು ಅಥವಾ ಬಲವನ್ನು ಕೊಡುವವನೆಂದು ಹೊಸ ಅರ್ಥವನ್ನು ಕಲ್ಪಿಸಲೇ ಬೇಕಾಯಿತು ಅರ್ಥಾತ್ ಅವನ ದೃಷ್ಟಿಯಿಂದ 'ಅಸು' ಮತ್ತು 'ರ' ಎಂಬ ಎರಡು ಶಬ್ದಗಳ ಜೋಡಣೆಯಿಂದ 'ಅಸುರ' ಎಂಬ ಶಬ್ದವು ಉಂಟಾಯಿತು. ಆದರೆ ಅರ್ವಾಚೀನಗಳಾದ ಅಥರ್ವವೇದ ಉಪನಿಷತ್ತುಗಳ ಕಾಲದಲ್ಲಿ ಅ ಮತ್ತು ಸುರ ಎಂಬ ಶಬ್ದಗಳ ಮೇಲನದಿಂದ ಈ ಶಬ್ದವು ಉತ್ಪನ್ನವಾಯಿತೆಂದು ಭ್ರಾಂತಿಯ ಮೂಲಕ ಕಲ್ಪಿಸಿಕೊಂಡು 'ಸುರ'ರೆಂದರೆ ದೇವರೆಂದು ಹೊಸ ಅರ್ಥವನ್ನೂ ಹೊಸ ಶಬ್ದವನ್ನೂ ಕಲ್ಪಿಸಿಕೊಂಡರು. ಆದರೆ ವಸ್ತುಸ್ಥಿತ್ಯಾ ಪರಿಶೀಲಿಸಿದರೆ ಋಗ್ವೇದ ಕಾಲದಲ್ಲಿಯೂ ತತ್ಪೂರ್ವದಲ್ಲಿಯೂ ಅಂದರೆ, ಹಿಂದುಗಳೂ ಪರ್ಶಿಯಾ ದೇಶದವರೂ ಕಲೆತು ಒಂದಾಗಿದ್ದ ಅತಿ ಪ್ರಾಚೀನ ಕಾಲದಲ್ಲಿ (ಇಂಡೋ ಇರಾನಿಯನ್ ಎಂದು ಪಾಶ್ಚಾತ್ಯ ವಿದ್ವಾಂಸರಿಂದ ನಿರ್ದೇಶಿಸಲ್ಪಟ್ಟ ಕಾಲದಲ್ಲಿ) ಅಸುರರೇ ದೇವರಾಗಿದ್ದರೆಂದು ಊಹಿಸುವದಕ್ಕೆ ಕಾರಣವಾಗುತ್ತದೆ. ಇದಕ್ಕೆ ಆಧಾರವಾಗಿ ಪೂರ್ವದೇವಾಃ ಪುಣ್ಯಜನಾಃ ಎಂಬ ಶಬ್ದಗಳೂ ಆ ಕಾಲದ ಹೆಗ್ಗುರುತುಗಳೋ ಎಂಬಂತೆ ಸಾಕ್ಷಿಗಳಾಗಿ ಈಗಲೂ ನಿಂತಿವೆ.

ಋಕ್ಷ ಶಬ್ದಕ್ಕೆ ನಕ್ಷತ್ರವೆಂದೂ ಕರಡಿಯೆಂದೂ ಎರಡು ಅರ್ಥಗಳುಂಟು. ಇದೇ ನ್ಯಾಯವನ್ನು ಅನುಸರಿಸಿಯೋ ಏನೋ ಎಂಬಂತೆ ಇಂಗ್ಲೀಷಿನಲ್ಲಿ ಸಪ್ತರ್ಷಿ ಮಂಡಲವೆಂಬ ನಕ್ಷತ್ರಗಳ ಗುಂಪಿಗೆ 'Great Bear' ಅಂದರೆ ದೊಡ್ಡ ಕರಡಿ ಎಂದು ವ್ಯವಹರಿಸುತ್ತಾರೆ. ಪ್ರಾಯಶಃ ಇದಕ್ಕೆ ಕಾರಣವೇನಾಗಿರಬಹುದೆಂದರೆ, ನಮ್ಮವರು ಸಂಪೂರ್ಣವಾಗಿ ಜ್ಯೋತಿಃಶಾಸ್ತ್ರವನ್ನು ಅನ್ಯದೇಶೀಯರಿಂದ ಪರಿಗ್ರಹಿಸಿದ್ದೇ ಆಗಿರಬೇಕು. ರೋಮಕ ಸಿದ್ಧಾಂತವೆಂಬ ಹೆಸರೇ ಇದಕ್ಕೆ ಸಾಕ್ಷಿಯಾಗಿದೆ. ಹೀಗಾಗಿ ಈ ಹೆಸರನ್ನು ಕೂಡ ಅವರಿಂದಲೇ ಸ್ವೀಕರಿಸಿರಬೇಕು. ಹೀಗೆ ಒಂದು ಭಾಷೆಯಿಂದ ಇನ್ನೊಂದಕ್ಕೆ ಶಬ್ದಗಳನ್ನು ಎರವು ತೆಗೆದುಕೊಳ್ಳುವದು ಅತಿ ಸಹಜವಾಗಿದೆ. ಹೀಗಾಗಲು ಮಾತೃಭಾಷೆಗಳಲ್ಲಿ [illegible] ರೀತಿಯಿಂದ ನಿಕಟ ಸಂಬಂಧ ಇರಬೇಕು. ಉದಾಹರಣಾರ್ಥವಾಗಿ ಒಂದು ದೇಶದವರು [illegible] ಅಕ್ರಮಿಸಿ ತಮ್ಮ [illegible] [illegible] ತೀಯ ಭಾಷೆಯ [illegible] ಶಬ್ದಗಳು ತಮ್ಮ ಭಾಷೆಗೆ [illegible] [illegible] ಮುಂಚೆ [illegible] ಪ್ರಚಲಿತವಾ[illegible] [illegible] ಪದಗಳು ಕನ್ನಡ [illegible] ಸೇರಿಕೊಂಡವು. ಹೀಗೆ ಪರಸ್ಪರ [illegible]ದಿಂದ ವಿಶೇಷ ಸಂಬಂಧವು ಏರ್ಪಟ್ಟ[illegible]ಗಳ ವಿನಿಮಯವಾಗಬಹುದು. [illegible] ರೋಮನ್ ದೇಶದ ಚಿನ್ನದ ನಾಣ್ಯದ [illegible] [illegible] ಗಳನ್ನು ಟಂಕಸಾಲೆಯಲ್ಲಿ ಮಾಡಿಸುವ [illegible]ವನ್ನು ಕಲಿಯುವ ಮುಂಚೆ [illegible] ದನಗಳನ್ನು ಬದಲಿಗಾಗಿ [illegible] ಬೇರೆ ಸಾಮಾನುಗಳನ್ನು ಕ್ರಯಕ್ಕೆ [illegible] ಕೊಳ್ಳುತ್ತಿದ್ದರು. ಇದನ್ನೇ [illegible] ವರೂ ಅನುಸರಿಸುತ್ತಿದ್ದರೆಂಬುದಕ್ಕೆ [illegible] ಇಂಗ್ಲೀಷಿನವರು ತೆಗೆದುಕೊಂಡ [illegible] ಎಂಬ ಶಬ್ದದ "Pecu" (ಸಂಸ್ಕೃತ [illegible]) ಎಂಬ ಭಾಗವೇ ಸಾಕ್ಷಿಯಾಗಿದೆ. ಕೆಲವ[illegible] ಸಂಪತ್ತಿನಲ್ಲಿಯೂ ಸೈನ್ಯಗಳಲ್ಲಿಯೂ [illegible]ರಾಗಿ ಇನ್ನೊಂದು ದೇಶವನ್ನು ಸೋಲಿಸಿ[illegible] ಆ ದೇಶದ ಕಲಾಸೈಪುಣ್ಯವು ಗೆದ್ದವರನ್ನು ಸೋಲಿಸಿ ತನ್ನಿಲ್ಲದೆ ಅವರ ದೇಶವನ್ನು ವ್ಯಾಪಿಸಿಬಿಡುತ್ತದೆ. ದೃಷ್ಟಾಂತವಾಗಿ ರೋಮನ್ ದೇಶದವರು ಗ್ರೀಸ್ ದೇಶದವರನ್ನು ಯುದ್ಧರಂಗದಲ್ಲಿ ಸೋಲಿಸಿದರೂ [illegible] ಗ್ರೀಸ್ ದೇಶದ ಕಲೆಯೇ ಪ್ರಬಲವಾಗಿ [illegible]ಯಲ್ಲಿ ಬಂದು ರೋಮನರ ಕಲೆಗಳ[illegible] ಮೂಲೆಗೆ ತಳ್ಳಿ ಬಿಟ್ಟಿತು. ನಮ್ಮ ಭಾರತದಲ್ಲಿಯೂ ಕೂಡ ಸಂಸ್ಕೃತವೇ [illegible]ಯಾಗಿ ಬೆಳಗದಿದ್ದರೂ ಸಾಹಿತ್ಯದೃಷ್ಟಿ[illegible] ಅದು ಹೊಂದಿದ ಉನ್ನತಿಯನ್ನು [illegible] ಎಲ್ಲಾ ಭಾಷೆಗಳು (ಆದರಿಂದ [illegible] ಹುಟ್ಟಿದ ಉತ್ತರ ಹಿಂದುಸ್ತಾನದವೂ ಅದ[illegible] ವಿಶೇಷವಾಗಿ ಉಪಸಕ್ತಗಳಾದ ದಕ್ಷಿಣದ ದ್ರಾವಿಡ ಭಾಷೆಗಳೂ) ಪ್ರಯುಕ್ತಿಸಿದವು. [illegible] ರಾಮಚರಿತ ಮಾನಸಕ್ಕೆ ಇದೆ. ಇದೇ [illegible]ಯಲ್ಲಿ ತಮಿಳು, ತೆಲುಗು, ಮಲೆಯಾಳ, ಕನ್ನಡಗಳಲ್ಲಿ ರಾಮಾಯಣ ಅಥವಾ ಮಹಾಭಾರತಗಳನ್ನು ಆಧಾರವಾಗಿಟ್ಟುಕೊಂಡು [illegible] ಕಾವ್ಯಗಳಿಗೆ ಉತ್ತಮ ಸ್ಥಾನವು ದೊರೆತಿದೆ.

ಪಾಕಿಸ್ತಾನದ ನಿರಾಶ್ರಿತ ಮಂತ್ರಿಯಾದ ರಾಜಾ ಗಝನಫರ ಅಲಿಖಾನರಿಗೆ [illegible] ನಿರಾಶ್ರಿತನೊಬ್ಬನು ಬರೆದ [illegible] "ಪಿಲಾನದಾರ [illegible]" ಎಂದು ಪಾಕಿಸ್ತಾನ ಟಪಾಲಖಾತೆಯು [illegible] ಲಿಪಿಯೊಂದಿಗೆ ತಿರುಗಿ ಬಂದಿದೆ!



ರಾಜರ ಕಾಲ

ಮಗು,

[illegible] ಶತಮಾನದಲ್ಲಿ [illegible] ಹಿಂದುಸ್ತಾನದಲ್ಲಿ ಅನಾದಿ [illegible] ಶಿವಾಜಿಗಿದ್ದಂತೆ [illegible] ಜನ, ಮಂತ್ರಿಗಳು, ಆ ಮಂತ್ರಿಗಳೆಲ್ಲ [illegible] ಶಾಸ್ತ್ರಜ್ಞರೂ ಆಗಿರುತ್ತಿದ್ದರು. [illegible] ರಾಜ [illegible] ಸರ್ವಜ್ಞ, ಮಂತ್ರಿಗಳು ಕೆಳಗೆ ಸೇನಾಪತಿ ಅವನ ಕೈ ಕೆಳಗೆ ಸರದಾರರು, ನಾಯಕರು, ಶಿಪಾಯಿಗಳು.

ಕಾಲ ಹೋದ ಹಾಗೆ ರಾಜಾಧಿರಾಜರಿಗೆ ಪ್ರಜೆಗಳ ನೆನಪೇ ಹೊರಟು ಹೋಯಿತು. ಅವರಿಂದ ಬಂದ ಜನಸೇವೆ ಧನಸೇವೆಗಳಿಂದಲೇ ತಮ್ಮ ಸೇನಾಬಲ ಮತ್ತು ಧನಬಲ ತುಂಬಿವೆಯೆಂಬುದನ್ನು ಎಣಿಸದೆ ಅವರನ್ನು ಕಡೆಗಣಿಸಿ ತಾವೇ ಭೋಗೇಂದ್ರರೆಂದು ಕೊಂಡು ಮದ್ಯ ಕುಡಿವ ಮತ್ತು ಇತರ ದುರಭ್ಯಾಸಗಳಿಗೆ ಆಳಾಗಿ ಮನಬಂದಂತೆ ಇರತೊಡಗಿದರು. ಇದರಿಂದ ಅವರು ದುರ್ಬಲರೂ ಅಪ್ರಿಯರೂ ಆಗಿ ಶತ್ರುಗಳಿಗೆ ಸೋತು ಕೆಲವರು ಆಳಾದ ಅರಸರೆನಿಸಿಕೊಂಡರು, ಕೆಲವರು ಪ್ರಜೆಗಳನ್ನೂ ಮೇಲಿನ ರಾಜನನ್ನೂ ವಂಚಿಸುತ್ತ ದಡ್ಡತನದಿಂದ ದುಷ್ಟ ಸ್ತ್ರೀ ಪುರುಷರೊಡನೆ ಸೇರಿ ಸಂಪತ್ತನ್ನು ಕಳೆದುಕೊಂಡು ಹೇಳಹೆಸರಿಲ್ಲದಾದರು.

ರಾಜರಲ್ಲಿ ಇಂಥ ಮತ್ಸರ, ಕುರುಡು ನಂಬುಗೆ, ದಡ್ಡತನದ ಧರ್ಮಾಚರಣೆ, ಹೀನಾಚಾರ, ಹೇಡಿತನಗಳು ಹೆಚ್ಚಿದುದರಿಂದ ಗ್ರೀಕರು, ಪಾರಸಿಕರು, ಶಕರು, ಹೂಣರು, ಸಿಥಿಯನ್ನರು, ಪಠಾಣರು, ಮಂಗೋಲರು, ಮೊಗಲರು, ಪಾಶ್ಚಾತ್ಯರು ಮುಂತಾಗಿ ಹಲವಾರು ಪರದೇಶೀಯರು ಹಿಂದುಸ್ತಾನವನ್ನು ಹೊಕ್ಕು ಇಲ್ಲಿಯ ಸಂಪತ್ತನ್ನು ಸೂರೆ ಮಾಡಿಕೊಂಡು ಹೋದ ವಿಷಾದಕರ ಸಂಗತಿಗಳು ನಡೆದು ಹೋದವು.

ಮೇಲಿನ ಕಾರಣದಿಂದ ರಾಜರ ಆಡಳಿತವನ್ನೇ ಕಿತ್ತು ಹಾಕಿ ಜನರು ಆರಿಸಿ ಕಳುಹಿದ ಅಧ್ಯಕ್ಷ ಮತ್ತು ಶಾಸನ ಮಂಡಲದವರ ಆಡಳಿತವನ್ನು ಇಂದು ಹಿಂದುಸ್ತಾನದಲ್ಲಿ ಸ್ಥಾಪಿಸಲಾಗಿದೆ.

ಕಷ್ಟಪಡದೆ ಸುಖಪಡಬೇಕೆಂದು ಎಲ್ಲ ಹುಡುಗರಿಗೂ ಆಸೆ. ಹಿರಿಯರಿಂದ ಕಿತ್ತುಕೊಂಡು ಖರ್ಚು ಮಾಡುವ, ತಿನ್ನುವ ಉಣ್ಣುವ, ಉಡುವ, ತೊಡುವ ಪ್ರವೃತ್ತಿ ನಿಮಗೆಲ್ಲ ಸ್ವಾಭಾವಿಕ. ದೊಡ್ಡವರಾದ ಮೇಲೆ ನೀವು ಹಾಗೆ ಮಾಡುವುದಿಲ್ಲ. ಹುಡುಗರು ಮಾತ್ರ ತಾವು ಮಾಡುವ ಮನೆ ಕೆಲಸವನ್ನು ಸರಿಯಾಗಿ ಮಾಡದೆ, ಮಾಡಿದರೂ ಅದರ ಮೂಲಕ ತಮ್ಮ [illegible] ತಮಗೆ ಪಾಲಿದೆಯೆಂಬುದನ್ನರಿಯದೆ ಕೆಲ ದುಂದುಗಾರ ಹುಡುಗರಂತೆ ಗಂಡನನ್ನು ಪೀಡಿಸಿ ಮನೆಗೆ ಅವಶ್ಯವೆನಿಸುವ ವಸ್ತುಗಳನ್ನು ಮೊದಲು ಕೊಳ್ಳ [illegible] [illegible] [illegible] ಕಷ್ಟಪಟ್ಟು [illegible] ಮುಂತಾದವನ್ನು ತಮ್ಮ ಊಟ, ಉಡುಗೆ, ಆನಂದ, ಆಟ, ಆರಾಮಗಳಿಗಾಗಿ ಯದ್ವಾತದ್ವಾ ಖರ್ಚು ಮಾಡುತ್ತ ಬಂದು, ಜನರಿಗೆ ಬೇಡದವರಾದರು. ಅತಿ ಚಿಕ್ಕ ಮಕ್ಕಳಿಗೆ ಹಿಂದು ಮುಂದಿನ ಆಲೋಚನೆಯಿರುವುದಿಲ್ಲ; ಇಂಥ ಹೊಣೆಯಿಲ್ಲದ ರಾಜರಾಣಿಯರಿಗೆ ಮಾಡಬೇಕಾದುದೇನು, ಮಾಡಬಾರದುದೇನು? ಎಂಬುದು ತಿಳಿಯದು; ಹುಚ್ಚರು ಮತ್ತು ಅವರಂತೆಯೇ ವಿದ್ಯಾವಿಹೀನರೆನಿಸುವ ಹುಡುಗ ಹುಡುಗಿಯರು ತಮಗೆ ಮುಂದೆ ಯಾವುದರಿಂದ ಒಳ್ಳೆಯದಾಗುತ್ತದೆ, ಯಾವುದರಿಂದ ಹಾನಿ? ಎಂಬುದನ್ನು ಅರಿಯರು. ಇಂಥವರನ್ನು ಮೂಢರೆಂದೂ ಮೂರ್ಖರೆಂದೂ ಕತ್ತೆಗಳೆಂದೂ ಪಿಶಾಚಗಳೆಂದೂ ಬುದ್ಧಿವಂತರು ಕರೆಯುತ್ತಾರೆ. ಹೌದೋ ಸುಳ್ಳೋ ವಿಚಾರ ಮಾಡಿ ನೋಡು— ವಿಚಾರವಿಲ್ಲದವರಿಗೆ ಇನ್ನಾವ ಹೆಸರಿಡಬೇಕು?

ಸಂಪತ್ತನ್ನು ದುಡಿಯದೆ ಪಡೆದ ರಾಣಿಯರ ಸಿಂಗಾರವನ್ನಿಷ್ಟು ಕೇಳು; ಗ್ರೀಸ್ ದೇಶದ ರಾಣಿಯರು ತಮ್ಮ ರೂಪವನ್ನು ಹೊಗಳಾಡಿಸಿಕೊಳ್ಳಲು ಗುಲಾಬಿಯ ಹಾರ ಮತ್ತು ಮಿಂಟೆಂಬ ಮೂಲಿಕೆಯ ಎಣ್ಣೆಗಳನ್ನು ಹಾಕಿಕೊಳ್ಳುತ್ತಿದ್ದರಂತೆ. ಅವರು ಸ್ನಾನಕ್ಕೆ ಮುಂಚೆ ಮಲ್ಲಿಗೆ ಮತ್ತು ಲವೆಂಡರುಗಳಿಂದ ಮೈಯ್ಯುಜ್ಜಿಕೊಳ್ಳುತ್ತಿದ್ದರು. ನೀರೋ ದೊರೆಯ ಹೆಂಡತಿ ಪೊಪ್ಪಿಯಾ ಎಂಬಾಕೆ— ಚಿಕ್ಕ ಮಗುವಲ್ಲ, ದೊಡ್ಡ ರಾಣಿ— ೮೦೦ ಕತ್ತೆಗಳ ಹಾಲಿನಿಂದ ನಿತ್ಯ ಅಭಿಷೇಕ ಮಾಡಿಸಿಕೊಳ್ಳುತ್ತಿದ್ದಳಂತೆ ತನ್ನ ಮೈ ಸುಣ್ಣ ಬಳಿದಂತೆ ಬೆಳ್ಳಗಾಗಬೇಕೆಂದು! ಈಗಿನ ಕಾಲದಲ್ಲಿ ದುಡಿಯಲೂ ಬಾರದ, ಪಡೆದೂ ಇಲ್ಲದ ಕೆಲ ಹುಡುಗ ಹುಡುಗಿಯರು ಪಟ್ಟಣ ವಾಸದ ದುರಭ್ಯಾಸಕ್ಕನುಗುಣವಾಗಿ "ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂ ಮುಡಿದುಕೊಂಡು" ಕೋಳಿ ಜಂಭ ತೋರಿಸಬೇಕೆಂಬ ಹುಚ್ಚು ಹಂಬಲವನ್ನು ಹಿಡಿದಿರುವುದಿಲ್ಲವೆ? ಇದೇ ನೋಡು ಮೂರ್ಖತನವೆಂದರೆ! ಇಂಥ ಮೂರ್ಖತನದಿಂದಲೇ ಹಿಂದುಸ್ತಾನದಲ್ಲಿ ೬೦೦ ಕ್ಕಿಂತ ಹೆಚ್ಚಿದ್ದ ಪಾಳೆಯಗಾರ ಮಹಾರಾಜರಿಂದು ವಲ್ಲಭಭಾಯಿ ಪಟೇಲರಿಗೆ ಶರಣು ಬರುವ ಹೊತ್ತು ಬಂತು. ನೀನು ಹಾಗೆಲ್ಲ ಅವಿವೇಕಿಯಲ್ಲವೆಂದು ಗೊತ್ತು ನನಗೆ. ನಿನಗೆ ದೇವರಂಥ ಬುದ್ಧಿಯಿದೆ, ಅದೇ ನಿನ್ನ ಸೌಂದರ್ಯ, ಅದೇ ನಿನ್ನ ಸಂಪತ್ತು, ಅದಿದ್ದವನು ಎಲ್ಲಿದ್ದರೂ ಅರಸು, ಅದಿಲ್ಲದವನು ಎಲ್ಲಿದ್ದರೂ ಆಳೇ!

–ಮಾಮಾ

ತಮಾಷೆ

೧. ನಿನ್ನ ಮನೆ ನಂಬರನ್ನು ಬರೆ.
೨. ಅದನ್ನು ಇಮ್ಮಡಿ ಮಾಡು.
೩. ಅದಕ್ಕೆ ೫ ಕೂಡಿಸು.
೪. ಅದನ್ನು ೫೦ ರಿಂದ ಗುಣಿಸು.
೫. ನಿನ್ನ ವಯಸ್ಸನ್ನು ಕೂಡಿಸು
೬. ೩೬೫ ನ್ನು ಕೂಡಿಸು
೭. ೬೧೫ ನ್ನು ಕಳೆ.

ಉತ್ತರದಲ್ಲಿ ನಿನ್ನ ವಯಸ್ಸಿನ ಎಡಕ್ಕೆ ನಿನ್ನ ಮನೆ ನಂಬರನ್ನು ಕಾಣುವೆ.

● ಅಮೇರಿಕೆಯ ಮೊಯಿನ್ಸ ಎಂಬಲ್ಲಿ ೧೫೬೦ ಅಡಿ ಎತ್ತರದ ಆಕಾಶವಾಣಿ ಗೃಹವನ್ನು ಕಟ್ಟಲಾರಂಭಿಸಿದ್ದಾರೆ. ಜಗತ್ತಿನಲ್ಲಿ ಅಷ್ಟೆತ್ತರದ ಕಟ್ಟಡ ಬೇರೊಂದಿಲ್ಲ.

ಹಿಂದುಸ್ತಾನ ಆಕ್ರಮಣಶೀಲ ರಾಷ್ಟ್ರವಲ್ಲ

(೫ ನೇ ಪುಟದಿಂದ)

ಸಶಸ್ತ್ರ ಸೈನ್ಯದ ಕಾರ್ಯವನ್ನು ಅವರು ಪ್ರಶಂಸಿಸುತ್ತಿದ್ದರು. ಆದರೆ ಜಗತ್ತಿನಲ್ಲಿ ಸಶಸ್ತ್ರ ಸೈನ್ಯವೇ ಇರಬಾರದು ಎಲ್ಲ ರಾಷ್ಟ್ರಗಳು ತಾವಾಗಿಯೇ ನಿಃಶಸ್ತ್ರೀಕರಣವನ್ನು ಸಾಧಿಸಬೇಕು ಎಂಬುದು ಅವರ ಅಪೇಕ್ಷೆಯಾಗಿತ್ತು. ಯುಕ್ತರಾಷ್ಟ್ರ ಸಂಘದ ಅಪೇಕ್ಷೆಯಾದರೂ ಇದೇ ಇರುವದು. ಅಣುಬಾಂಬಿನ ಗುತ್ತಿಗೆ ತನ್ನದೆಂದು ಒಂದು ರಾಷ್ಟ್ರವು ಹೇಳುತ್ತಿದ್ದರೆ ತನಗೂ ಆ ಗುಟ್ಟು ತಿಳಿಯಬೇಕೆಂದು ಇನ್ನೊಂದು ರಾಷ್ಟ್ರದ ಹಟ! ಇದರಿಂದ ಜಗತ್ತಿಗೆ ತಾರಕ ಮಾರ್ಗವೆಲ್ಲಿದೆ?

ಸ್ವಾತಂತ್ರ್ಯ ರಕ್ಷಣೆಗೆ ಸೈನ್ಯ ಬೇಕು

ಸರದಾರರು ಈ ವಿಷಯವನ್ನು ಪ್ರತಿಪಾದಿಸುತ್ತ ಹೀಗೆ ಹೇಳಿದರು:—

ನಿಃಶಸ್ತ್ರೀಕರಣಕ್ಕೆ ಜಗತ್ತು ಒಪ್ಪದು. ಅಂತೆಯೇ ಹಿಂದುಸ್ತಾನವೂ ಸಮ್ಮತಿಸಲಾರದು. ನಮ್ಮ ದೇಶದ ಸ್ವಾತಂತ್ರ್ಯದ ರಕ್ಷಣೆಗಾಗಿ ನಾವು ಸಾಕಷ್ಟು ಸೈನ್ಯವನ್ನು ಕಟ್ಟಿಕೊಳ್ಳುವೆವು. ಮಹಾತ್ಮರು ಸಂಪಾದಿಸಿ ಕೊಟ್ಟ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳುವದಾಗಿ ನಾವು ಸಾಕಷ್ಟು ಸೈನ್ಯವನ್ನು ಇಟ್ಟುಕೊಳ್ಳದಿದ್ದರೆ ಮಹಾತ್ಮರ ಅನುಯಾಯಿಗಳಾಗುವದಕ್ಕೆ ನಾವು ಅಪಾತ್ರರಾದೇವು. ಆದರೆ ಆಕ್ರಾಮಕ ವೃತ್ತಿ ನಮ್ಮದಿಲ್ಲ. ಪರಕೀಯರ ಆಕ್ರಮಣಕ್ಕಾಗಿ ನಮಗೆ ಸುಸಜ್ಜಿತವಾದ ಸೈನ್ಯ ಬೇಕಿಲ್ಲ. ಆಕ್ರಮಣಶೀಲ ವೃತ್ತಿಯೂ ಹಿಂದುಸ್ತಾನದ್ದಲ್ಲ. ಇತಿಹಾಸದಲ್ಲಿ ಇಂಥ ಒಂದು ಉದಾಹರಣೆಯೂ ದೊರೆಯುವದಿಲ್ಲ. ನಮ್ಮ ಸಂಸ್ಕೃತಿ ನಾಗರಿಕತೆಗಳ ಬಲದಿಂದಲೆ ನಾವು ಪ್ರಾಚೀನ ಕಾಲದಲ್ಲಿ ನಮ್ಮ ಸಂದೇಶ ಬೀರಿದೆವು. ಆಗ ನಮಗೆ ವೈಮಾನಿಕ ದಲವಾಗಲಿ ಭೂಸೈನ್ಯವಾಗಲಿ ಇರಲಿಲ್ಲ. ನಮ್ಮದು ಶಾಂತಿ ಪ್ರೀತಿಗಳ ಸಂದೇಶ, ಗಾಂಧೀಜಿಯವರು ನಮಗೆ ಕಲಿಸಿದ್ದು ಇದೇ ಪಾಠ. ದೊಡ್ಡ ಸೈನ್ಯದ ಭಾರಕವು ಹಿಂದುಸ್ತಾನಕ್ಕೆ ಬೇಡವೆಂದು ಸೈನ್ಯವನ್ನು ಕಡಮೆಮಾಡಬೇಕೆಂದು ವಿಭಜನೆಯ ಪೂರ್ವದಲ್ಲಿ ನಿರ್ಧರಿಸಲಾಗಿತ್ತು ಆದರೆ ಈಗ ಬದಲಾದ ಪರಿಸ್ಥಿತಿಯಲ್ಲಿ ಆ ನಿರ್ಧಾರವನ್ನು ಬದಲಿಸಬೇಕಾಗಿದೆ. ದೊಡ್ಡ ಸೈನ್ಯವನ್ನಿಡಲು ಹೆಚ್ಚು ಹಣಬೇಕು ಅದಕ್ಕಾಗಿ ಹಿಂದುಸ್ತಾನ ಆರ್ಥಿಕ ಪರಿಸ್ಥಿತಿಯ ಪುನರ್ವಿಮರ್ಶೆ ಮಾಡಿ ಅದನ್ನು ಸುಧಾರಿಸಬೇಕಾಗಿದೆ ಎಂದು ಖಂಡಿತವಾಗಿ ಹೇಳಿದರು.

ಬಲಪ್ರಯೋಗ

ತನ್ನ ಧೋರಣವನ್ನು ಕಾರ್ಯರೂಪಕ್ಕಿಳಿಸಲು ಬಲಪ್ರಯೋಗ ಮಾಡುವದು ಸರಕಾರಕ್ಕೆ ಸರಿಯೆನಿಸುವದಿಲ್ಲ. ಆರ್.ಎಸ್.ಎಸ್‌ದ ವಿರುದ್ಧ ಮತ್ತು ವಿದೇಶಿ ಪದ್ಧತಿಯ ಸರಕಾರವನ್ನು ಇಲ್ಲಿ ಸ್ಥಾಪಿಸಲೆತ್ನಿಸಿದವರ ವಿರುದ್ಧ ಬಲಪ್ರಯೋಗ ಮಾಡಬೇಕಾಯಿತು. ಆರ್ಥಿಕ ಸಮಸ್ಯೆಯನ್ನು ಬಗೆಹರಿಸಲು ಬಲಪ್ರಯೋಗ ಮಾಡುವದಾದರೆ ಬಾಲ್ಯಾವಸ್ಥೆಯಲ್ಲಿದ್ದ ರಾಷ್ಟ್ರದ ಶಕ್ತಿ ಕಡಮೆಯಾದೀತು. ನೆರೆಹೊರೆಯ ಬ್ರಹ್ಮದೇಶ ಮೊದಲಾದ ದೇಶಗಳಲ್ಲಿ ತಲೆಯೆತ್ತಿದ ಅಶಾಂತತೆಯ ಬಗ್ಗೆ ಹಿಂದುಸ್ತಾನವು ಮುಂಜಾಗ್ರತೆ ವಹಿಸಬೇಕಾಗಿದೆ. ಕಲಕತ್ತೆ ಮತ್ತು ಅಸಾಮು ಭಾಗಗಳಲ್ಲಿ ಕಮ್ಯುನಿಸ್ಟರ ಚಟುವಟಿಕೆ ನಡೆದ ಸುದ್ದಿ ಬಂದಿದೆ. ಹೈದ್ರಾಬಾದದಲ್ಲಿ ಕಮ್ಯುನಿಸ್ಟರು ಎರಡು ಜಿಲ್ಹೆಗಳನ್ನು ವಶಪಡಿಸಿಕೊಂಡಿದ್ದರು. ಹಿಂದೀ ಸೈನ್ಯ ಸಕಾಲಕ್ಕೆ ಅಲ್ಲಿಗೆ ಹೋಗಿರದಿದ್ದರೆ ಇನ್ನೂ ಕೆಲವು ಜಿಲ್ಹೆಗಳನ್ನು ಅವರು ತೆಗೆದುಕೊಳ್ಳುತ್ತಿದ್ದರು. ಹಿಂದುಸ್ತಾನ ಸರಕಾರವು ದಕ್ಷವಿರಬೇಕಾಗಿದೆ. ಇದಕ್ಕೆ ಪ್ರಜೆಗಳ ಸಹಕಾರಬೇಕು ಎಂದು ಉಪಮುಖ್ಯಮಂತ್ರಿಗಳು ಕೇಳಿಕೊಂಡರು.

ಕೂಲಿಕಾರರಿಗೆ ಬಿನ್ನಹ

ಬಿರ್ಲಾ ಮೊದಲಾದ ಬಂಡವಲುದಾರರ ಸ್ನೇಹಿತನೆಂದು ನನ್ನ ಮೇಲೆ ಆರೋಪ ಹೊರಿಸಲಾಗುತ್ತದೆ. ಯಾವ ಖಾಸಗಿ ಆಸ್ತಿಯನ್ನೂ ಇಟ್ಟುಕೊಳ್ಳಬಾರದೆಂಬದನ್ನು ನಾನು ಮಹಾತ್ಮರಿಂದ ಕಲಿತಿದ್ದೇನೆ. ಇದಕ್ಕೂ ಉಚ್ಚವಾದ ಸಮತಾವಾದ ಬೇರೊಂದಿಲ್ಲ ಬಡವರು [illegible] ಕೂಲಿಕಾರರು ಹೆಚ್ಚು [illegible] ಮಾಡಬೇಕು [illegible] ರಾಜರೂ ಹೆಚ್ಚು [illegible] ಉತ್ಪಾದನೆ ಮಾಡಿ ಹಿಂದುಸ್ತಾನವು ವಿದೇಶಗಳ ಮೇಲೆ [illegible] [illegible] ಕೂಲಿಕಾರರ [illegible] ಕಾರ ಬಂಡವಲುದಾರರ ಸರಕಾರ [illegible] ಸಾಧಕರು ಹೇಳುತ್ತಾರೆ. ಅದು [illegible] ಸದ್ಯದ ಸರಕಾರದ ಮುಖ್ಯ [illegible] ಕೂಲಿಕಾರ ಸಂಘದ ಮೊದಲನೆಯ ಅಧ್ಯಕ್ಷರು, ಎಷ್ಟೋ ನಿರಾಧಾರ ಸುದ್ದಿಗಳನ್ನು ಹರಡಿ ಅಪಪ್ರಚಾರ ಮಾಡಲಾಗುತ್ತಿದೆ ಮಂತ್ರಿಮಂಡಳದಲ್ಲಿ ಪಂಡಿತ ನೆಹರು [illegible] ವರ್ಚಸ್ಸು ಇಲ್ಲ. ಅವರ ಸಮತಾವಾದದಿಂದ ಕೂಲಿಕಾರರಿಗೆ ಪ್ರಯೋಜನವಾಗುವಂತಿಲ್ಲ. ಮಂತ್ರಿಮಂಡಳದಲ್ಲಿ ಎರಡು ಪಂಗಡಗಳಿವೆ ಎಂದು ಮುಂತಾಗಿ ತಳಬುಡವಿಲ್ಲದ ವಿಧಾನಗಳು ಕೇಳಬರುತಿವೆ. ಮಂತ್ರಿಮಂಡಳದಲ್ಲಿ [illegible] ಪಂಡಿತ ನೆಹರು ಇವರಿಗೆ ಸಹಾಯಕನಾಗದೆ ಹೋದರೆ ಅಥವಾ ಅವ್ರ ಅವರ ಮನಸ್ಸಿಗೆ ಬಾರದೆ ಹೋದರೆ ನಾನು ಮಂತ್ರಿಮಂಡಳದಲ್ಲಿಯ ಸ್ಥಾನ ಬಿಟ್ಟು ಕೊಡುವೆ ಎಂದು ಸರದಾರರು ಘೋಷಿಸಿ ಸರಕಾರೀ ನೌಕರರ ಕಾರ್ಯವನ್ನು ಪ್ರಶಂಸಿಸಿ ಅವರ ಬಗ್ಗೆ ಯಾರೂ ಸಂಶಯಪಡಬೇಕಾಗಿಲ್ಲ ಎಂದು ಹೇಳಿದರು.

ಹಿಂದುಸ್ತಾನದ ಎಲ್ಲ ಜನರು ಕೂಲಿಕಾರರು ಉದ್ದಿಮೆದಾರರು [illegible] ಸಹಕರಿಸಿ ದೇಶವು [illegible] ಆರ್ಥಿಕ ಸಮಸ್ಯೆಯನ್ನು [illegible] ಸರಕಾರಕ್ಕೆ ಸಹಾಯ [illegible] ಮಾಡುವದರಲ್ಲಿ [illegible] ಹಿಂದುಸ್ತಾನದಲ್ಲಿ ಹೊಸ [illegible] ಸಹಾಯ ಮಾಡಬೇಕೆಂದು ಕೇಳಿಕೊಂಡರು. ಕರ ತಪ್ಪಿಸುವವರಿಗೆ ಉಗ್ರ ಶಾಸನ ಮಾಡಲಾಗುವದೆಂದು ಎಚ್ಚರಿಕೆ ಕೊಟ್ಟರು.

ಅಂಗರಕ್ಷಕನ ಸಾಹಸ

ಒಮ್ಮೆ ಲಕ್ನೋದಲ್ಲಿ ಪಂ. ಜವಾಹರರ ಭಾಷಣದ ವ್ಯವಸ್ಥೆ ನಡೆದಿತ್ತು. ಅಸಂಖ್ಯಾಂತ ಜನರು ತುಂಬಿ ಬಿಟ್ಟಿದ್ದರು. ನೆಹರುಗಳನ್ನು ನೋಡಬೇಕು, ಅವರ ಮಾತನ್ನು ಕೇಳಬೇಕು ಎಂದು ಲಕ್ಷೋಪಲಕ್ಷ ಜನರು ವೇದಿಕೆಯ ಮೇಲೆ ನುಗ್ಗಿ ಬರತೊಡಗಿದರು. ಆಗ ಸಿಟ್ಟಿಗೆದ್ದ ಜವಾಹರರು ತಾವು ಮೊದಲಿನಂತೆಯೇ ಕಾಂಗ್ರೆಸ್ ಮುಖಂಡರೆಂದು ತಿಳಿದು ಸಭೆಯಲ್ಲಿ ನುಗ್ಗಿ ಗದ್ದಲ ನಿಲ್ಲಿಸಲು ಪ್ರಯತ್ನಿಸಿ ಓಡಲು ಪ್ರಾರಂಭಿಸಿದರು. ಅವರು ಒಂದು ಹೆಜ್ಜೆಯನ್ನು ಇಡುವಷ್ಟರಲ್ಲಿ ಅವರ ಅಂಗರಕ್ಷಕನು ಒಮ್ಮೆಲೆ ತಡೆದು 'ನೀವು ಮೊದಲಿನ ಕಾಂಗ್ರೆಸ್ ಮುಖಂಡರಷ್ಟೇ ಅಲ್ಲ, ಹಿಂದೀ ಪ್ರಧಾನರು, ನೀವು ಹೀಗೆ ಜನಸಂದಣಿಯಲ್ಲಿ ನುಗ್ಗಬಾರದು. ನಿಮಗೆ ಅಲ್ಲಲ್ಲಿ ಶತ್ರುಗಳಿರಬಹುದು, ನಿಮ್ಮ ಜೀವವನ್ನು ಅಪಾಯಕ್ಕೆ ಒಡ್ಡಬಾರದು, ಎಂದು ಹೇಳಿದರೂ ಕೇಳಲಿಲ್ಲ. ಆಗ ಅವನು ಅವರನ್ನು ಹಿಡಿದನು; ಅವರೂ ಅವನೂ ಕೆಲ ಸೆಕಂಡು ಕುಸ್ತಿ ಮಾಡಿದರು. ಆದರೆ ಭೀಮಬಲನಾದ ಅಂಗರಕ್ಷಕನು ಅವರನ್ನು ರಟ್ಟೆ ಹಿಡಿದು ನಿಲ್ಲಿಸಿ ಬಿಟ್ಟನು!

ನಿಮಗೆ ಗೊತ್ತೆ?

೧,೦೦,೦೦೦ ಜಾತೀಯ ವನಸ್ಪತಿಗಳು ಫಲಬಿಡಲು ತುಂಬಿಗಳನ್ನೇ ಅವಲಂಬಿಸಿವೆ. ತುಂಬಿಗಳು ಕೇಸರವನ್ನು ತಂದು ಈ ವನಸ್ಪತಿಗಳ ಪುಷ್ಪಗಳ ಅಂಡಾಶಯದಲ್ಲಿ ಕೆಡಹಿದರೆನೇ ಅವು ಬೀಜಗಳನ್ನು ಧರಿಸಬಲ್ಲವು. ಆದರೆ ಕೆಂಪು ಹೂ ತುಂಬಿಗಳಿಗೆ ಮೆಚ್ಚಿಗೆಯಲ್ಲದ್ದರಿಂದ ಅದರ ಹತ್ತಿರ ಅವು ಸುಳಿಯುವದಿಲ್ಲ. ಅಂಥವುಗಳನ್ನು ಫಲಿಸುವಂತೆ ಮಾಡಲು ಸಸ್ಯ ಶಾಸ್ತ್ರಜ್ಞರು ಬೇರೆ ಹೂಗಳ ಪರಾಗವನ್ನು ಅವುಗಳ ಮೇಲೆ ಚಿಮುಕಿಸಿದರು. ಆಗ ತುಂಬಿಗಳು ಆ ಗಂಧಕ್ಕೆ ಮೋಸಹೋಗಿ ಕೆಂಪು ಹೂಗಳನ್ನೂ ಫಲವತ್ತಾಗಿ ಮಾಡಿದವು!

ನಾಯಿಯನ್ನೇ ಕಚ್ಚಿದ ಮನುಷ್ಯ!

ಹೈದರಾಬಾದಲ್ಲಿಯ ಅರಬ ಹಳ್ಳಿಯಾದ ದಾಹಿತೆ ಎಂಬಲ್ಲಿ ಸುಲೇಮಾನನೆಂಬ ಓರ್ವ ಕುರುಬನು ಒಂದು ನಾಯಿಯನ್ನು ಕಚ್ಚಿದ ಸುದ್ದಿ ಬಂದಿದೆ.

ಅವನನ್ನು ಕೋರ್ಟಿನಲ್ಲಿ ವಿಚಾರಣೆಗೆ ನಿಲ್ಲಿಸಿದಾಗ " [illegible] ನನ್ನ [illegible] ನಾನು [illegible] " ಎಂದು ಹೇಳಿದನು.

ನ್ಯಾಯಾಧೀಶರು " ಯಾರಿಗೂ ಎರಡನೆಯವರ ನಾಯಿಯನ್ನು ಕಚ್ಚುವ ಹಕ್ಕು ಇಲ್ಲ" ವೆಂದು ಹೇಳಿ ಅವನಿಗೆ ೧೫ ದಿನಗಳ ಶಿಕ್ಷೆ ವಿಧಿಸಿದರು.

ಕರ್ನಾಟಕ,

ಧಾರವಾಡ

ಮಚಿಗಾರ ಸೊಸಾಯಿಟಿಯ ವಾರ್ಷಿಕ ಸಾಧಾರಣ ಸಭೆಯು ತಾ. ೨೬ ನೇ ದಿನ ಕೂಡಿ ವರದಿ ಮಾನ್ಯಮಾಡಿ ವ್ಯವಸ್ಥಾಪಕ ಮಂಡಲವನ್ನು ಆಯ್ದು ನಿವ್ವಳ ಲಾಭದಲ್ಲಿ ೭೯ ರೂ. ಗಳನ್ನು ಗಾಂಧೀಜಿಯವರ ಸ್ಮಾರಕ ನಿಧಿಗೆ ಕೊಡಲು ಗೊತ್ತುಮಾಡಿತು.

ಕೆ. ಈ. ಬೋರ್ಡ ಆರ್ಟ್ಸ ಕಾಲೇಜಿನ ಪರವಾಗಿ ತಾ ೨೬ ರ ಮುಂಜಾನೆ ಧಾರವಾಡದ ವಿಜಯ ಟಾಕೀಜದಲ್ಲಿ ಬಡ ವಿದ್ಯಾರ್ಥಿಗಳ ಸಹಾಯಾರ್ಥವಾಗಿ ವಿವಿಧ ವಿನೋದಾವಳಿಗಳು ನಡೆದವು. ವಿದ್ಯಾರ್ಥಿನಿಯರು ಪ್ರಾಧ್ಯಾಪಕರು ಪಾತ್ರವಹಿಸಿದ ನಾಟಕ ಪ್ರಹಸನಗಳೇ ಮೊದಲಾದ ಕಾರ್ಯಕ್ರಮಗಳು ನಡೆದವು. ಈ ವಿನೋದಾವಳಿಗಳನ್ನು ಹುಬ್ಬಳ್ಳಿಯಲ್ಲಿಯೂ ತೋರಿಸಲಾಗುವದೆಂದು ತಿಳಿಯುತ್ತದೆ.

ಮುಂಬಯಿ ಸರಕಾರದ ಹುಕುಮಿನ ಮೇರೆಗೆ ಸ್ಥಾನಬದ್ಧತೆಯಲ್ಲಿಡಲ್ಪಟ್ಟ ಧಾರವಾಡ ಮೋಟಾರ ಒಡೆಯರಾದ ಅಲ್ಲಾಬಕ್ಷರನ್ನು ಜಿಲ್ಹಾ ಮ್ಯಾಜಿಸ್ಟ್ರೇಟರು ತಾ. ೨೮ರಂದು ಬಿಡುಗಡೆಮಾಡಿದರು.

ಒತ್ತಾಯ ಶಿಕ್ಷಣದ ನಿಯಮದ ಪ್ರಕಾರ ತಮ್ಮ ಮಕ್ಕಳನ್ನು ಶಾಲೆಗೆ ನಿಯಮಿತವಾಗಿ ಕಳಿಸದ್ದಕ್ಕೆ ರೆಸಿಡೆಂಡ ಮ್ಯಾಜಿಸ್ಟ್ರೇಟರು ಶ್ರೀ ಲೋಕಪ್ಪಾ ಕಠಾರೆ ಮತ್ತು ಶ್ರೀ ತಮ್ಮಣ್ಣ ಹರಕುಣಿ ಅವರಿಗೆ ತಲಾ ೨ ರೂ. ದಂಡ ವಿಧಿಸಿದರು.

ಶ್ರೀ ಅಮಟಿಯವರ ಹುಬ್ಬಳ್ಳಿ ಇಲೆಕ್ಟ್ರಿಕ್ ಕಂಪನಿಯ ಖಟ್ಲೆಯು ಅಕ್ಟೋಬರ ೧೩ ಕ್ಕೆ ಪ್ರಿವ್ಹಿ ಕೌನ್ಸಿಲದಲ್ಲಿ ವಿಚಾರಣೆಗೆ ಬರಲಿದೆಯೆಂದು ತಿಳಿಯುತ್ತದೆ.

ಧಾರವಾಡದ ನಗರದ ಮಧ್ಯದಲ್ಲಿರುವ ಶ್ರೀ ದತ್ತಾತ್ರೇಯ ಮಂದಿರದಲ್ಲಿ ತಾ ೨ ರಂದು ಮಧ್ಯಾಹ್ನ ಹರಿಜನರ ಪ್ರವೇಶವಾಯ್ತು. ಗುಡಿಯ ವ್ಯವಸ್ಥಾಪಕ ಮಂಡಲದವರು ಹರಿಜನರನ್ನು ಬರಮಾಡಿಕೊಂಡರು. ಗುಡಿಯ ಸುತ್ತ ಜನ ಉತ್ಸಾಹಭರಿತರಾಗಿ ಕಿಕ್ಕಿರಿದು ನೆರೆದಿತ್ತು. ಹರಿಜನರು ಭಜನೆ ಪ್ರಾರ್ಥನೆ ಸಲ್ಲಿಸಿ ತೀರ್ಥಪ್ರಸಾದ ಸ್ವೀಕರಿಸಿ ಮೆರವಣಿಗೆಯಿಂದ ಬಂದಂತೆಯೇ ಒಳ್ಳೇ ಶಿಸ್ತಿನಿಂದ ಮೆರವಣಿಗೆಯಿಂದ ಹೊರಟರು.

ಹುಬ್ಬಳ್ಳಿಯ ಸಿವಿಕ್ ಬೋರ್ಡಿನವರು ಒಂದು ಪ್ರಕಟನೆ ಹೊರಡಿಸಿ ತಮ್ಮನ್ನು ನಗರ ಸಭೆಯ ಚುನಾವಣೆಯಲ್ಲಿ ಆರಿಸಿದ್ದಕ್ಕೆ ನಾಗರಿಕರಿಗೆ ಕೃತಜ್ಞತೆಸಲ್ಲಿಸಿರುವರಲ್ಲದೆಪ್ರತಿಯೊಂದು ವಾರ್ಡಿನಲ್ಲಿಯೂ ಸಿವಿಕ್‌ಬೋರ್ಡಿನ ಸಣ್ಣಸಣ್ಣ ಶಾಖೆಗಳನ್ನೂ ಕಚೇರಿಗಳನ್ನೂಮಾಡಿ ಕುಂದುಕೊರತೆಗಳನ್ನು ಅರಿತು ಅವನ್ನು ಹೋಗಲಾಡಿಸಲು ಯತ್ನಿಸುವದಾಗಿ ಸಾರಿದ್ದಾರೆ. ಚುನಾವಣೆ ಮುಗಿದಮೇಲೆಯೇ ನಗರ ಸುಧಾರಣೆಯ ನಿಜವಾದ ಕಾರ್ಯಾರಂಭವಾಗುವದಾದಕಾರಣ ನಾಗರಿಕರೆಲ್ಲ ತಮ್ಮೊಡನೆ ಈ ಕಾರ್ಯದಲ್ಲಿ ಸಹಕರಿಸಬೇಕೆಂದು ಬೇಡಿಕೊಂಡಿದ್ದಾರೆ.

ಶ್ರೀ ರತ್ನಪ್ಪಾ ಕುಂಬಾರರು ಧಾರವಾಡದಲ್ಲಿ ತಾ ೧ ರಂದು ಸಂಜೆಗೆ ಕನ್ನಡದಲ್ಲಿ ಭಾಷಣ ಮಾಡುತ್ತ ಭಾಷಾವಾರ ಪ್ರಾಂತರಚನೆಯು ದೇಶೋನ್ನತಿಗಾಗಿ ಆಗಲೇಬೇಕು ಎಂದು ಹೇಳಿದರು.

ದನಗಳನ್ನು ಸಾಕಿ ಬೆಳೆಸುವವರಿಗೆ ಪ್ರೋತ್ಸಾಹ ಕೊಡುವಸಲುವಾಗಿ ಧಾರವಾಡ ಜಿಲ್ಹೆಯಲ್ಲಿ ಅಮೃತ ಮಹಾಲ ಜಾತಿಯ ದನಗಳ ಪ್ರದರ್ಶನ ಏರ್ಪಡಿಸಲಾಗುವದು. ನೂರಾರು ರೂಪಾಯಿ ಇನಾಮು ಸರ್ಟಿಫಿಕೇಟು ಕೊಡಲಾಗುವದು. ಎಲ್ಲ ರೈತರೂ ಸಮೀಪದ ಪ್ರದರ್ಶನಕ್ಕೆ ಇಂತಹ ದನ ತಂದು ಇದರ ಲಾಭ ಪಡೆಯಬೇಕೆಂದು ಧಾರವಾಡ ಜಿಲ್ಹೆಯ ಪಶುಸಂವರ್ಧನ ಶಾಖೆಯ ಅಧಿಕಾರಿಗಳು ತಿಳಿಸುತ್ತಾರೆ. ಪ್ರದರ್ಶನದ ಊರು ಹಾಗೂ ದಿನ: - ತಾ. ೧೬ ಮತ್ತು ೧೮ ಕ್ಕೆ ದೇವರಗುಡ್ಡದ ದನದ ಜಾತ್ರೆ. ತಾ. ೨೫ ಹೊಸರಿತ್ತಿ. ತಾ. ೧-೧೧-೪೮ ಸಿಡೇನೂರು ತಾ. ೮-೧೧-೪೮ ಮರೇವಾಡ, ತಾ ೧೫-೧೧-೪೮ ಹಿರೇಕೆರೂರ, ತಾ. ೧೬-೧೧-೪೮ ಶಿಗ್ಗಾವ, ತಾ. ೨೩-೧೧-೪೮ ಆಲೂರ. (ಹಾನಗಲ್ಲ) ತಾ. ೨೬-೧೧-೪೮ ಸಾಸವಿಹಳ್ಳಿ.

ಗಾಂಧೀ ಜಯಂತಿಯ ಪ್ರಸಂಗದಲ್ಲಿ ಮುಂಬಯಿಯ ಅರ್ಥಸಚಿವ ವೈಕುಂಠಲಾಲರು ಅಮರಗೋಳದ ಕಸ್ತೂರಬಾ ವಿದ್ಯಾಲಯಕ್ಕೆ ಜಿಲ್ಹಾಧಿಕಾರಿಗಳು, ಜಿಲ್ಹಾ ಕಾಂಗ್ರೆಸ ಕಮೀಟಿಯ ಅಧ್ಯಕ್ಷ ಮೊದಲಾದವರೊಂದಿಗೆ ಭೆಟ್ಟಿಕೊಟ್ಟರು ಮತ್ತು ಗ್ರಾಮೋದ್ಧಾರದ ಬಗ್ಗೆ ಗಾಂಧೀಜಿಯ ಜೀವನದ ಬಗ್ಗೆ ಸಮಯೋಚಿತ ಭಾಷಣಮಾಡಿದರು. ವಿದ್ಯಾಲಯದ ಸ್ಥಳ ಮತ್ತು ನಿಸರ್ಗದ ರಮ್ಯತೆಯನ್ನು ಕಂಡು ಅರ್ಥಸಚಿವರು ಆನಂದ ವ್ಯಕ್ತಪಡಿಸಿದರು. ಶ್ರೀ ಉಮಾಬಾಯಿ ಕುಂದಾಪುರರು ವಿದ್ಯಾಲಯದ ಚಟುವಟಿಕೆಗಳ ಬಗ್ಗೆ ಸ್ವಲ್ಪದರಲ್ಲಿ ತಿಳಿಸಿ ಹೇಳಿದರು.

ಬೆಳಗಾವಿ

ಗೋಕಾಕ ತಾಲೂಕ ಶಿಕ್ಷಕ ಸಂಘದ ವಾರ್ಷಿಕ ಸಭೆಯು ತಾ. ೨೬ ಕ್ಕೆ ಜರುಗಿ ಗಾಂಧೀ ಸ್ಮಾರಕ ನಿಧಿಗೆ ೧೧೧ ರೂ. ಕಾಣಿಕೆ ಕೊಡುವದು ಗೊತ್ತಾಯಿತು. ಮುಂದಿನ ವರ್ಷದ ವ್ಯವಸ್ಥಾಪಕ ಮಂಡಲದ ಆಯ್ಕೆಯೂ ಆಯಿತು.

೧೬ ನೆಯ ನಿಖಿಲ ಕರ್ನಾಟಕ ಆಯುರ್ವೇದ ಸಮ್ಮೇಲನವು ಅಕ್ಟೋಬರ ೨೪-೨೫ ಕ್ಕೆ ಲಿಂಗರಾಜ ಕಾಲೇಜದಲ್ಲಿ ಜರಗುವದು. ಹುಬ್ಬಳ್ಳಿಯ ವೈದ್ಯಗುರು ಶ್ರೀ ದಾ. ಅ. ಹಲಸೀಕರರು ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ. ಸಮ್ಮೇಲನದ ಜೊತೆಗೆ ಔಷಧಿ ಪ್ರದರ್ಶನ ಮತ್ತು ಚಿಕಿತ್ಸಾ ಸಂಭಾಷಾ ಪರಿಷತ್ತುಗಳು ನಡೆಯಲಿವೆ.

ವಿಜಾಪುರ

ವಿಜಾಪೂರ ವಿಜಯ ಕಾಲೇಜಿನ ಕರ್ನಾಟಕ ಸಂಘದ ಪರವಾಗಿ ತಾ. ೨೫ ಕ್ಕೆ ಕರ್ನಾಟಕ ದರ್ಶನ ಕುರಿತು ವಿಚಾರ ಸಂಕಿರಣ ನಡೆಯಿತು. ಜಿಲ್ಹಾ ನ್ಯಾಯಾಧೀಶರಾದ ಶ್ರೀ ಪಿ. ಎಚ್. ಗುಂಜಾಳರು ಅಧ್ಯಕ್ಷರಾಗಿದ್ದರು. ತಾವು ಕಲಿವಾಗಿನ ಕಾಲಕ್ಕಿಂತ ಈಗ ಕನ್ನಡದ ಅಭಿಮಾನ ಬೆಳೆಯುತ್ತಿದೆಯೆಂದು ಅಧ್ಯಕ್ಷರು ನಿವೇದಿಸಿದರು. ಅನೇಕರು ಅನೇಕ ವಿಷಯುಗಳನ್ನು ಪ್ರತಿಪಾದಿಸಿದರು.

ಜಿಲ್ಹಾ ಮಧ್ಯವರ್ತಿ ಸಹಕಾರಿ ಬ್ಯಾಂಕಿಗೆ ತಾ. ೩೦ ರಂದು ಈ ಮಹನೀಯರು ಆರಿಸಿ ಬಂದರೆಂದು ತಿಳಿಯುತ್ತದೆ.

(೧) ಶ್ರೀ ಎಚ್. ಬಿ. ಪಾಟೀಲ, ಕುಂದರಗಿ
(೨) ಶ್ರೀ ಬಿ. ಆಯ. ಪಾಟೀಲ, ಹೊರ್ತಿ
(೩) ಶ್ರೀ ಆರ್. ಬಿ. ಕಲ್ಲೂರ\ಬಾಗೇವಾಡಿ
(೪) ಶ್ರೀ ಬಿ. ವಾಯ. ಹಟಗಾರ ಕಟಗೇರಿ.

ಉತ್ತರ ಕನ್ನಡ

ಕಾರವಾರ ನಗರ ಸಭೆಯ ಸದಸ್ಯರಾದ ಶ್ರೀ ಚಂದಾವರಕರರು ರಾಜೀನಾಮೆ ಸಲ್ಲಿಸಿದ್ದು ಬೇಗ ಉಪಚುನಾವಣೆ ನಡೆಯಲಿದೆ.

ಕಾರವಾರ ಜಿಲ್ಹೆಯ ೪೨ ಪ್ರಮುಖ ರೈತ ಕಾರ್ಯಕರ್ತರ ಸಭೆಯೊಂದು ಅಂಕೋಲೆಯಲ್ಲಿ ಶ್ರೀ ದಯಾನಂದ ನಾಡಕರ್ಣಿ ಬಂಕಿಕೊಡ್ಲ ಅವರ ಹಿರಿತನದಲ್ಲಿ ಸೇರಿ ಕಾಂಗ್ರೆಸ ರೈತ ಸಂಘದ ಕಾರ್ಯದ ಬಗ್ಗೆ ಅಸಮಾಧಾನದ ಗೊತ್ತುವಳಿ ಮಾಡಿ ಯಾವದೇ ರಾಜಕೀಯ ಪಕ್ಷಕ್ಕೆ ಹೊಂದಿಕೊಳ್ಳದೆ ಕ್ರಮಬದ್ಧ ಮಾರ್ಗದಿಂದ ಗ್ರಾಮುಗಳ ಉನ್ನತಿ ಸಾಧಿಸಲು ಶ್ರೀ ರಮಾನಂದರ ಹಿರಿತನದಲ್ಲಿ ಜಿಲ್ಹಾ ರೈತಕೂಟ ಸ್ಥಾಪಿಸಲ್ಪಟ್ಟಿತಾಗಿ ತಿಳಿಯುತ್ತದೆ.

ಬಳ್ಳಾರಿ

ಬಳ್ಳಾರಿಯ ಸಾಂಬಮೂರ್ತಿ ಬೈಲಿನಲ್ಲಿ ತಾ. ೨೬ ಕ್ಕೆ ಶ್ರೀ ಬಿ. ಭೀಮರಾವ, ಎಂ. ಎಲ್. ಸಿ. ಅವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರುಗಿ ಹೈದರಾಬಾದದಲ್ಲಿ ಯಶದೊರೆತದ್ದಕ್ಕೆ ಪರಮಾತ್ಮನಲ್ಲಿ ಪ್ರಾರ್ಥಿಸಿಕೊಂಡದ್ದಾಯಿತಲ್ಲದೆ ಹಿಂದುಸ್ತಾನ ಸರಕಾರವನ್ನೂ ಹಿಂದೀ ಸೈನಿಕರನ್ನೂ ಅಭಿನಂದಿಸಲಾಯ್ತು. ಮುನಿರಾಬಾದ ಕಾರ್ಯಾಚಾರಣೆಯಲ್ಲಿ ಭಾಗವಹಿಸಿದ ಮೈಸೂರ ಕಾಲ್ದಳ ಹಾಗು ಅವರಿಗೆ ಸಹಾಯ ಮಾಡಿದ ಬಳ್ಳಾರಿ ಜಿಲ್ಹಾಧಿಕಾರಿಗಳು ಪೋಲೀಸ ಅಧಿಕಾರಿಗಳು ಮೊದಲಾದವರಿಗೆ ಧನ್ಯವಾದಗಳನ್ನು ಅರ್ಪಿಸಲಾಯ್ತು.

ಕನ್ನಡ ಸಂಸ್ಥಾನ

ಸೆಂಡೂರು ಸಂಸ್ಥಾನದ ವಿಲೀನೀಕರಣದ ಕಾರ್ಯವು ಮುಗಿದಿದ್ದು ಸಂಸ್ಥಾನದ ಭವಿತವ್ಯನ್ನು ಕುರಿತು ಪರ್ಯಾಲೋಚಿಸಲು ಸೊಂಡೂರ ಸಂಸ್ಥಾನದ ಪ್ರಜಾಪರಿಷತ್ತಿನ ಸಭೆಯನ್ನು ತಾ. ೧೨-೧೦-೪೮ ಬೆಳಿಗ್ಗೆ ೧೧ ಗಂಟೆಗೆ ಕರೆಯಲಾಗಿದೆ.

ಕರ್ನಾಟಕದಲ್ಲಿ ಗಾಂಧೀಜಯಂತಿ

ಗಾಂಧೀಜಿಯವರ ೮೦ ನೆಯ ಜಯಂತಿಯು ಹುಬ್ಬಳ್ಳಿಯಲ್ಲಿ, ಪ್ರಭಾತಫೇರಿ, ಮುಖ್ಯ ಮುಖ್ಯ ಚೌಕುಗಳಲ್ಲಿ ಧ್ವಜವಂದನ, ಸೂತ್ರಯಜ್ಞ, ಮೆರವಣಿಗೆ, ಸಭೆ ಮೊದಲಾದ ಕಾರ್ಯಕ್ರಮಗಳಿಂದ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ದೊಡ್ಡ ಕಟ್ಟಡ, ಅಂಗಡಿ, ಮನೆ, ಪೇಟಿ ಮೊದಲಾದವುಗಳು ತಳಿರು ತೋರಣಗಳಿಂದ ರಾಷ್ಟ್ರಧ್ವಜಗಳಿಂದ ಶೃಂಗರಿಸಲ್ಪಟ್ಟಿದ್ದವು. ಊರಲ್ಲಿಯ ಶಾಲೆಕಾಲೇಜುಗಳಲ್ಲಿಯೂ ಗಾಂಧಿ ಜಯಂತಿಯ ಬಗ್ಗೆ ಧ್ವಜವಂದನ ಸಭೆ ಮೊದಲಾದವು ಜರುಗಿ ಗಾಂಧೀಜಿಯವರ ಜೀವನ ಹಾಗು ತತ್ವಗಳ ಬಗ್ಗೆ ನಿಬಂಧವಾಚನ, ಕವನ, ಭಾಷಣ ಮೊದಲಾದವು ನಡೆದವು. ತಾ. ೨ ರಂದು ಹುಬ್ಬಳ್ಳಿಯಲ್ಲಿ ಗಾಂಧೀ ಸ್ಮಾರಕಕ್ಕೆ ೯೩೪೯ ರೂ. ಕೂಡಿದವು.

ಕಾರವಾರದಲ್ಲಿ ಗಾಂಧೀ ಜಯಂತಿಯನ್ನು ಅನೇಕ ಸಂಘಸಂಸ್ಥೆಗಳ ಮುಖಾಂತರ ಸಾರ್ವಜನಿಕವಾಗಿ ಸಡಗರದಿಂದ ಆಚರಿಸಲಾಯಿತು. ಶಾಲೆ,ಸರಕಾರೀಕಟ್ಟಡ, ಖಾಸಗೀ ಕಟ್ಟಡಗಳ ಮೇಲೆ ರಾಷ್ಟ್ರಧ್ವಜ ಓಲಾಡುತ್ತಿತ್ತು. ಸಾಮೂಹಿಕ ಸೂತ್ರಯಜ್ಞ, ಮಹಾತ್ಮರ ಜೀವನದ ಬಗ್ಗೆ ಲೇಖನ ಸ್ಪರ್ಧೆ ನಡೆದವು. ೫ ವಿದ್ಯಾರ್ಥಿಗಳಿಗೆ ಪುರಸ್ಕಾರ ಕೊಡಲಾಯಿತು. ಸಭೆಯಾಗಿ ಸಮಯೋಚಿತ ಭಾಷಣಗಳಾದವು.

ಕೊಡಗಾನೂರ (ತಾಳೀಕೋಟಿ) ಶಾಲಾ ವಾಚನಾಲಯದ ಪರವಾಗಿ ಗಾಂಧಿ ಜಯಂತಿಯು ಪ್ರಭಾತಫೇರಿ, ಧ್ವಜವಂದನ, ವಿದ್ಯಾರ್ಥಿಗಳ ಲೆಝಿಮ ಆಟ ನಡೆದಿತು. ಗೃಹಸಂರಕ್ಷಕ ದಳದವರು ಊರಪ್ರಮುಖರು ಕೂಡಿ ಗಾಂಧಿಫೋಟೋ ಮೆರವಣಿಗೆ ಮಾಡಿದರು.

ಬೆಂಗಳೂರು ಮೈಸೂರು

ಮೈಸೂರ ಬೆಂಗಳೂರು ನಡುವೆ ಲೋಕಪಾವನಿ ನದಿಯ ಮೇಲೆ ಕಟ್ಟಿಸಿದ ೧೫೦ ಫೂಟು ಉದ್ದಳತೆಯ ಅಖಂಡವಾದ ಹೊಸ ಪೂಲಿನ ಉದ್ಘಾಟನ ಸಮಾರಂಭವನ್ನು ತಾ ೨೯ ರಂದು ಮೈಸೂರಿನ ಶ್ರೀಮನ್ಮಹಾರಾಜರು ನೆರವೇರಿಸಿದರು. ಈ ಸಮಾರಂಭದ ಕಾಲಕ್ಕೆ ಮೈಸೂರಿನ ಗೃಹಮಂತ್ರಿಗಳಾದ ಶ್ರೀ ಟಿ. ಮರಿಯಪ್ಪನವರು ಶ್ರೀಮನ್ಮಹಾರಾಜರಿಗೆ ಬೆಳ್ಳಿಯ ಒಂದು ಪೂಲನ್ನೂ ಬಿನ್ನವತ್ತಳೆಯನ್ನೂ ಸಮರ್ಪಿಸಿದರು.

ದಕ್ಷಿಣ ಕನ್ನಡ

ಮಂಗಳೂರ ಕೆಲಸಗಾರರ ಸಂಘದ ಕಾರ್ಯದರ್ಶಿಗಳಾದ ದಾ. ಸಂಜೀವನಾಥರು ತಾ. ೨೬ ಕ್ಕೆ ಜರುಗಿದ ಸಂಘದ ಸಭಾಸದೆಯಲ್ಲಿ ತಮ್ಮ ಸ್ಥಳಕ್ಕೆ ರಾಜೀನಾಮೆಕೊಟ್ಟಿದ್ದು ಅದು ಸ್ವೀಕೃತವಾಯಿತು. ಇಂದಿನ ವರೆಗೆ ಸಮಾಜವಾದಿ ಪಕ್ಷದ ಆಶ್ರಯದಲ್ಲಿ ಕೆಲಸ ನಡೆಸುತ್ತಿದ್ದ ಸಂಘವು ಇನ್ನು ಮೇಲೆ ಕಾಂಗ್ರೆಸ ಆಶ್ರಯದಲ್ಲಿ ಕೆಲಸ ಮಾಡುವದೆಂದು ನಿರ್ಧಾರವಾಯ್ತು. ಸಮಾಜವಾದಿಗಳು ಕೆಲಸಗಾರರ ಚಳವಳಿಯನ್ನು ಹದಗೆಡಿಸಿ ಕಾರ್ಮಿಕರನ್ನು ಗತಿಗೇಡಿಗಳನ್ನಾಗಿ ಮಾಡಿದ್ದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ.

ಮಂಗಳೂರಲ್ಲಿ ಗಾಂಧೀ ಜಯಂತಿಯು ಶಾಲೆ ಕಾಲೇಜುಗಳಲ್ಲಿ ಧ್ವಜವಂದನೆ, ಭಜನೆ, ಭಾಷಣ ಇತ್ಯಾದಿ ಕಾರ್ಯಕ್ರಮಗಳಿಂದ ಆಚರಿಸಲ್ಪಟ್ಟಿದೆ. ಬೆಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ಜರುಗಿದ ಸಭೆಗೆ ಶ್ರೀ ಪಿ. ಎಸ್. ಕಕ್ಕಿಲ್ಲಾಯರು ಅಧ್ಯಕ್ಷರಾಗಿದ್ದರು. ಕೇಂದ್ರ ಬಯಲಲ್ಲಿ ಜರುಗಿದ ಸಾರ್ವಜನಿಕ ಸಭೆಗೆ ಶ್ರೀ ಎಲ್. ಸಿ. ಪಾಯಸ್ ಎಂ. ಎಲ್. ಎ. ಅವರು ಅಧ್ಯಕ್ಷರಾಗಿದ್ದರು.

ಹಿಂದುಸ್ಥಾನ ಸ್ಕೌಟು ಮೇಳವೊಂದು ೧ ರಂದು ಬೆಳಿಗ್ಗೆ ಮಂಗಳೂರಲ್ಲಿ ಜರಗಿತು. ನಗರದ ೯೦೦ ಸ್ಕೌಟುಗಳು ಮೇಳದಲ್ಲಿ ಭಾಗವಹಿಸಿದ್ದರು. ಶ್ರೀಯುತರು ಎಂ. ಎಸ್. ಪಿತಾಂಬರರಾವ್, ಎಂ. ಎಸ್. ಮಾಧವರಾವ (Provincial Asst. Commissioner) ಮತ್ತು ಎಂ. ವೆಂಕಟೇಶ ಪೈ. District Commissioner) ಇವರುಗಳು ಭಾಷಣ ಮಾಡಿದರು.

ಬೆಸೆಂಟ್ ಬಾಲಿಕಾ ಪಾಠಶಾಲೆಯ ವಾರ್ಷಿಕೋತ್ಸವವು ಶ್ರೀ ಸ್ವಾಮಿ ವಿಮಲಾನಂದಜಿಯವರ ಅಧ್ಯಕ್ಷತೆಯಲ್ಲಿ ದಿನಾಂಕ ೧ ರಂದು ಸಂಜೆ ಜರಗಿತು. ಶ್ರೀ ಬಿ. ಅನಂತರಾಯರು ಬೆಸೆಂಟ್ ಮಾತೆಯ ಸಂಸ್ಮರಣ ಭಾಷಣ ಮಾಡಿದರು.

ಶಿವಮೊಗ್ಗಾ ಜಿಲ್ಹೆಯಲ್ಲಿ ಗೃಹರಕ್ಷಕದಲ ಪ್ರಾರಂಭಿಸುವ ಬಗ್ಗೆ ಡೆಪ್ಯೂಟಿ ಕಮಿಶನರ ಎಸ್. ಮುನಿನಂಜಪ್ಪ, ಪೋಲೀಸ ಸುಪರಿಂಟೆಂಡೆಂಟ ಕೆ ಕೃಷ್ಣಮೂರ್ತಿ ಇವರು ಅನವಟ್ಟಿ ಸೊರಬಗಳಿಗೆ ಭೆಟ್ಟಿಕೊಟ್ಟರು. ಅನವಟ್ಟಿಯಲ್ಲಿ ೪೦ ಸೊರಬದಲ್ಲಿ ೩೮ ಜನರು ದಲವನ್ನು ಸೇರಿದ್ದಾರೆ. ಈ ವರೆಗೆ ಜಿಲ್ಹೆಯಲ್ಲಿ ೫೬೨ ಜನ ಗೃಹರಕ್ಷಕರು ಕೂಡಿರುವರು.

ಹಿಂದುಸ್ತಾನ

ಮುಂಬಯಿ

ಮುಂಬಯಿ ಪ್ರಾಂತದ ಅರ್ಥಸಚಿವರಾದ ಶ್ರೀ ವೈಕುಂಠಲಾಲರು ತಾ. ೪ ರ ಶಾಸನ ಸಭೆಯಲ್ಲಿ ೧೯೪೮-೪೯ ನೇ ವರ್ಷದ ಬಗ್ಗೆ ೨ ಕೋಟಿ ೩೦ ಲಕ್ಷ ೪೨ ಸಾವಿರ ೬೩೨ ರೂ. ಗಳ ಹೆಚ್ಚಿನ ವೆಚ್ಚದ ಪುರವಣಿ ಪತ್ರಿಕೆ ಮುಂದಿಟ್ಟರು. ಸರಕಾರದ ಪಾನ ನಿರೋಧದ ಯೋಜನೆಯನ್ನು ಯಶಸ್ವಿ ಮಾಡಲು ೨ ಕೋಟಿ ೧೦ ಲಕ್ಷ ರೂ. ಹೆಚ್ಚಿನ ವೆಚ್ಚ ಬರುವದಾಗಿ ತಿಳಿಯುತ್ತದೆ.

ಅಂತಾರಾಷ್ಟ್ರೀಯ ಪಾರ್ಲಿಮೆಂಟರಿ ಪರಿಷತ್ತಿನ ೭ ನೇ ಅಧಿವೇಶನಕ್ಕೆ ಹಿಂದುಸ್ತಾನದ ನಿರೀಕ್ಷಕರಾಗಿ ಶ್ರೀ ರಂಗರಾವ ದಿವಾಕರರ ಜೊತೆಗೆ ರೋಮಕ್ಕೆ ಹೋಗಿದ್ದ ಡಾ. ಬಿ. ವಿ. ಕೇಸಕರರು ತಾ. ೩ ಕ್ಕೆ ರಾತ್ರಿ ಮುಂಬಯಿಗೆ ಬಂದರು.

ಬಂಧಮುಕ್ತರಾದ ಆರ್. ಎಸ್. ಎಸ್. ದ ಕೆಲವು ಸದಸ್ಯರು ಬೇರೆ ಹೆಸರಿನ ಸಂಸ್ಥೆ ಸ್ಥಾಪಿಸಿಕೊಂಡು ಮತ್ತೆ ತಮ್ಮ ಮೊದಲಿನ ಚಟುವಟಿಕೆಗಳನ್ನೇ ಸಾಗಿಸುತ್ತಿದ್ದಾರೆಂದೂ ಆರ್. ಎಸ್. ಎಸ್. ದ ಮೇಲಿನ ನಿರ್ಬಂಧವನ್ನು ತೆಗೆಯಬೇಕೆಂದು ಸುಮಾರು ೭ ಸಾವಿರ ಪತ್ರಗಳು ತಮಗೆ ಬಂದಿವೆಯೆಂದೂ ಮುಂಬೈ ಗೃಹಮಂತ್ರಿ ಮುರಾರಜಿ ದೇಸಾಯರು ತಾ ೪ ರಂದು ವಿಧಿಮಂಡಲದಲ್ಲಿ ಒಂದು ಪ್ರಶ್ನೆಗೆ ಉತ್ತರಕೊಡುತ್ತ ಹೇಳಿದರು.

ಅಹಮ್ಮದಾಬಾದ ಗಿರಣಿಯೊಡೆಯರು ಗಾಂಧಿ ಸ್ಮಾರಕ ನಿಧಿಗೆ ೪೮ ಲಕ್ಷ ರೂಪಾಯಿಗಳ ಕಾಣಿಕೆ ಸಲ್ಲಿಸಿದ್ದಾರೆಂದೂ ಗಿರಣಿಯ ಏಜಂಟರು ೭ ಲಕ್ಷ ರೂ ಸಲ್ಲಿಸಿದ್ದಾರೆಂದೂ ತಿಳಿಯುತ್ತದೆ.

ಮುಂಬಯಿ ಸರಕಾರದವರು ಮೋಟಾರ ಸಾರಿಗೆಯ ರಾಷ್ಟ್ರೀಕರಣ ಮಾಡಿ ಇದೇ ೧ ತಾರೀಖಿನಿಂದ ಪುಣೆ-ಪಂಢರಪೂರ ಮಾರ್ಗ ಮತ್ತು ಅದಕ್ಕೆ ಸಂಬಂಧಿಸಿದ ಇನ್ನೂ ಆರು ಮಾರ್ಗಗಳಲ್ಲಿ ೫೦ ಸರಕಾರೀ ಮೋಟಾರುಗಳನ್ನು ಓಡಾಡಿಸುತ್ತಿದ್ದಾರೆಂದೂ ಈ ವರ್ಷಾಂತ್ಯದಲ್ಲಿ ಸುಮಾರು ೪೦೦ ಮೋಟಾರುಗಳನ್ನು ಹೀಗೆ ಪ್ರಾಂತದಲ್ಲೆಲ್ಲ ಓಡಾಡಿಸುವರೆಂದೂ ತಿಳಿಯುತ್ತದೆ.

ಹಿಂದುಸ್ತಾನ ಒಕ್ಕೂಟ ಮತ್ತು ಅದರಲ್ಲಿ ಸೇರ್ಪಡೆ ಹೊಂದಿದ ಸಂಸ್ಥಾನಗಳಲ್ಲಿ ವಿದೇಶೀಯ ಸಂಘ ಸಂಸ್ಥೆಗಳ ಹಾಗೂ ವ್ಯಕ್ತಿಗಳ ಹೊಣೆ, ಸೊತ್ತು ಎಷ್ಟೆಂದು ತಿಳಿಯಲು ರಿಝರ್ವ ಬ್ಯಾಂಕು ಮಾಹಿತಿ ಕೇಳಿದೆ. ಈ ಅಂಕಿಸಂಖ್ಯೆ ಗೊತ್ತಾದರೆ ಹಿಂದುಸ್ತಾನದಲ್ಲಿ ವಿದೇಶಿಯರು ಎಷ್ಟು ಹಣತೊಡಗಿಸಿದ್ದಾರೆಂಬುದು ತಿಳಿವುದಲ್ಲದೆ ವಿದೇಶಗಳಲ್ಲಿ ಹಿಂದೀಯರು ತೊಡಗಿಸಿದ ಹಣದ ಪ್ರಮಾಣವೂ ತಿಳಿದು ಬರುವದು.

ಮಧ್ಯಪ್ರಾಂತ

ಮಧ್ಯಪ್ರಾಂತ ಶಾಸನ ಸಭೆಯು ತಾನು ನೇಮಿಸಿದ ಒಂದು ಸಮಿತಿಯು ಮುಖಾಂತರ ಹಿಂದುಸ್ತಾನ ಘಟನೆಯ ಕರಡಿಗೆ ಕೆಲವು ತಿದ್ದುಪಡಿ ಕಳಿಸಿದ್ದು ಅವುಗಳಲ್ಲಿ ಭಾಷಾನುಗುಣ ಪ್ರಾಂತ ನಿರ್ಮಾಣವನ್ನು ಮುಂದೂಡಬೇಕೆಂದೂ ದೇವನಾಗರಿ ಲಿಪಿಯುಳ್ಳ ಹಿಂದಿಯೇ ಹಿಂದುಸ್ತಾನದ ಸರಕಾರೀ ಭಾಷೆಯಾಗಬೇಕೆಂದೂ ಸ್ವತಂತ್ರ ಹಿಂದುಸ್ತಾನದ ಘಟನೆಯನ್ನು ಹಿಂದಿಯಲ್ಲಿಯೇ ರಚಿಸಬೇಕೆಂದೂ ಸೂಚಿಸಿದೆ.

ಮದ್ರಾಸ

ಗುಂಟೂರು, ಕೃಷ್ಣಾ, ಪಶ್ಚಿಮ ಹಾಗೂ ಪೂರ್ವ ಗೋದಾವರಿ ಜಿಲ್ಹೆಗಳ ಪೋಲೀಸ ಅಧಿಕಾರಿಗಳೂ ಜಿಲ್ಹಾ ಅಧಿಕಾರಿಗಳೂ ತಾ. ೩ ಕ್ಕೆ ಸಭೆ ಸೇರಿ ಹೈದರಾಬಾದ ಮತ್ತು ಮದ್ರಾಸ ಸೀಮೆಯಲ್ಲಿ ನಡೆದ ಕಮ್ಯುನಿಸ್ಟರ ಉಪಟಳ ತಡೆಯುವ ಬಗ್ಗೆ ಚರ್ಚೆ ಮಾಡಿದರು. ಆಗ ಮದ್ರಾಸದ ಮುಖ್ಯ ಮಂತ್ರಿಗಳೂ ಉಪಸ್ಥಿತರಿದ್ದರು.

ಬಿಹಾರ

ಬಿಹಾರ ಶಾಸನ ಸಭೆಯು ತನ್ನ ಕಾರ್ಯಕಲಾಪಗಳೆಲ್ಲ ಹಿಂದೀ ಭಾಷೆಯಲ್ಲಿ ದೇವನಾಗರೀ ಲಿಪಿಯಲ್ಲಿ ನಡೆಯಬೇಕೆಂದು ತಾ. ೧ ಕ್ಕೆ ನಿರ್ಧರಿಸಿತು.

ಹೊಸದಿಲ್ಲಿ

ರಾಷ್ಟ್ರ ವಿಚ್ಛೇದನೆಯ ಫಲವಾಗಿ ಶಿರೋಮಣಿ ಗುರುದ್ವಾರ ಪ್ರಬಂಧಕ ಮೊದಲಾದ ಶೀಖ ಹಾಗು ಹಿಂದುಗಳ ೧೧೨ ಸಂಘಗಳು ೨೦ ಕೋಟಿ ರೂ. ಕಳೆದುಕೊಂಡಿವೆಯೆಂದು ತಿಳಿದುಬಂದಿದೆ.

ಅ. ಭಾ. ಆಡಳಿತಕ್ಕೆ ಸಂಬಂಧಪಟ್ಟ ಆಯ್ಕೆಯ ಮಂಡಲದ ಸದಸ್ಯತ್ವಕ್ಕೆ ಶ್ರೀ ಅಣ್ಣಾಸಾಹೇಬ ಲಠ್ಠೆಯವರು ರಾಜೀನಾಮೆ ಕೊಟ್ಟಿದ್ದಾರೆಂದು ತಿಳಿಯುತ್ತದೆ.

ದಿಲ್ಲಿಯ ಪಾಲಂ ವಿಮಾನ ನಿಲ್ದಾಣದಲ್ಲಿ ನೆರೆದಿದ್ದ ಅಧಿಕಾರಿಗಳ ಸಭೆಯಲ್ಲಿ ಭಾಷಣ ಮಾಡುತ್ತ ತಾ. ೧ ರಂದು ಸರದಾರ ವಲ್ಲಭಭಾಯಿ ಪಟೇಲರು, ಭದ್ರತಾಮಂಡಲವು ಅಭದ್ರತಾಮಂಡಲವಾಗಿವೆಯೆಂದೂ ಈ ವರೆಗೆ ಒಂದಾದರೂ ಸಮಸ್ಯೆಯನ್ನು ಬಗೆಹರಿಸಿದ ಶ್ರೇಯಸ್ಸು ಅದಕ್ಕೆ ದೊರೆತಿಲ್ಲವೆಂದೂ ಖಂಡತುಂಡವಾಗಿ ಹೇಳಿದರು.

ದಿವಂಗತ ಮೋತೀಲಾಲ ನೆಹರೂರ ಜ್ಞಾಪಕಾರ್ಥವಾಗಿ ಹೊಸದಿಲ್ಲಿಯ ಹೆಸರನ್ನು ಮೋತೀನಗರವೆಂದೂ ಹಿರಿಯೋಲಗದ ಭವನವನ್ನು ಮೋತೀ ಮಂದಿರವೆಂದೂ ಬದಲಿಸಬೇಕಾಗಿ ಹಿರಿಯೋಲದ ಸದಸ್ಯರಾದ ಶ್ರೀ ನಂದಲಾಲರು ಹಿರಿಯೋಲಗದ ಮುಂದಿನ ಅಧಿವೇಶನದಲ್ಲಿ ಗೊತ್ತುವಳಿ ಮಂಡಿಸಲಿರುವರೆಂದು ತಿಳಿಯುತ್ತದೆ.

ಪಶ್ಚಿಮ ಬಂಗಾಲ

ಫೆಡರಲ ಸರ್ವಿಸ ಕಮೀಶನ ಪರವಾಗಿ ಪ್ರತಿ ವರ್ಷ ನಡೆಯುವ ಸಾರ್ವಭೌಮ ಹಿಂದಿ ಹಡಗು ಪಡೆಯ ಎರಡೂ ಬಹಿರಂಗ ಸ್ಪರ್ಧಾ ಪರೀಕ್ಷೆಯಲ್ಲಿ ಪಶ್ಚಿಮ ಬಂಗಾಲದಿಂದ ಉತ್ತೀರ್ಣರಾದ ಮೊದಲಿನ ಮೂರು ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ವರ್ಷಕ್ಕೆ ೧೧೬ ಪೌಂಡು ಶಿಷ್ಯವೃತ್ತಿ ಕೊಡಲು ಪ. ಬಂಗಾಲ ಸರಕಾರವು ನಿರ್ಧರಿಸಿದೆ.

ಹಿಂದುಸ್ತಾನಕ್ಕೆ ರಶಿಯಾ ೫೦ ಸಾವಿರ ಟನ್ ಗೋದಿಯನ್ನು ಕೊಡಲೊಪ್ಪಿದ್ದು ಈಗ ೮ ಸಾವಿರ ಟನ್ ಗೋದಿ ಕಲಕತ್ತೆಯ ಬಂದರಕ್ಕೆ ಬಂದಿದೆ. ಉಳಿದ ಗೋದಿ ಡಿಸೆಂಬರ ಅಂತ್ಯದೊಳಗಾಗಿ ಬರಬಹುದು. ಗೋದಿಗೆ ಬದಲು ಹಿಂದುಸ್ತಾನವು ರಶಿಯಾಕ್ಕೆ ೫೦೦೦ ಟನ್ ಚಹದ ಪುಡಿ ಪೂರೈಸುವದು.

ಪೂರ್ವ ಪಂಜಾಬ

ಪೂರ್ವ ಪಂಜಾಬ ಸರಕಾರವು ಹರಿಜನೋದ್ಧಾರಕ್ಕಾಗಿ ೨೩ ಲಕ್ಷ ರೂ. ತೆಗೆದಿಟ್ಟಿದ್ದು ಮೊದಲು ಹರಿಜನ ಬಾಲಕರಿಗೆ ಪ್ರಾಥಮಿಕ ಶಿಕ್ಷಣದಿಂದ ಉಚ್ಚ ಶಿಕ್ಷಣದ ಎಂ. ಎ. ಆಗುವವರೆಗೆ ಶಿಷ್ಯವೇತನ ಕೊಡತಕ್ಕದ್ದೆಂದು ನಿರ್ಧರಿಸಿದೆ. ಇದರ ಲಾಭವು ಪ್ರಾರಂಭದಲ್ಲಿ ೧೫೦೦ ವಿದ್ಯಾರ್ಥಿಗಳಿಗೆ ದೊರೆಯುವದೆಂದು ತಿಳಿಯುತ್ತದೆ.

ಅಮೃತಸರದಿಂದ ೨೫ ಮೈಲು ಅಂತರದ ಪೇಲಿರುವ ತಾಥಿ ಎಂಬ ಹಳ್ಳಿಯ ಹತ್ತರ ತಾ. ೨೯ ರಂದು ಹಳ್ಳಿಯ ಹೆಣ್ಣುಮಕ್ಕಳು ಹೊಲದಲ್ಲಿ ಹತ್ತಿ ಬಿಡಿಸುತ್ತಿರುವಾಗ ಪಾಕಿಸ್ತಾನ ಪೋಲೀಸರು ಅವರನ್ನು ಅಪಹರಿಸಲು ಬಂದದ್ದರಿಂದ ಹಿಂದುಸ್ತಾನದ ಗಸ್ತಿ ಪೋಲೀಸರು ಗುಂಡು ಹಾಕಿ ೧೨ ಜನ ಪಾಕಿಸ್ತಾನ ಪೋಲೀಸರನ್ನು ಕೊಂದರೆಂದು ತಿಳಿಯುತ್ತದೆ.

ಹಿಂದೀ ಸಂಸ್ಥಾನ

ಸೌರಾಷ್ಟ್ರ ಸರಕಾರದವರು ೬೦ ಸಾವಿರ ಎಕರೆ ಭೂಮಿಗೆ ನೀರು ಒದಗಿಸಲು ೫ ನೀರಾವರಿ ಯೋಜನೆ ಸಿದ್ಧಪಡಿಸಿದ್ದಾರೆಂದೂ ಈ ಬಗ್ಗೆ ಮಾರ್ಗದರ್ಶನ ಮಾಡಲು ಸರ್ ವಿಶ್ವೇಶ್ವರಅಯ್ಯನವರನ್ನು ಕೇಳಿಕೊಂಡಿದ್ದಾರೆಂದೂ ತಿಳಿಯುತ್ತದೆ.

ರಾಜಕೋಟದಲ್ಲಿ ಗಾಂಧೀ ಜಯಂತಿಯು ಮುಂಬಯಿ ಮುಖ್ಯ ಮಂತ್ರಿಗಳಾದ ಖೇರರ ಅಧ್ಯಕ್ಷತೆಯಲ್ಲಿ ನೆರವೇರಿತು. ಆಗ ವಿಧಾಯಕ ಕಾರ್ಯಕ್ಕಾಗಿ ಶ್ರೀ ಖೇರರಿಗೆ ೯೯ ಸಾವಿರ ರೂ. ಗಳ ಹಮ್ಮಿಣಿ ಅರ್ಪಿಸಲಾಯಿತು.

ಪಾಕಿಸ್ತಾನ

ಪೂರ್ವ ಪಾಕಿಸ್ತಾನದಲ್ಲಿಯ ಸಿರಾಜಗಂಜದಲ್ಲಿ ತಾ. ೨೯ ರಂದು ಎಲ್ಲ ಹಿಂದೂ ವ್ಯಾಪಾರಿಗಳೂ ಯಾವ ಕಾರಣವೂ ಇಲ್ಲದೆ ಬಂಧಿಸಲ್ಪಟ್ಟಿದ್ದಾರೆಂದೂ ಇದರಿಂದ ಪಾಕಿಸ್ತಾನದಲ್ಲಿದ್ದ ಹಿಂದೂ ವ್ಯಾಪಾರಿ ವರ್ಗಕ್ಕೆ ಬಹಳ ವಿವಂಚನೆಯಾಗಿದೆಯೆಂದೂ ಕಲಕತ್ತೆಯ ಸಣಬು ವ್ಯಾಪಾರಿ ಸಂಘದವರು ಪ್ರಕಟನೆ ಹೊರಡಿಸಿದ್ದಾರೆ.

ಗಾಂಧಿ ಜಯಂತಿ

ದಿಲ್ಲಿಯಲ್ಲಿ ಮ. ಗಾಂಧಿಯವರನ್ನು ದಹನ ಮಾಡಿದ ರಾಜಘಾಟದಲ್ಲಿ ಗಾಂಧೀ ಜಯಂತಿಯ ನಿಮಿತ್ತ ೪೮ ತಾಸುಗಳ ಅಖಂಡ ಸೂತ್ರಯಜ್ಞವೂ ಗೀತಾ, ಉಪನಿಷತ್, ಕುರಾನ ಮೊದಲಾದ ಧರ್ಮ ಗ್ರಂಥಗಳೂ ಪಠಣವೂ ಪ್ರಾರ್ಥನೆಯೂ ನಡೆದಿತು.

ಮ. ಗಾಂಧೀಜಿಯ ಜಯಂತಿಯ ಬಗ್ಗೆ ದಿಲ್ಲಿಯ ಹರಿಜನ ಬಾಲಕರ ಉದ್ಯೋಗ ಶಾಲೆಯಲ್ಲಿ ಗ. ಜ. ಶ್ರೀ. ರಾಜಗೋಪಾಲಾಚಾರ್ಯರು ಭಾಷಣ ಮಾಡುತ್ತ ಮಹಾತ್ಮರ ನಿಧನದ ಬಗ್ಗೆ ಶೋಕ ಸಾಕೆಂದೂ ಅವರ ತತ್ವಾಚರಣೆಯೇ ಅವರ ಸಜೀವ ಸ್ಮಾರಕವೆಂದೂ ಹೇಳಿದರು. ಅವರು ಇನ್ನೊಂದು ಸಂದರ್ಭದಲ್ಲಿ, ಭಕ್ತಿಯ ಭರದಲ್ಲಿ ನಾವು ಮಹಾತ್ಮರನ್ನು ದೇವರ ಸ್ಥಾನಕ್ಕೆ ಏರಿಸಿದರೆ ಅವರ ಉಪದೇಶಗಳಿಗೆ ಎರವಾಗಬೇಕಾದೀತೆಂದೂ ಮಹಾತ್ಮರ ನೀತಿಯನ್ನು ಅನುಸರಿಸಿದರೆ ಜಗತ್ತಿನಲ್ಲಿ ತಿಕ್ಕಾಟಗಳೇ ಸಂಭವಿಸುವದಿಲ್ಲವೆಂದೂ ಹೇಳಿದರು.

ದಿಲ್ಲಿಯಲ್ಲಿ ಗಾಂಧಿ ಜಯಂತಿಯ ಬಗ್ಗೆ ನೆರೆದ ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತ ಹಿಂದುಸ್ತಾನದ ಮುಖ್ಯ ಮಂತ್ರಿ ಪಂ. ಜವಾಹರಲಾಲರು, ಇನ್ನೊಂದು ಜಾಗತಿಕ ಯುದ್ಧವು ಇಷ್ಟರಲ್ಲಿ ನಡೆಯಲಾರದೆಂದೂ ದೊಡ್ಡ ರಾಷ್ಟ್ರಗಳು ಯುದ್ಧಕ್ಕೆ ಸಿದ್ಧವಾಗಿಲ್ಲವೆಂದೂ ಇದು ತಮ್ಮ ಖಂಡಿತ ಮತವೆಂದೂ ಹೇಳಿದರಲ್ಲದೆ ಗಾಂಧೀಜಿ ತೋರಿದ ದಾರಿಯಲ್ಲಿ ಜಗತ್ತು ನಡೆದರೆ ಸಾರ್ವತ್ರಿಕ ಶಾಂತಿಯು ತಾನಾಗಿ ಲಭಿಸುವದೆಂದು ಹೇಳಿದರು.

ಮುಂಬಯಿ ನಗರದ ಬೇರೆ ಬೇರೆ ಭಾಗಗಳಲ್ಲಿ ಗಾಂಧೀ ಜಯಂತಿಯ ನಿಮಿತ್ತ ಧ್ವಜವಂದನಾದಿ ವಿವಿಧ ಕಾರ್ಯಕ್ರಮ ನಡೆದವು. ಕಾಂಗ್ರೆಸ ಭವನದಲ್ಲಿ ಪ್ರಾಂ. ಕಾಂ. ಸಮಿತಿಯ ಅಧ್ಯಕ್ಷರಾದ ಶ್ರೀ. ಎಸ್. ಕೆ. ಪಾಟೀಲರು ಧ್ವಜಾರೋಹಣ ಮಾಡಿದರು. ಮುಖ್ಯಮಂತ್ರಿ ಖೇರರು ಅಂದು ಆಕಾಶ ವಾಣಿಯಲ್ಲಿ ಮಾತನಾಡುತ್ತ ಮಹಾತ್ಮರ ಜೀವನವು ನಮಗಿತ್ತ ಚೈತನ್ಯವನ್ನು ಯಾರೂ ಅಪಹರಿಸಲಾರರೆಂದೂ ರಾಷ್ಟ್ರದ ಪುನರ್ಘಟನೆಯಲ್ಲಿ ಅವರ ಆದೇಶದಂತೆ ವರ್ತಿಸೋಣವೆಂದೂ ಹೇಳಿದರು.

ಮಹಾತ್ಮಾ ಗಾಂಧಿಯವರ ೮೦ ವರ್ಷದ ವೃದ್ಧ ಸೋದರಿಯಾದ ಶ್ರೀಮತಿ ರಾಲಿಯಾಬೇನರು ಆಕಾಶ ವಾಣಿಯಲ್ಲಿ ಮಾತನಾಡುತ್ತ ಮಹಾತ್ಮರ ಬಾಲ್ಯ ಜೀವನವನ್ನು ವಿವರಿಸಿದರು.

ಮಹಾತ್ಮರು ೮ ವರ್ಷಗಳ ವರೆಗಿದ್ದು ಸುತ್ತುಮುತ್ತಲಿನ ಹಳ್ಳಿಗರಿಗೆ ಸೇವೆ ಸಲ್ಲಿಸಿದ ಸೇವಾಗ್ರಾಮದಲ್ಲಿಯೂ ಗಾಂಧೀ ಜಯಂತಿಯು ಅತ್ಯಂತ ಶ್ರದ್ಧೆಯಿಂದ ವಿಶೇಷ ಪ್ರಾರ್ಥನೆಯ ಮೂಲಕ ಜರಗಿತು. ಆಶ್ರಮ ವಾಸಿಗಳು ಹಳ್ಳಿಗರು ಮೌನವಾಗಿ ತಮ್ಮ ಗೌರವ ಅರ್ಪಿಸಿದರು.

ಸಂಯುಕ್ತ ಪ್ರಾಂತದ ಗವರ್ನರರಾದ ಶ್ರೀಮತಿ ಸರೋಜಿನಿ ದೇವಿಯವರು ಒಂದು ಸಂದೇಶ ಕೊಟ್ಟು, ಹೋದವರ್ಷ ಈ ಜಯಂತಿಯನ್ನಾಚರಿಸಿದಾಗ ಮಹಾತ್ಮರು ನಮ್ಮ ಮಧ್ಯದಲ್ಲಿದ್ದು ನಮಗೆಲ್ಲ ಧೈರ್ಯೋತ್ಸಾಹ ನೀಡಿದರು. ಆದರೆ ನಾವಿಂದು ಆ ಮಹಾಗುರುವಿನ ಪ್ರತ್ಯಕ್ಷ ಮಾರ್ಗದರ್ಶನಕ್ಕೆ ಎರವಾಗಿದ್ದರೂ ಅವರು ತೋರಿದ ಸತ್ಯ- ಪ್ರೀತಿ ಅಹಿಂಸೆಯ ತತ್ವಗಳನ್ನು ಕಾರ್ಯರೂಪಕ್ಕಿಳಿಸಿ ಧನ್ಯರಾಗೋಣ ಎಂದು ಮೊದಲಾಗಿ ಹೇಳಿದ್ದಾರೆ.

ಕಳ್ಳ ಪ್ರವಾಸಿಗಳಿಂದ ೧ ಲಕ್ಷ ರೂ.

ಬಂಗಾಲ ನಾಗಪುರ ರೇಲ್ವೆಯಲ್ಲಿ ಜುಲೈ ತಿಂಗಳೊಂದರಲ್ಲಿಯೆ ತಿಕೀಟಿಲ್ಲದೆ ಕಳ್ಳತನದಿಂದ ಪ್ರವಾಸಮಾಡಿದವರಿಂದ ಸುಮಾರು ೧ ಲಕ್ಷ ೪೨ ಸಾವಿರ ರೂ.ಯಷ್ಟು ಹಣ ವಸೂಲಮಾಡಲಾಗಿದೆ. ೩೦೮ ಜನ ಕಳ್ಳ ಪ್ರವಾಸಿಕರನ್ನು ಹಿಡಿದು ಜಟ್ಲೆ ಹಾಕಲಾಗಿತ್ತು. ಮ್ಯಾಜಿಸ್ಟ್ರೇಟರು ಅವರಿಗೆ ತಿಕೀಟಿನ ಹಣ ಕೊಡಲು ಇಲ್ಲವೆ ಕಾರಾವಾಸ ಭೋಗಿಸಲು ಆಜ್ಞೆ ವಿಧಿಸಿದ್ದರು.

ಶ್ರೀ. ನರಿಮಾನರ ನಿಧನ

ಮುಂಬಯಿ ಕಾರ್ಪೊರೇಶನದಲ್ಲಿ ಕಾಂಗ್ರೆಸ ಪಕ್ಷದ ಧುರೀಣರೂ ಸುಪ್ರಸಿದ್ಧ ವಕೀಲರೂ ಆದ ಶ್ರೀ. ಕೆ. ಎಫ್. ನರಿಮಾನರು ದಿಲ್ಲಿಯ ಒಂದು ಹಾಟೆಲಿನಲ್ಲಿ ತಾ. ೪ ರಂದು ಸಂಜೆ ೬ ಗಂಟೆಗೆ ಹೃದಯವಿಕಾರದಿಂದ ನಿಧನಹೊಂದಿದರೆಂದು ತಿಳಿಸಲು ವಿಷಾದವಾಗುತ್ತದೆ. ಶ್ರೀ. ನರಿಮಾನರು ತಾ. ೩ ಕ್ಕೆ ದಿಲ್ಲಿಗೆ ಹೋಗಿದ್ದರು.

ಇವರು ಅನೇಕ ವರ್ಷ ಮುಂಬಯಿ ಪ್ರಾಂತಿಕ ಕಾಂಗ್ರೆಸ ಕಮೀಟಿಯ ಅಧ್ಯಕ್ಷರೂ ಕೆಲ ವರ್ಷ ಎ. ಆಯ್. ಸಿ. ಸಿ. ಹಾಗು ಕಾಂಗ್ರೆಸ ವರ್ಕಿಂಗ ಕಮೀಟಿಯ ಸದಸ್ಯರೂ ಇದ್ದರು. ೧೯೩೪ ರಲ್ಲಿ ಜರುಗಿದ ಕಾಂಗ್ರೆಸ ಅಧಿವೇಶನದ ಸ್ವಾಗತಾಧ್ಯಕ್ಷರಾಗಿದ್ದರು. ಮುಂಬಯಿ ವಿಧಿಮಂಡಲದಲ್ಲಿ ಹಿಂದಕ್ಕೆ ಇವರು ಸ್ವರಾಜ್ಯ ಪಕ್ಷದ ಧುರೀಣರಾಗಿದ್ದರು. ಮುಂಬಯಿ ಕಾರ್ಪೋರೇಶನದ ಸಭಾಸದರೂ ೧೯೩೫-೩೬ ರಲ್ಲಿ ಅದರ ಅಧ್ಯಕ್ಷರೂ ಆಗಿದ್ದರು. ಕಾಯದೇ ಭಂಗ ಚಳವಳಿಯಲ್ಲಿ ೪ ಸಲ ಕಾರಾವಾಸ ಭೋಗಿಸಿದರು. ಮರಣ ಕಾಲಕ್ಕೆ ಇವರಿಗೆ ೬೦ ವರ್ಷಗಳಾಗಿದ್ದವು. ನರಿಮಾನರ ನಿಧನದಿಂದ ಓರ್ವ ಪ್ರಮುಖ ಕಾಂಗ್ರೆಸಿಗರೂ ನುರಿತ ಸಾರ್ವಜನಿಕ ಕಾರ್ಯಕರ್ತರೂ ಇಲ್ಲದಂತಾಯಿತು. ಪರಮಾತ್ಮನು ಮೃತರ ಆತ್ಮಕ್ಕೆ ಶಾಂತಿಯನ್ನು ನೀಡಲಿ.

ಸಿಂಧದ ಗವರ್ನರರ ಮರಣ

ಸಿಂಧದ ಗವರ್ನರರಾದ ಶೇಖ ಗುಲಾಮ ಹುಸೇನ ಹಿದಾಯತುಲ್ಲಾರು ತಾ. ೪ ರಂದು ಸಂಜೆ ೪ ಗಂಟೆಗೆ ಕರಾಚಿಯಲ್ಲಿ ಮರಣಹೊಂದಿದರೆಂದು ತಿಳಿಸಲು ವಿಷಾದವಾಗುತ್ತದೆ. ಕೆಲವು ದಿನಗಳಿಂದ ಇವರು ಅಸ್ವಸ್ಥರಿದ್ದರು. ಇವರು ೧೯೧೨ ರಿಂದ ೨೦ ರ ವರೆಗೆ ಮುಂಬಯಿ ವಿಧಿ ಮಂಡಳದ ಸದಸ್ಯರೂ ೧೯೨೧ ರಿಂದ ೨೮ ರ ವರೆಗೆ ಮುಂಬಯಿ ಸರಕಾರದ ಕಾರ್ಯಕಾರಿ ಮಂಡಳದ ಸದಸ್ಯರೂ ಆಗಿದ್ದರು. ದುಂಡುಮೇಜಿನ ಪರಿಷತ್ತಿಗೆ ಎರಡು ಸಲ ಇವರು ಹಿಂದುಸ್ತಾನ ಸರಕಾರದ ಪ್ರತಿನಿಧಿಯಾಗಿ ಹೋಗಿದ್ದರು. ೧೯೩೬ ರಲ್ಲಿ ಸಿಂಧವು ಮುಂಬಯಿಯಿಂದ ಪ್ರತ್ಯೇಕವಾದ ಮೇಲೆ ಮುಂದೆ ಸಿಂಧದ ಮುಖ್ಯ ಮಂತ್ರಿಗಳಾದರು. ಪಾಕಿಸ್ತಾನ ನಿರ್ಮಾಣದ ನಂತರ ಸಿಂಧದ ಮೊದಲನೆಯ ಗವರ್ನರರಾದರು. ಮರಣ ಕಾಲಕ್ಕೆ ಇವರಿಗೆ ೬೯ ವರ್ಷಗಳಾಗಿದ್ದವು. ಅಲ್ಲಾನು ಇವರ ಆತ್ಮಕ್ಕೆ ಶಾಂತಿ ಕೊಡಲಿ.

ಜವಳಿ ಸಲಹೆ ಸಮಿತಿ

ಪರಿಷತ್ತಿನ ಗೊತ್ತುವಳಿಗಳು

ಜವಳಿ ಸಲಹೆ ಸಮಿತಿಯ ಹಾಗೂ ಪ್ರಾಂತಿಕ ಮತ್ತು ಸಂಸ್ಥಾನಗಳ ಪ್ರತಿನಿಧಿಗಳ ಪರಿಷತ್ತಿನಲ್ಲಿ ಸ್ವೀಕೃತವಾದ ಗೊತ್ತುವಳಿಗಳನ್ನು ಹಿಂದುಸ್ತಾನ ಸರಕಾರದ ಉದ್ಯೋಗ ಮತ್ತು ಪೂರೈಕೆ ಮಂತ್ರಿಗಳಾದ ಡಾ. ಶ್ಯಾಮಪ್ರಸಾದ ಮುಕರ್ಜಿಯವರು ಹೀಗೆ ವಿವರಿಸಿ ಹೇಳಿದರು.

(೧) ಕೋಟ್ಯಂತರ ಜನರಿಗೆ ತಾಳಿಕೆಯ ಬಟ್ಟೆಯ ಉತ್ಪತ್ತಿ ಹೆಚ್ಚಬೇಕು. (೨) ವಿತರಣವು ಸರಿಯಾಗಿ ಆಗಲು, ಮತ್ತು ಬಟ್ಟೆ ಕಳಪೇಟೆಗೆ ಹೋಗದಿರಲು ಸರಕಾರವು ಐದು ಪ್ರಾದೇಶಿಕ ನಿರ್ದೇಶಕರ ಕಚೇರಿಗಳನ್ನು ಸ್ಥಾಪಿಸಬೇಕು. ಅವರಿಗೆ ನೆರವಾಗಲು ಕೆಲ ಅಧಿಕಾರಿಗಳಿರಬೇಕು. (೩) ಕೈಮಗ್ಗದ ಬಟ್ಟೆಗೆ ನಿಯಂತ್ರಣವಿಲ್ಲ. ಆದರೆ ಪ್ರಾಂತಕ್ಕೆ ಬಟ್ಟೆಯ ಸೀದಾ ಕೊಡುವಾಗ ಅಲ್ಲಿ ಹುಟ್ಟುವ ಕೈಮಗ್ಗದ ಬಟ್ಟೆಯ ಹುಟ್ಟುವಳಿಯನ್ನು ಗಣನೆಗೆ ತರಲಾಗುವದು. (೪) ಈಗ ಸರಕಾರವು ಆರಳೆಯ ಪರಮಾವಧಿ ಮತ್ತು ಕನಿಷ್ಠ ಬೆಲೆಯನ್ನು ನಿರ್ಧರಿಸಿದ್ದು ಅದರ ಪುನರ್ವಿಮರ್ಶೆ ಮಾಡಲಾಗುವದಿಲ್ಲ. ಮುಂದಿನ ವರ್ಷದ ಪರಿಸ್ಥಿತಿ ನೋಡಿ ಆಗ ಈ ಬಗ್ಗೆ ಹೊಸವಾಗಿ ವಿಚಾರಿಸಬಹುದು. (೫) ಜವಳಿ ನಿಯಂತ್ರಣದ ಮುಖ್ಯಾಧಿಕಾರಗಳೆಲ್ಲ ಕೇಂದ್ರ ಸರಕಾರದ ಕಡೆಗೆ ಇರುವವು. (೬) ಪ್ರತಿ ಪ್ರಾಂತವು ತನ್ನ ಬಟ್ಟೆಯ ಸೀದಾ ಪ್ರತಿ ತಿಂಗಳದ ೧೦ ನೇ ತಾ. ನೊಳಗೆ ಸ್ವೀಕರಿಸಬೇಕು. ತಪ್ಪಿದಲ್ಲಿ ಅದನ್ನು ಅಗತ್ಯವಿದ್ದ ಉಳಿದ ಪ್ರಾಂತಗಳಿಗೆ ಹಂಚಿಬಿಡಲಾಗುವದು. ಈ ತೀರ್ಮಾನಗಳು ಶಕ್ಯವಿದ್ದಷ್ಟು ಬೇಗ ಜಾರಿಯಲ್ಲಿ ಬರುವವು.

ನಾರದ ಭವಿಷ್ಯ

ಜ್ಯೋತಿಷಿ— ಕೃಷ್ಣಶಾಸ್ತ್ರಿ ಭಿಡೆ ಭವಿಷ್ಯಕಥನ ಅಧೀನ ಖಡೇಬಝಾರ, ಬೆಳಗಾವಿ

ಅಕ್ಟೋಬರ ೧೧ ರಿಂದ ೧೭ ರ ವರೆಗೆ

ಮೇಷ

ಪ್ರಕೃತಿಗೆ ಬಹಳ ಕ್ಲೇಶ. ಸ್ತ್ರೀಸುಖ ಉತ್ತಮ. ಆದರೆ ಉಳಿದ ವಿಷಯುಗಳಲ್ಲಿ ಪ್ರಾಪಂಚಿಕ ಸುಖ ಮಧ್ಯಮ. ಮಕ್ಕಳು ಕೆಲ ವಿಪರೀತ ಕೆಲಸಗಳನ್ನು ಮಾಡುವರು. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಬಹಳ ಉತ್ತಮ. ಆದರೆ ಆ ಮಾನದಿಂದ ಪ್ರತಿಷ್ಠೆ ಕಡಮೆ. ಸ್ವಲ್ಪ ಅವಚಿತ ಲಾಭದ ಸಂಭವ. ಸ್ಥಾವರದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಯಶಸ್ಸು. ಸುಜ್ಞ ಜನರ ಭೆಟ್ಟಿ ಮತ್ತು ಸಹ ವಾಸ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಅಶ್ವಿನಿಯ ೪ ನೇ ಮತ್ತು ಭರಣಿಯ ಮೊದಲನೇ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೧೧, ೧೨, ೧೩, ೧೪ ಅನುಕೂಲ.

ವೃಷಭ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಅನುಕೂಲ. ಆದರೆ ಪ್ರಾಪಂಚಿಕ ಸುಖದಲ್ಲಿ ಬಹಳ ವಿರಸ. ಸ್ಥಾವರದಲ್ಲಿ ಕೆಲ ಅನುಕೂಲವಿದ್ದರೆ ಕೆಲವು ಪ್ರತಿಕೂಲ. ಉದ್ಯೋಗದಲ್ಲಿ ಪ್ರಗತಿ ಕಡಮೆ. ಆದರೆ ಪ್ರತಿಷ್ಠೆ ಮತ್ತು ಲಾಭ ಅನುಕೂಲ. ಅವಚಿತ ಲಾಭದ ಸಂಭವ. ವಾದ ದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಆದರೆ ಶತ್ರುಗಳ ಯಾವದೊಂದು ಪೇಚಿಗೆ ಮೋಸ ಹೋಗುವ ಸಂಭವ. ಮಿತ್ರರಲ್ಲಿ ಮಂಗಳಪ್ರದ ಸಂಗತಿಗಳು. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನುಕೂಲ. ಕೃತ್ತಿಕೆಯ ೪ ನೇ ಮತ್ತು ರೋಹಿಣಿಯ ಮೊದಲನೆ ೩ ಚರಣಗಳಿಗೆ ತೊಂದರೆಯಿಂದ ಯಶಸ್ಸು. ತಾ. ೧೪, ೧೫, ೧೬ ಅನುಕೂಲ.

ಮಿಥುನ

ಎಲ್ಲರ ಪ್ರಕೃತಿ ಉತ್ತಮ. ವೃದ್ಧರೊಡನೆ ಬಹಳ ಮತಭೇದ. ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಬಹಳ ಉತ್ತಮ. ಉದ್ಯೋಗದಲ್ಲಿ ಒಳ್ಳೆ ಪ್ರಗತಿ; ಪ್ರತಿಷ್ಠೆಯಲ್ಲಿ ಉತ್ಕರ್ಷ. ಆದರೆ ಲಾಭ ಕಡಮೆ. ತದ್ವಿರುದ್ಧ ತ್ರಾಹಿತ್ರಾಹಿ ಎನಿಸುವಷ್ಟು ವೆಚ್ಚ. ಮಿತ್ರರಲ್ಲಿ ವಿರೋಧ. ಆದರೆ ಶತ್ರುಗಳು ಬಹಳ ಹತಾಶರಾಗುವಂತಹ ಕೆಲ ಸ್ವಕೃತ ಮತ್ತು ಕೆಲ ಪರಕೃತ ಘಟನೆಗಳು. ಸ್ಥಾವರದಲ್ಲಿ ಹೆಚ್ಚಳ. ಅನಾಯಾಸವಾಗಿ ವಾಹನಸುಖದ ಯೋಗ. ಪ್ರವಾಸಾದಿ ಕೆಲಸ ಬಹಳ ಮನಸ್ಸಿನಂತೆ. ಆದರೆ ಮೃಗಾದ ೪ ನೇ ಮತ್ತು ಆರಿದ್ರಾದ ಮೊದಲನೇ ೩ ಚರಣಗಳಿಗೆ ತೊಂದರೆಯಿಂದಲೇ ಯಶಸ್ಸು. ತಾ. ೧೩, ೧೪, ೧೫ ಮತ್ತು ೧೭ ಅನುಕೂಲ.

ಕರ್ಕ

ಪ್ರಕೃತಿ ಉತ್ತಮ ಆದರೆ ಹೆಂಡತಿ ಮತ್ತು ಮಕ್ಕಳದು ಸ್ವಲ್ಪ ಕೆಡುವದು ಪ್ರಿಯ ಮತ್ತು ಅಪ್ರಿಯರಾದ ಅತಿಥಿಗಳು ಒಮ್ಮೆಲೇ ಬರುವರು ಮತ್ತು ಅವರ ಸಹವಾಸ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಅನುಕೂಲ. ಆದರೆ ಬಗೆಬಗೆಯ ವೆಚ್ಚಕ್ಕಾಗಿ ಕೈಯೂರಿಕೊಂಡು ಕೂಡುವ ಸರತಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳ ಜೋರು ಹೆಚ್ಚು. ಮಿತ್ರಸುಖ ಅನುಕೂಲ. ಪರೋಪಕಾರದ ಕೆಲ ಕೃತ್ಯಗಳು. ಹಳೆಯ ನೋಕರರಲ್ಲಿ ಒಬ್ಬ ನೋಕರಿ ಬಿಟ್ಟು ಹೋಗುವ ಸಂಭವ. ಪ್ರವಾಸದಲ್ಲಿ ತೊಂದರೆ. ಪತ್ರವ್ಯವಹಾರ ತೊಡಕಿನದು. ಆದರೆ ಭೆಟ್ಟಿ ಅನುಕೂಲ. ಪುಷ್ಯದ ೪ ನೆ ಮತ್ತು ಅಶ್ಲೇಷಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೧೧, ೧೨, ೧೬, ೧೭ ಅನುಕೂಲ.

ಸಿಂಹ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಬಹಳ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಸ್ಥಾವರದಲ್ಲಿ ಹೆಚ್ಚಳ. ಆದರೆ ಕಳವು ಇಲ್ಲವೆ ಕೊಳ್ಳಿಯಿಂದ ಸ್ವಲ್ಪ ಹಾನಿಯಾಗುವ ಸಂಭವ. ಮಿತ್ರ ಸುಖ ಅನುಕೂಲ, ಒಳ್ಳೇ ಕೀರ್ತಿಕರವಾದ ಕೆಲವೊಂದು ಧರ್ಮಕೃತ್ಯ ಮಾಡಲ್ಪಡುವ ಯೋಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಪ್ರವಾಸ ತೊಂದರೆಯದು. ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ ಮಘಾದ ೪ ನೇ ಮತ್ತು ಪೂರ್ವಾದ ಮೊದಲನೇ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೧೩, ೧೪, ೧೫ ಅನುಕೂಲ.

ಕನ್ಯಾ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಅನುಕೂಲ. ಆದರೆ ಯಾರೊಬ್ಬ ಆಪ್ತಸ್ತ್ರೀಯಿಂದ ಬಹಳ ತೊಂದರೆ ಮತ್ತು ಶತ್ರುತ್ವ. ಸ್ಥಾವರದಲ್ಲಿ ಹೆಚ್ಚಳ. ಮಕ್ಕಳಿಂದ ತೊಂದರೆಯ ವರ್ತನ. ಉದ್ಯೋಗದಲ್ಲಿ ಪ್ರಗತಿ ಕಡಮೆ. ಆದರೆ ಪ್ರತಿಷ್ಠೆ ಮತ್ತು ಲಾಭ ಅನುಕೂಲ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಡುವದು. ವಿರೋಧಿಗಳನ್ನು ತೊಂದರೆಗೀಡು ಮಾಡುವ ಈರ್ಷೆಗಾಗಿ ಬಹಳ ವೆಚ್ಚ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಉತ್ತಮ. ಉತ್ತರಾದ ೪ ನೇ ಮತ್ತು ಹಸ್ತಾದ ಮೊದಲನೆ ೩ ಚರಣಗಳಿಗೆ ತೊಂದರೆ ಹೆಚ್ಚು. ತಾ. ೧೧, ೧೨, ೧೬, ೧೭ ಅನುಕೂಲ.

ತುಲಾ

ಪ್ರಕೃತಿ ಉತ್ತಮ. ಹೆಂಡತಿ ಗೂಡ ಸ್ವಲ್ಪ ಮತಭೇದ ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ಬಂಧು ವರ್ಗದವರಲ್ಲಿ ಉತ್ಕರ್ಷ ಮತ್ತು ಅವರ ಪ್ರೇಮ ಮತ್ತು ಸಹಾಯ ತುಂಬ. ಉದ್ಯೋಗದಲ್ಲಿ ಒಳ್ಳೆ ಪ್ರಗತಿ ಉತ್ತಮ ಪ್ರತಿಷ್ಠೆ ಮತ್ತು ತುಂಬ ಲಾಭ. ಆದರೆ ವೆಚ್ಚವೂ ವಿಪರೀತ ಸ್ಥಾವರದಲ್ಲಿ ಹೊಸ ಸುಧಾರಣೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ, ಆದರೆ ಶತ್ರುಗಳು ವಿವಿಧ ಮಾರ್ಗಗಳಿಂದ ನಿಮ್ಮನ್ನು ಶ್ರಮಿಸುವ ಯತ್ನವೂ ಜೋರಿನಲ್ಲಿ. ಮಿತ್ರರೂ ಬಹಳ ವೆಚ್ಚದಲ್ಲಿ ನಿಮ್ಮನ್ನು ಕೆಡಹುವ ಪ್ರಯತ್ನ ಮಾಡುವರು. ಪ್ರವಾಸಾದಿ ಕೆಲಸ ಹಿತದ್ದು ಚಿತ್ರಾದ ೪ ನೆ ಮತ್ತು ಸ್ವಾತಿಯ ಮೊದಲನೆ ೩ ಚರಣಗಳಿಗೆ ತೊಂದರೆ ಹೆಚ್ಚು. ತಾ. ೧೩, ೧೪, ೧೫ ಅನುಕೂಲ.

ವೃಶ್ಚಿಕ

ಪ್ರಕೃತಿ ಹೆಂಡತಿ ಮಕ್ಕಳು ಮೊದಲಾದ ಎಲ್ಲ ಬಗೆಯ ಪ್ರಾಪಂಚಿಕ ಸುಖ ಮನಸ್ಸಿನಂತೆ. ಆಯಾ ಕೆಲಸಗಳಲ್ಲಿ ಎರಡನೆಯವರ ಮೇಲೆ ಒಳ್ಳೆ ವರ್ಚಸ್ಸು. ಉದ್ಯೋಗದಲ್ಲಿ ಪ್ರಗತಿ, ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಆದರೆ ಮನೆಯಲ್ಲಿ [illegible]. ಪ್ರವಾಸ ಮತ್ತು ಭೆಟ್ಟಿ ಪತ್ರವ್ಯವಹಾರಕ್ಕಿಂತ ಅನುಕೂಲ. ಅನುರಾಧೆಯ ೪ ನೇ ಮತ್ತು ಜೇಷ್ಠಾದ ಮೊದಲನೇ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೧೧, ೧೨, ೧೬, ೧೭ ಅನುಕೂಲ.

ಧನು

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಉತ್ತಮ. ಆದರೆ ಮಕ್ಕಳಿಗೆ ಸ್ವಲ್ಪ ಕ್ಲೇಶ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ಉದ್ಯೋಗದಲ್ಲಿ ಪ್ರಗತಿ, ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಆದರೆ ವೆಚ್ಚ ಸಹಿತ ಬಹಳ ಮತ್ತು ನಿರರ್ಥಕ. ದೊಡ್ಡ ಜನರ ಭೆಟ್ಟಿಯ ಯೋಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಆದರೆ ವೆಚ್ಚ ಮತ್ತು ತೊಂದರೆಯೂ ಬಹಳ. ಪ್ರವಾಸಾದಿ ಕೆಲಸ ಹಿತಕರ. ಮೂಲಾದ ೪ ನೇ ಮತ್ತು ಪೂರ್ವಾಷಾಢಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೧೧, ೧೨, ೧೩, ೧೪ ಅನುಕೂಲ.

ಮಕರ

ಪ್ರಕೃತಿ ಸಾಧಾರಣವೇ ಮತ್ತು ಕುಪಥ್ಯವನ್ನು ಬೇಕಂತಲೆ ಮಾಡುವ ಮೋಹ. ಉಳಿದ ಪ್ರಾಪಂಚಿಕ ಸುಖ ಸಾಧಾರಣ ಅನುಕೂಲ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ. ಆದರೆ ಪ್ರತಿಷ್ಠೆ ಹಾರಿ ಹೋಗುವಂತಹ ಕೆಲ ಕೃತ್ಯಗಳನ್ನು ನೀವೇ ಮಾಡುವ ಯೋಗ. ಮಿತ್ರಸುಖ ಅನುಕೂಲ. ವೆಚ್ಚ ಹೆಚ್ಚು. ಶತ್ರುಗಳೂ ಜೋರಿನಲ್ಲಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಡುವದು. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಉತ್ತರಾಷಾಢಾದ ೪ ನೆ ಮತ್ತು ಶ್ರವಣಾದ ಮೊದಲನೆ ೩ ಚರಣಗಳಿಗೆ ತೊಂದರೆ ಹೆಚ್ಚು.

ಕುಂಭ

ನಿಮ್ಮ ಪ್ರಕೃತಿ ಅನುಕೂಲ. ಆದರೆ ಹೆಂಡತಿಯದು ಕೆಡುವದು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ಉದ್ಯೋಗದಲ್ಲಿ ಪ್ರತಿಷ್ಠೆ, ಪ್ರಗತಿ ಮತ್ತು ಲಾಭ ಬಹಳ ಉತ್ತಮ. ಮಿತ್ರಸುಖ ಉತ್ತಮ. ಹೆಂಡತಿ ಮತ್ತು ಬಂಧು ವರ್ಗದವರು ನಿಮ್ಮ ಪ್ರತಿಯೊಂದು ಕೆಲಸದ ಬಗ್ಗೆ ಬಹಳ ಅಸಮ್ಮತಿಯನ್ನು ತೋರಿಸುತ್ತ ಹೋಗುವದರಿಂದ ಮನಸ್ಸಿನಲ್ಲಿ ವಿಷಾದ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಡುವದು. ಪ್ರವಾಸಾದಿ ಕೆಲಸ ಹಿತದ್ದು. ಧನಿಷ್ಠಾದ ೪ ನೆ ಮತ್ತು ಶತತಾರಿಕೆಯ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೧೪, ೧೫, ೧೬, ೧೭ ಅನುಕೂಲ.

ಮೀನ

ನಿಮ್ಮ ಪ್ರಕೃತಿ ಅನುಕೂಲ. ಆದರೆ ಹೆಂಡತಿಯ ಆರೋಗ್ಯದಲ್ಲಿ ಸ್ವಲ್ಪ ಕುರಕುರಿ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಆದರೆ ವೆಚ್ಚವೂ ವಿಪರೀತ. ಸ್ತ್ರೀ ವರ್ಗದಲ್ಲಿ ಅನಾದರ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳಿಗೆ ಹಾನಿ. ಆದರೆ ಸ್ವತಃಕ್ಕೆ ಯಶಸ್ಸು ಇಲ್ಲವೆ ಲಾಭ ಕಡಮೆ. ಮಿತ್ರರಲ್ಲಿ ವಿರೋಧ. ಪತ್ರವ್ಯವಹಾರಕ್ಕಿಂತ ಪ್ರವಾಸ ಮತ್ತು ಭೆಟ್ಟಿ ಹೆಚ್ಚು ಅನುಕೂಲ. ಉತ್ತರಾಭಾದ್ರಪದದ ೪ ನೆ ಮತ್ತು ರೇವತಿಯ ಮೊದಲನೇ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೧೧, ೧೨, ೧೬, ೧೭ ಅನುಕೂಲ.

ಪ್ರಶ್ನೆ ಪೆಟ್ಟಿಗೆ

ಧಾನ್ಯರೂಪದಲ್ಲಿ ಕಂದಾಯ

ಪ್ರಶ್ನೆ:— ೧ [illegible] ಧಾನ್ಯರೂಪದಲ್ಲಿ [illegible] ಕೊಡಬೇಕು?

ಉತ್ತರ:— [illegible] ಧಾನ್ಯರೂಪದಲ್ಲಿಯೇ [illegible] ಕೊಡಬೇಕಾಗುವದು.

ಪ್ರಶ್ನೆ:— ೨ ಧಾನ್ಯದ [illegible] ಬಂಗಾಲದಲ್ಲಿ [illegible] ಸರಕಾರಕ್ಕೆ [illegible] ಕಡೆಯಬಲ್ಲದು?

ಉತ್ತರ:— ಧಾನ್ಯ [illegible] ಸರಕಾರದವರಿಗೆ [illegible] ಯಾವ ಸರಕಾರವೂ ಈ ಬಗೆಯ ಭಾರವನ್ನು ತಪ್ಪಿಸಿಕೊಳ್ಳಲಾರದು. [illegible] ಸಂಗ್ರಹಿಸಬೇಕಾಗುತ್ತದೆ. [illegible] ಲೋಪದೋಷಗಳನ್ನು [illegible] ಗಳಿರುವವೆಂದು ನಾನು ಹೇಳಬಲ್ಲೆನು.

ಅಲ್ಲದೆ ಈ ಪದ್ಧತಿಯಲ್ಲಿ [illegible] ವಿಕೇಂದ್ರೀಕರಣವು ಅವಶ್ಯವಾಗಿ [illegible] ಗೊಂಡಿದೆ. ಮತ್ತು ಗ್ರಾಮ ಪಂಚಾಯತಿಗಳು, ಶಾಲೆಯ ವ್ಯಾಪಾರಿಗಳು, [illegible] ಮತ್ತು ಸಹಕಾರ ಸಂಸ್ಥೆಗಳು [illegible] ಗಳೊಡನೆ ಯೋಗ್ಯ ವ್ಯವಸ್ಥೆ [illegible] ತನ್ನ ಭಾರವನ್ನು ಸರಕಾರವು ಬಹಳ ಮಟ್ಟಿಗೆ ಕಡಮೆ ಮಾಡಿಕೊಳ್ಳಬಲ್ಲದು.

ಸರಕಾರದವರಿಗೆ ಮತ್ತು ಜನರಿಗೆ [illegible] ರಿಗೂ ಸಹಾಯ ಮಾಡುವ ಉದ್ದೇಶದಿಂದಲೆ ಈ ಸೂಚನೆಯನ್ನು [illegible] ಅವರಲ್ಲಿ ಯಾರೊಬ್ಬರನ್ನು ತೊಂದರೆಗೀಡುಮಾಡಲು ಅಲ್ಲ.

ಮುಂಬಯಿ — [illegible]
೨೧-೯-೪೮ — [illegible]

(ಹರಿಜನದಿಂದ)

ಪುಸ್ತಕ ಪರಿಚಯ

([illegible] ಎರಡು ಪ್ರತಿಗಳನ್ನು ಕಳುಹಿಸಬೇಕು [illegible] -ಸಂ)

ಡಾಲಿಯಾ ಮತ್ತು ಇತರ ಕತೆಗಳು

ಅನುವಾದಕರು, ಅ. ನಾರಾಯಣ ಸ್ವಾಮಿ ಅಯ್ಯರ. ಪ್ರಕಾಶಕರು, ಸತ್ಯ ಶೋಧನ ಪ್ರಕಟನ ಮಂದಿರ, ಕೋಟೆ, ಬೆಂಗಳೂರು ನಗರ. ಪುಟಗಳು ೮೩ ಬೆಲೆ ೧ ರೂಪಾಯಿ.

ಭಾರತದ ಕವೀಂದ್ರರಾದ ರವೀಂದ್ರನಾಥ ಠಾಕೂರರ ಐದು ಕತೆಗಳ ಅನುವಾದದ ಸಂಗ್ರಹ ಗ್ರಂಥವಿದು. ಕವಿ ರವೀಂದ್ರರದು ಸರಳ ಶೈಲಿ. ಕಥೆಯಲ್ಲಿ ತೀರವಾದ ಓಟವಿರುತ್ತದೆ. ವಿಸಂಗತವಾದ ವಿಷಯವಾಗಲಿ, ಅಸಂಭವನೀಯ ದೃಶ್ಯಗಳಾಗಲಿ ಕಥೆಯಲ್ಲಿ ಚಿತ್ರಿಸಲ್ಪಡುವದಿಲ್ಲ. ಡಾಲಿಯಾ ಸಂಗ್ರಹದ ಮೊದಲನೆಯ ಕಥೆ ಐತಿಹಾಸಿಕವಾದುದು. ಔರಂಗಜೇಬನ ಕಾಲದಲ್ಲಿಯ ಐತಿಹಾಸಿಕ ಸನ್ನಿವೇಶವೊಂದರ ಆಧಾರದ ಮೇಲೆ ಈ ಕತೆಯನ್ನು ಸುಂದರವಾಗಿ ಚಿತ್ರಿಸಲಾಗಿದೆ. ಮೋಡ ಮತ್ತು ಬಿಸಿಲು, ಪುಟ್ಟ ಬುದ್ಧಿಯವರ ಪುನರ್ಜನ್ಮ ತಾರಾ ಪ್ರಸನ್ನರ ಕೀರ್ತಿ, ಇವು ಮೂರು ಬಂಗಾಲದ ಆಗಿನ ಸಮಾಜದ ಚಿತ್ರಗಳು. ಕೊನೆಯದಾದ ಜಯ ಪರಾಜಯವೂ ಸುಂದರವಾದ ಕತೆ. ಸಾಮಾಜಿಕ ಕತೆಗಳಲ್ಲಿಯ ಪಾತ್ರಗಳು ಸಾಮಾನ್ಯ ಜೀವನದಲ್ಲಿ ನಮಗೆ ಕಾಣಬರುವಂತಹವೇ. ಕವೀಂದ್ರರು ಕಲ್ಪನಾ ಸಾಮ್ರಾಜ್ಯದಲ್ಲಿಯ ಪಾತ್ರಗಳನ್ನು ಕತೆಯಲ್ಲಿ ಹೆಣೆದಿಲ್ಲ. ಕವೀಂದ್ರರ ಈ ಕತೆಗಳನ್ನು ಅನುವಾದಕರು ಸರಳ ಶೈಲಿಯಲ್ಲಿ ಅನುವಾದಿಸಿದ್ದಾರೆ. ಆದರೆ ಅನುವಾದದಲ್ಲಿ ಭಾಷೆಯ ಮೆರುಗು ಕಂಡುಬರುವದಿಲ್ಲ. ಅಲ್ಲಲ್ಲಿ ನೀರಸವಾಗಿರುವಂತೆಯೂ ಭಾಸವಾಗುತ್ತದೆ. ರವೀಂದ್ರರ ಈ ಕತೆಗಳನ್ನು ಕನ್ನಡಿಗರಿಗೆ ಒದಗಿಸಿದ ಶ್ರೀ ಅ. ನಾರಾಯಣ ಸ್ವಾಮಿ ಅಯ್ಯರರು ಇನ್ನೂ ಇಂತಹ ಕೆಲ ಸಂಗ್ರಹಗಳನ್ನು ಕನ್ನಡಿಗರಿಗೆ ಕೊಡಲಿ.

ಕ್ರಿಸ್ಮಸ್ ಕಾಣಿಕೆ ಮತ್ತು ಇತರ ಕತೆಗಳು

ಸಂಗ್ರಾಹಕರು, ಎಂ. ಹರಿದಾಸರಾವ, ಸಂಪಾದಕ ಸರ್ವೋದಯ ಸಾಹಿತ್ಯ ಮಾಲೆ ಹುಬ್ಬಳ್ಳಿ. ಪುಟಗಳು ೮೩. ಬೆಲೆ ೧ ರೂಪಾಯಿ.

ಕ್ರಿಸ್ಮಸ್ ಕಾಣಿಕೆ ಮತ್ತು ಇತರ ಕತೆಗಳು ಎಂಬ ಈ ಪುಸ್ತಕ ಹುಬ್ಬಳ್ಳಿಯ ಸರ್ವೋದಯ ಸಾಹಿತ್ಯಮಾಲೆಯ ಮೊದಲನೆಯ ಗ್ರಂಥ, ವಿದೇಶದ ಪ್ರಸಿದ್ಧ ಸಾಹಿತಿಗಳ ಕಥೆಗಳನ್ನು ಈ ಗ್ರಂಥದಲ್ಲಿ ಸಂಗ್ರಹಿಸಲಾಗಿದೆ. ಪ್ರತಿಯೊಂದು ಕಥೆಯೂ ಒಂದೊಂದು ವೈಶಿಷ್ಟ್ಯದಿಂದ ಕೂಡಿದೆ. ಕಥೆಗಳಲ್ಲಿ ಬರುವ ಸನ್ನಿವೇಶಗಳು ನಮ್ಮ ಸಮಾಜಕ್ಕೆ ಹೊಸವೆನಿಸಿದರೂ ವಿದೇಶಿಯ ಸಮಾಜ ಪರಿಚಯ ದೃಷ್ಟಿಯಿಂದ ಸನ್ನಿವೇಶಗಳನ್ನು ಇದ್ದಕ್ಕಿದ್ದಂತಿರಿಸಿ ದುದು ಒಳ್ಳೆಯದೇ ಆಗಿದೆ. ಕಥೆಗಳಲ್ಲಡಕವಾದ ತತ್ವಗಳು ಎಲ್ಲರಿಗೂ ಅನ್ವಯಿಸುವಂತಹವು. ಒಂದು ಬಗೆಯಿಂದ ಈ ಸಂಗ್ರಹವು ಉತ್ತಮವಾಗಿದೆಯೆಂದೇ ಹೇಳಬಹುದು. ಒಬ್ಬನೇ ಬರಹಗಾರನ ಕಥೆಗಳನ್ನು ಸಂಗ್ರಹಿಸುವದಕ್ಕಿಂತ ಬೇರೆ ಬೇರೆ ಬರೆಹಗಾರರ ಶೈಲಿ. ವಿಚಾರವಿಧಾನ, ಕಥಾಸನ್ನಿವೇಶಗಳನ್ನರಿಯಲು ಸಾಧ್ಯವಾಗುವಂತೆ ಇಂತಹ ಸಂಗ್ರಹಗಳನ್ನು ಹೊರಡಿಸುವದು ಯಥಾಯೋಗ್ಯವಾಗಿದೆ. ಈ ಸಂಗ್ರಹದಲ್ಲಿಯ ಕ್ರಿಸಮಸ್ ಕಾಣಿಕೆ, ಮುದುಕಿ, ಸೀರಿನ ನಿಕೇತ, ಕೃತಕ ವಜ್ರ ಮೊದಲಾದ ಕೆಲ ಕತೆಗಳಿನ್ನೂ ಅತ್ಯುತ್ತಮವಾಗಿವೆ. ಸಂಗ್ರಾಹಕರಾದ ಶ್ರೀ ಎಂ. ಹರಿದಾಸರಾವ ಅವರು ಆಗಾಗ್ಗೆ ತಮ್ಮ ಮಾಲೆಯ ಮುಖಾಂತರ ಈ ಬಗೆಯ ಸಂಗ್ರಹಗಳನ್ನು ಪ್ರಕಟಿಸಲೆಂದು ಹಾರೈಸೋಣ.

ಸಾದರಸ್ವೀಕಾರ

ಬಾಪೂ (ಗಾಂಧೀಜಿಯ ೬ ಚಿತ್ರಗಳು)

ಪ್ರಕಾಶಕರು, ಸ್ವಾಕ್ಸನ್ ಪ್ರೆಸ್ ೪೩, ಫೋರ್ಟಸ್ಟ್ರೀಟ ಮುಂಬಯಿ ಬೆಲೆ ೧ ರೂ.

Memories of Bapu

(ಚಿತ್ರಗಳು)

ಪ್ರಕಾಶಕರು, ದೇವಿಪ್ರಸಾದ ಶರ್ಮಾ, ಹಿಂದುಸ್ಥಾನ ಟಾಯಿಮ್ಸ ಪ್ರೆಸ್, ನ್ಯೂದಿಲ್ಲಿ (ಹೊಳಪಿನ ದೊಡ್ಡ-ದೊಡ್ಡ ಚಿತ್ರ) ದಪುಟಗಳು ೧೦೦ ಬೆಲೆ ೫ ರೂ.

ಜನತಾ (ವಾರ್ಷಿಕ ಸಂಚಿಕೆ)

ಸಂಪಾದಕರು, ಎ. ಕೇಶವ್. ಅರುಣಾದ ಪಬ್ಲಿಕೇಶನ್ಸ, ಬಸವನಗುಡಿ ಪೋಸ್ಟ, ಬೆಂಗಳೂರು ನಗರ, ಪುಟಗಳು ೮೪. ಬೆಲೆ ೧ ರೂಪಾಯಿ.

ಬೃಂದಾವನ

ಲೇಖಕರು, ಮೈ. ಕೇ. ಅನಂತ ಪದ್ಮನಾಭರಾವ. ಪ್ರಕಾಶಕರು ಶ್ರೀ ಕಾವೇರಿ ಪ್ರಕಟನಾಲಯ, ಮಡಿಕೇರಿ. ಪುಟಗಳು ೫೦. ಬೆಲೆ ೧೨ ಆಣೆ.

ಹೆಮ್ಮೆಗಳು

ಲೇಖಕರು, ಶ್ರೀ. ಜ. ಚನ್ನಬಸವ ರಾಜ ದೇಶಿಕೇಂದ್ರ ಮಹಾಸ್ವಾಮಿಗಳು. ಶ್ರೀ ಜಿಡುಮಾಮಿಡಿ ಶ್ರೀಶೈಲ ಸಂಸ್ಥಾನ ಗುಳೂರು. ಪ್ರಕಾಶಕರು, ಜ. ಸಿ. ಪ್ರಬೋಧ ಪುಸ್ತಕ ಮಾಲೆ ಜಿ. ವಿ. ಛತ್ರ, ಚಿಕ್ಕ ಪೇಟೆ, ಬೆಂಗಳೂರು ನಗರ. ಪುಟಗಳು ೫೦ ಬೆಲೆ ೧೦ ಆಣೆ

ಹೊಂಗನಸುಗಳು

(ಶ್ರೀಕಂಠಮಾಲೆ ೨— ವಿಶ್ವಸಾಹಿತ್ಯ ಮಾಲೆ ೭) ಲೇಖಕರು, 'ಶ್ರೀ' ಪ್ರಕಾಶಕರು, ವಿಶ್ವಸಾಹಿತ್ಯ, ಮೈಸೂರು. ಪುಟಗಳು ೪೩. ಬೆಲೆ ೧೨ ಆಣೆ.

ಪಡುವಣ

ಲೇಖಕರು, ಶೀ. ಪ. ಸು. ಭಟ್ಟ. ಪ್ರಕಾಶಕರು, ಕರ್ಣಾಟಗ್ರಂಥಮಾಲೆ ಗೋಕರ್ಣ. ಪುಟಗಳು ೪೭ ಬೆಲೆ ೧೦ ಆಣೆ.

ಸಂಧ್ಯಾರಹಸ್ಯ

ಲೇಖಕರು, ಪಂಡಿತ ಗೋಪಾಲಾಚಾರ್ಯ ಮಾಹುಲಿ, ಎಂ ಎ. ಪ್ರಕಾಶಕರು, ಡಾ ದಿ ಜಿ. ದೇಶಪಾಂಡೆ ಗೌರವ ಕಾರ್ಯದರ್ಶಿ, ಕರ್ನಾಟಕ ಬ್ರಾಹ್ಮಣ ಶಿಕ್ಷಣ ಸಂಘ, ವಾಣೀ ವಿಹಾರ ವಿದ್ಯಾಲಯ, ಮಾತುಂಗಾ, ಮುಂಬಯಿ. ಪುಟಗಳು, ೭೪, ಬೆಲೆ ಕಾಣಿಸಿಲ್ಲ.

ಆಧುನಿಕ ಮಾನವನ ಹೋರಾಟ

ಬರೆದವರು, ಎಫ್. ಜಿ. ಪಿಯರ್ಸ. ಪ್ರಕಾಶಕರು, ಆಕ್ಸಫರ್ಡ ಯುನಿವರ್ಸಿಟಿ ಪ್ರೆಸ್, ಮದ್ರಾಸ. ಪುಟಗಳು, ೧೫೮ ಬೆಲೆ ೧ರೂ. ೧೨ ಅ. ಶಾಲೆಯಲ್ಲಿ ಉಪಯೋಗಿಸಲು ತಕ್ಕದಾಗಿದೆಂದೂ ಹೇಳಬಹುದು.

ವಿಷ ಪುರುಷ

ಮಿಸೂರಿ (ಅಮೇರಿಕೆ) ಯಲ್ಲಿ ಸ್ಪರ್ಶ ಮಾತ್ರದಿಂದ ಹೇನು, ಕುರಿಗಳ ಮೈಮೇಲಿರುವ ಉಣ್ಣೆ ಇವುಗಳನ್ನು ಕೊಲ್ಲಬಲ್ಲ ಮನುಷ್ಯನಿದ್ದಾನೆ. ಅವನ ತಲೆಯಲ್ಲಿ ಈ ಜಂತುಗಳನ್ನು ತಂದಿಟ್ಟು ಅವು ತಕ್ಷಣ ಸಾಯುವದನ್ನು ಮಿಸೂರಿ ವಿಶ್ವವಿದ್ಯಾಲಯದ ಅಧ್ಯಾಪಕ ರೋಲಂಡ ಪೋರ್ಟರ ಮನ್ನರು ಸ್ವತಃ ಕಂಡಿದ್ದಾರೆ. ಅವನ ಬೆವರಿನ ವಾಸನೆಯೇ ಉಣ್ಣೆಗಳಿಗೆ ಮೃತ್ಯುಕ್ರಾಯವಾಗುತಿದೆಯೆಂದು ಗೊತ್ತಾಗಿದ್ದರೂ ಹಾಗೆ ಏಕಾಗಬೇಕೆಂದು ವಿಜ್ಞಾನಿಗಳಿಗೆ ಇನ್ನೂ ಬಗೆಹರಿದಿಲ್ಲ.

ವಾರದ ಕತೆ

(೨ನೇ ಪುಟದಿಂದ)

ಕೆಲಸಗಳನ್ನೂ ನಿಯಮಿತ್ಯಂತ ಮಿಕ್ಕ ಮಾಡಿದರು." ಮಾಲತೀದೇವಿಯು ತನ್ನ ಅಭಿಪ್ರಾಯವನ್ನು ಮುಕ್ತಸ್ಪಷ್ಟತನದಿಂದ ಹೇಳಿದಳು.

ಮಹಿಳೆಯರು ಹೀಗೆ ತಮ್ಮ ಮನೆಗೆಲಸದ ಹುಡುಗರ ಕುರಿತು ಮಾತನಾಡುತ್ತಿದ್ದಾಗಲೇ ಆ ಸಮಾಜವಾದೀ ಕಾರ್ಯಕರ್ತರೂ ಇಂದಿನ ಸಭಾಧ್ಯಕ್ಷರೂ ಆಗಮಿಸಿದರು. ರಂಗುರಂಗಿನ ಉತ್ತಮ ಪೋಷಾಕುಗಳಿಂದ ಪತಂಗಗಳಂತೆ ಕಾಣುತ್ತಿದ್ದ ಆ ಮಹಿಳೆಯರ ಮೇಳದಲ್ಲಿ, ಅವರ ಸಾದಾ ಶುಭ್ರ ಖಾದೀ ಪೋಷಾಕು ಎದ್ದು ಕಾಣುತ್ತಿತ್ತು. ಸಮಾರಂಭಕ್ಕೆ ಸುರುವಾಯಿತು. "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಪ್ರಾರ್ಥನೆಯೊಡನೆ, ಅಧ್ಯಕ್ಷರ ಪರಿಚಯ, ಅಧ್ಯಕ್ಷಪದ ಸ್ವೀಕಾರ, ರಮಾಬಾಯಿಯವರ ಈ ವರೆಗಿನ ಕಾರ್ಯದ ವಿವರಣೆ ಮೊದಲಾದುವು ಯಥಾಪ್ರಕಾರವಾಗಿ ಸಾಂಗವಾದವು. ನಂತರ ಅಧ್ಯಕ್ಷರು ಒಳ್ಳೇ ಮಾರ್ಮಿಕ ಮತ್ತು ಬೋಧಪ್ರದವಾದ ಭಾಷಣವನ್ನು ಮಾಡಿದರು.—

"ಭಗಿನಿಯರೇ, ರಮಾಬಾಯಿಯವರ ಈ ಆದರ್ಶ ಕಾರ್ಯವನ್ನು ನೋಡಿ ನಿಮಗೂ ಸಮಾಜ ಸೇವಾ ಕಾರ್ಯವನ್ನು ಮಾಡುವ ಸ್ಫೂರ್ತಿ ಬಂದಿರಬಹುದೆಂದು ಭಾವಿಸುವೆ. ಪ್ರತ್ಯಕ್ಷವಾಗಿ ನಿಮಗೆ ಹೊರಗೆ ಹೋಗಿ ಕಾರ್ಯ ಮಾಡಲು ಅನುವು ಲಭಿಸದಿದ್ದರೂ ನಿಮ್ಮ ಸ್ವಂತ ಮನೆಗಳಲ್ಲಿಯಾದರೂ ನೀವು ನಿಮ್ಮ ಕಾರ್ಯಮಾಡಲು ಮರೆಯಬೇಡಿರಿ. ನಿಮ್ಮಲ್ಲಿ ಹಲವರಲ್ಲಿ ಕೆಲಸಕ್ಕೆಂದು ಚಿಕ್ಕ ಹುಡುಗರನ್ನು ಇಟ್ಟುಕೊಂಡಿರಬಹುದು. ಅವರು ಮೂಕ ಪಶುಗಳಂತೆ ದುಡಿಯುತ್ತಾರೆ. ಅವರಿಗೆ ವಿದ್ಯಾಭ್ಯಾಸ ಮಾಡಿಸುವ ಪ್ರಯತ್ನವನ್ನು ನೀವು ಎಂದಾದರೂ ಮಾಡಿದ್ದೀರಾ? ಅವರು ವಿದ್ಯೆ ಕಲಿಯುವಂತೆ ಅನುಕೂಲತೆಗಳನ್ನಾದರೂ ಕಲ್ಪಿಸಿ ಕೊಟ್ಟಿದ್ದೀರಾ? ಅವರ ಉಪಕಾರಗಳಿಂದಾಗಿಯೆ ನೀವು ಹೊರಗೆ ಹೋಗಿ ಆನಂದದಿಂದ ತಿರುಗಾಡಿ ಬರುತ್ತಿಲ್ಲವೆ? ಆದರೆ ನೀವು ಅವರನ್ನು ಎಷ್ಟು ಕಠಿಣತೆಯಿಂದ ಕಾಣುತ್ತೀರಿ! ಅವರ ವಯಸ್ಸು ಸಣ್ಣದು, ಮನಸ್ಸು ಸಣ್ಣದು, ಅವರ ಭಾವನೆಯನ್ನು ನೀವು ಎಂದಾದರೂ ವಿಚಾರಿಸಿದ್ದೀರಾ? ಅವರ ಹೆಸರಿನಿಂದಾದರೂ ಅವರನ್ನು ಕರೆಯುತ್ತೀರಾ? ಅವರನ್ನು 'ಶೀನು' 'ಗೋಪು" ಇತ್ಯಾದಿಯಾಗಿ ತುಚ್ಛತೆಯಿಂದ ಕೂಗುತ್ತೀರಿ. ಸರ್ವರಿಂದಲೂ ರಮಾಬಾಯಿಯವರಷ್ಟು ಸಮಾಜ ಕಾರ್ಯ ಮಾಡಲಾಗದಿದ್ದರೂ, ತಮ್ಮ ಮನೆಗಳಲ್ಲಿದ್ದ ಬಡ ಅನಾಥ ಹುಡುಗರನ್ನು ಗೃಹಿಣಿಯರು ಕಳಕಳಿಯಿಂದ ಮತ್ತು ಆಸ್ಥೆಯಿಂದ ನೋಡಿಕೊಂಡು ಸಾಕ್ಷರತಾ-ಪ್ರಚಾರ ಮತ್ತು ಅವರ ಏಳ್ಗೆಯ ಕಾರ್ಯ ಮಾಡಿದರೆ ಅದುವೇ ಸಮಾಜೋದ್ಧಾರದ ಪ್ರಥಮ ಮಾರ್ಗವಾದೀತು"

—ಅಧ್ಯಕ್ಷರ ಭಾಷಣವಾಗುತ್ತಿದ್ದಾಗ ಪ್ರತಿಯೊಬ್ಬ ಸ್ತ್ರೀಗೂ ಇವರು ತನಗೇ ಚುಚ್ಚಿ ನುಡಿಯುತ್ತಿದ್ದಾರೋ ಏನೋ ಎಂದು ನಾಚಿಕೆಯಾಗುತ್ತಿತ್ತು. "ಹೇಗೆ ಬಹಳ ನಿಶ್ಚಯವಾಗಿ ಹೇಳುತ್ತಾರೆ" ಯೆಂದು ಅಧ್ಯಕ್ಷರ ಕಡೆಗೆ ಗೋಣನ್ನು ಎತ್ತಿ ಪ್ರತಿಯೊಬ್ಬ ಸ್ತ್ರೀಯೂ ಕುತೂಹಲದಿಂದ ನೋಡುತ್ತಿದ್ದಳು. ತಾವು ನಿಜವಾಗಿಯೂ ಅನ್ಯಾಯ ಮಾಡುತ್ತಿದ್ದೇವೆಂದು ಅವರಿಗೆ ಮನಸ್ಸು ಕೊರೆಯುತ್ತಿದ್ದಿತು. ಎಲ್ಲರೊಡನೆ ರಮಾಬಾಯಿಯವರ ಮನಸ್ಸು ನಾಚಿಕೆಯಿಂದಲೂ ಅಪಮಾನದಿಂದಲೂ ಚಂಚಲವಾಯಿತು. ಅಧ್ಯಕ್ಷರ ಭಾಷಣದಿಂದ ಅವರಲ್ಲಿ ತೀವ್ರ ಪರಿಣಾಮವಾಯಿತು. ಇಂದಿನ ಸನ್ಮಾನಕ್ಕೆ ತಾನು ಅಯೋಗ್ಯಳೆಂದು ಬಾಯಿಯವರಿಗೆ ಖಾತ್ರಿಯಾಯಿತು. ಅವರ ಮನಸ್ಸು ಅಸ್ವಸ್ಥವಾಯಿತು. ತಾನು ಯಾರ ನೆರವಿನಿಂದಾಗಿ ಈ ಸಮಾಜ ಕಾರ್ಯದಲ್ಲಿ ಯಶಸ್ಸು ಗಳಿಸಿದೆನೋ ಅದರ ನಿಜವಾದ ಶ್ರೇಯಸ್ಸು ಶೀನುವಿನದು. ಆದರೆ ತಾನು ಆ ಶೀನುವಿಗಾಗಿ ಏನು ಮಾಡಿದೆ? ಅವನಿಗೆ ತಾನು ಒಂದು ಅಕ್ಷರವನ್ನಾದರೂ ಕಲಿಸಿದೆನೆ? ತಾನು ಅವನಲ್ಲಿ ಎಷ್ಟು ಕಠೋರವಾಗಿ ವರ್ತಿಸಿದೆ! ಅವನ ನಿಜವಾದ ಹೆಸರು ಕೂಡ ತನಗೆ ಗೊತ್ತಿಲ್ಲ. ಅಂತೂ ಸಭೆಯ ಕಾರ್ಯಕಲಾಪಗಳನ್ನು ಪೂರ್ಣಗೊಳಿಸಿ ರಮಾಬಾಯಿಯವರು ಮನೆಗೆ ಬಂದರು. ಒಳಗೆ ಬರುಬರುತ್ತಲೇ ಶೀನುವನ್ನು ಮತ್ತೆ ಮತ್ತೆ ಕೂಗಿ ಕರೆದರು, "ಶೀನೂ" ಎಂದು

ಅವರೆ ಯಜಮಾನಿಯ ಧ್ವನಿ ಕೇಳುತ್ತಲೇ ಏನಿದ್ದರೂ ಅಲ್ಲಿಯೇ ಬಿಟ್ಟು ಪುಟಿಚೆಂಡಿನಂತೆ ಬಂದು ಬಾಗಿನಿಲ್ಲುವ ಶೀನು ಇಂದು ಎಷ್ಟು ಸಲ ಕೂಗಿದರೂ ಅದೇಕೊ ಬರಲೊಲ್ಲ. ಹೀಗೇಕೆಂದು ರಮಾಬಾಯಿಯವರು ಹುಡುಗನನ್ನು ಹುಡುಕಿನೋಡಲು ಹಿತ್ತಲಮನೆಯ ಹಸವಿನ ಮನೆಯ ಮೂಲೆಯೊಂದರಲ್ಲಿ ಶೀನು ಮಲಗಿ ನರಳುತ್ತಿದ್ದಾನೆ. ಅವನ ಮೈದಡವಿ ಏನೆಂದು ವಿಚಾರಿಸಲಾಗಿ ಮನೆಯ ದುಡಿತ ಅಂದು ಎಂದಿಗಿಂತ ಹೆಚ್ಚಾಗಿ ತಲೆ ನೋಯ ತೊಡಗಿತೆಂದೂ ಇನ್ನು ಓಡಾಡುವದು ಅಸಾಧ್ಯವೆನಿಸಿ ಇಲ್ಲಿಗೆ ಬಂದು ಮಲಗಿದನೆಂದೂ ಆ ಮೇಲೆ ಮೈಯೂ ಕಾಯ್ದು ಬಳಲಿಕೆ ಹೆಚ್ಚಾಗಿ ಈಗ ನರಳಿದನೆಂದೂ ತಿಳಿಯಿತು.

ಎಂದೂ ಇಲ್ಲದ ಮರುಕದಿಂದ ರಮಾಬಾಯಿ ಶೀನೂನ ಮೈ ಮೇಲೆ ಕೈಯಾಡಿಸಿ ಪ್ರೀತಿಯ ಸ್ವರದಲ್ಲಿ, ಶೀನೂ ಮೈಗೆ ಬಳಲಿಕೆಯಾದರೆ ಒಳಗೆ ಕೋಣೆಯಲ್ಲಿಯೇ ಹಾಸಿಗೆಯಲ್ಲಿಯೇಕೆ ಮಲಗಲಿಲ್ಲ?

ಮೊನ್ನೆ ತೂಕಡಿಸಿ ನನಗೂ ತಿಳಿಯದೆ ಕೋಣೆಯಲ್ಲಿ ನೆಲದ ಮೇಲೆ ನಿದ್ದೆ ಹೋದಾಗ ರಾಜಕುಮಾರನಹಾಗೆ ಇಲ್ಲೇಕೆ ಮಲಗಿದೆ ಎಲ್ಲಿಬೇಕು ಅಲ್ಲಿ ಮಲಗಿಬಿಡುವದೆ ಎಂದು ನೀವೇ ಗದ್ದರಿಸಿದ್ದಿರಿ. ಎಂದೇ ಒಣಹುಲ್ಲು ಬೆಚ್ಚಗೆನಿಸಿ ಇಲ್ಲಿಯೇ ಮಲಗಿದೆ. ನಿಮ್ಮ ಊಟಕ್ಕೆ ಎಲ್ಲ ಸರಿಪಡಿಸಿದ್ದೆ. ಊಟವಾಗಿದ್ದರೆ ಬಂದು ಎಂಜಲು ಎತ್ತುತ್ತೇನೆ. ಇನ್ನು ಮೇಲೆ ಹೀಗೆ ಇನ್ನೊಮ್ಮೆ ಮಲಗುವದಿಲ್ಲ ಎಂದು ಹೆದರಿಕೆಯಲ್ಲಿ ಬಡಬಡಿಸಿದನು.

ಹೆದರಿಕೊಳ್ಳಬೇಡ ಮಗು, ಇನ್ನು ನೀನು ಹೀಗೆ ಹೆದರುವ ಕಾರಣವಿಲ್ಲ. ನೀನೂ ಇನ್ನು ಮೇಲೆ ನನ್ನೊಬ್ಬ ಮಗನಾಗಿ ಬಾಳು. 'ಮೈಗೆ ಸಮನೆನಿಸುತ್ತಲೇ ನೀನೂ ಶಾಲೆಗೆ ಹೋಗು ಮನೆಗೆಲಸಕ್ಕೆ ಮತ್ತಾರನ್ನಾದರೂ ನೋಡೋಣವಂತೆ ಎಂದು ಸಂತೈಸಿ ಎತ್ತಿತಂದು ಬಿಚ್ಚನೆಯ ಹಾಸುಗೆಯಲ್ಲಿ ಅವನನ್ನು ಮಲಗಿಸಿದರು.

ಶೀನೂಗೆ ಇದೆಲ್ಲ ಸ್ವಪ್ನವಾಗಿ ತೋರಿತೊ ಏನೋ. ಸಭೆಯಲ್ಲಿ ಸಮಾಜ ಸುಧಾರಣೆಯ ದೊಡ್ಡ ಮಾತುಗಳನ್ನು ತಲೆಯಲ್ಲಿ ತುರುಕಿಕೊಂಡುಬಂದ ರಮಾಬಾಯಿಯವರಾದರೂ ಇದನ್ನೆಲ್ಲ ಕನಸಿನಲ್ಲಿ ಹೇಳಿರಲಿಕ್ಕಿಲ್ಲವಷ್ಟೆ!

ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಮೊಹರೆಯವರು ಮುದ್ರಿಸಿ ಪ್ರಕಟಿಸಿದರು.